

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 7 ಭಾನುವಾರ 2024

ಸಂಪುಟ: 44 | ಸಂಚಿಕೆ: 349 | ಪುಟಗಳು: 12


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಉಗ್ರರು ದಾಳಿ ಮಾಡಿ ಪಾಕಿಸ್ತಾನ ಹೊಕ್ಕಿದರೆ ಅಲ್ಲಿಗೇ ನುಗ್ಗಿ ಹೊಡೆಯುತ್ತೇವೆ




ನವದೆಹಲಿ, ಏ.6– ಭಯೋತ್ಪಾದಕರು ಭಾರತದಲ್ಲಿ ಶಾಂತಿ ಕದಡಲು ಯತ್ನಿಸಿದರೆ ಅಥವಾ ಭಯೋತ್ಪಾದನಾ ಚಟುವಟಿಕೆಗಳನ್ನು ನಡೆಸಿದರೆ, ತಕ್ಕ ಪ್ರತ್ಯುತ್ತರ ನೀಡಲಾಗುವುದು. ಅವರು ಪಾಕಿಸ್ತಾನಕ್ಕೆ ಓಡಿಹೋದರೆ, ನೆರೆಯ ದೇಶಕ್ಕೂ ನುಗ್ಗಿ ಹೊಡೆಯುತ್ತೇವೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. 2019ರ ನಂತರ ಭಾರತೀಯ ಗುಪ್ತಚರ ಸಂಸ್ಥೆಗಳು ಪಾಕಿಸ್ತಾನದಲ್ಲಿ ಭಯೋತ್ಪಾದಕರ ಹತ್ಯೆ ನಡೆಸಿವೆ ಎಂದು ಬ್ರಿಟಿಷ್ ಪತ್ರಿಕೆ 'ದಿ ಗಾರ್ಡಿಯನ್' ವರದಿ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ರಕ್ಷಣಾ ಸಚಿವರು, 'ನೆರೆಯ ದೇಶದ ಭಯೋತ್ಪಾದಕರು ಭಾರತದಲ್ಲಿ ಶಾಂತಿ ಕದಡಲು ಪ್ರಯತ್ನಿಸಿದರೆ ಅಥವಾ ಭಾರತದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಲು ಪ್ರಯತ್ನಿಸಿದರೆ ನಾವು ಅವರಿಗೆ ತಕ್ಕ ಪ್ರತ್ಯುತ್ತರ ನೀಡುತ್ತೇವೆ' ಎಂದು ಹೇಳಿದರು.

ಮಾಜಿ ಪ್ರಧಾನಿ ದೇವೇಗೌಡರಿಂದ ಚುನಾವಣಾ ಆಯೋಗಕ್ಕೆ ಪತ್ರ ಹಿನ್ನೆಲೆ

ರಾಜ್ಯಕ್ಕೆ ಕೇಂದ್ರ ಪಡೆ

ರಾಜ್ಯದಲ್ಲಿ ಬೀಡು ಬಿಟ್ಟಿರುವ ಸಿಐಎಸ್‌ಎಫ್ 16 ತುಕಡಿ; ಅಧಿಕಾರಿಗಳ ತಂಡ



ಬೆಂಗಳೂರು, ಏ.6(ಕೆಎಂಶಿ)– ಆಡಳಿತಾರೂಢ ಕಾಂಗ್ರೆಸ್, ಲೋಕಸಭಾ ಚುನಾವಣೆಯಲ್ಲಿ ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ, ಅಕ್ರಮ ತಡೆಗಟ್ಟಲು ಕೇಂದ್ರ ಚುನಾವಣಾ ಆಯೋಗ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ(ಸಿಐಎಸ್‌ಎಫ್) ಹಾಗೂ ಅಧಿಕಾರಿಗಳ ತಂಡವನ್ನು ಕರ್ನಾಟಕಕ್ಕೆ ಕಳುಹಿಸಿದೆ.

ಕೆಲವು ಕಾಂಗ್ರೆಸ್ ಅಭ್ಯರ್ಥಿಗಳು ಮತ ಪಡೆಯಲು ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅದರಲ್ಲೂ ಕೆಲವು ಜಿಲ್ಲೆಗಳಲ್ಲಿ ಇಡೀ ಆಡಳಿತವೇ ಆ ಪಕ್ಷದ ಅಭ್ಯರ್ಥಿಗಳ ಬೆನ್ನಿಗೆ ನಿಂತಿದೆ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಕೇಂದ್ರ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದರು. ಬೆಂಗಳೂರು ಗ್ರಾಮಾಂತರ, ಹಾಸನ, ಮಂಡ್ಯ, ಮೈಸೂರು–ಕೊಡಗು ಸೇರಿದಂತೆ ಕೆಲವು ಕ್ಷೇತ್ರಗಳಲ್ಲಿ ಅಧಿಕಾರಸ್ಥರು ಆಡಳಿತ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಮತದಾರರನ್ನು ಓಲೈಸಿಕೊಳ್ಳಲು ಹಣ ಸೇರಿದಂತೆ ಉಡುಗೊರೆಗಳನ್ನು ಯಥೇಚ್ಛವಾಗಿ ನೀಡುತ್ತಿದ್ದಾರೆ. ಈ ಬಗ್ಗೆ ಸ್ಥಳೀಯ ಜಿಲ್ಲಾ ಆಡಳಿತಕ್ಕೆ ಮತ್ತು ಜಿಲ್ಲಾಧಿಕಾರಿಗಳಿಗೆ ನಾವು ನೀಡಿದ ದೂರಿಗೆ ಕಿಂಚಿತ್ತೂ ಬೆಲೆಯಿಲ್ಲ. ತಕ್ಷಣವೇ ಮಧ್ಯೆ ಪ್ರವೇಶ ಮಾಡಿ ಆಮಿಷಗಳನ್ನು ಒಡ್ಡುವುದನ್ನು ನಿಯಂತ್ರಿಸಿ. ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗೆ ಅವಕಾಶ ಮಾಡಿಕೊಡ ಬೇಕೆಂದು ದೂರು ನೀಡಿದ್ದರು. ತದನಂತರ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿದ್ದ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಕಾಂಗ್ರೆಸ್ ಹೇಗೆ ಆಡಳಿತವನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ, ಮತದಾರರನ್ನು ಓಲೈಸಿಕೊಳ್ಳಲು ದೊಡ್ಡ ಪ್ರಮಾಣದಲ್ಲಿ ಆಮಿಷಗಳನ್ನು ಅವರ ಅಭ್ಯರ್ಥಿಗಳು ಒಡ್ಡುತ್ತಿದ್ದಾರೆ ಎಂಬುದೂ ಸೇರಿದಂತೆ ಕೆಲವು ಸೂಕ್ಷ್ಮ ಮಾಹಿತಿಗಳನ್ನು ಕೇಂದ್ರ ಸಚಿವ ಷಾ ಅವರ ಗಮನಕ್ಕೆ ತಂದಿದ್ದರು.

ಅಷ್ಟೇ ಅಲ್ಲ ಕೆಲವು ಕ್ಷೇತ್ರಗಳಲ್ಲಿ ಬಿಜೆಪಿಯ ಕೆಲವು ನಾಯಕರೇ, ಕಾಂಗ್ರೆಸ್ ಮುಖಂಡರ ಜೊತೆ ಶಾಮೀಲಾಗಿರುವ ಬಗ್ಗೆ ವಿವರಣೆ ನೀಡಿದ್ದರು. ಷಾ ಅವರು ದೆಹಲಿಗೆ ಹಿಂತಿರುಗುತ್ತಿದ್ದಂತೆ, ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ಬಿಜೆಪಿ ಮುಖಂಡರಿಗೆ ಚಾಟಿ ಬೀಸುವ ಕೆಲಸ ಮಾಡಿದರು. ಮತ್ತೊಂದೆಡೆ ಕೇಂದ್ರ ಚುನಾವನಾ ಆಯೋಗ ದೇವೇಗೌಡರು ಬರೆದ ದೂರಿನ ಪ್ರತಿಯನ್ನು ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಗಳಿಗೆ ರವಾನೆ ಮಾಡಿ ಈ ಬಗ್ಗೆ ತನಿಖೆ ನಡೆಸಿ ಕಠಿಣ ಕ್ರಮ ಜರುಗಿಸುವಂತೆ ಸೂಚಿಸಿತ್ತು. ಇದಾದ ನಂತರ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ 16 ತುಕಡಿ ರಾಜ್ಯಕ್ಕೆ ಬಂದಿಳಿದಿದೆ. ಅವುಗಳನ್ನು ಇನ್ನೂ ಯಾವುದೇ ಕ್ಷೇತ್ರಕ್ಕೆ ನಿಯೋಜನೆ ಮಾಡಿಲ್ಲ. ದೂರುಗಳ ಹಿನ್ನೆಲೆಯಲ್ಲಿ ಸೂಕ್ಷ್ಮ ಹಾಗೂ ಪ್ರಭಾವೀ ಕ್ಷೇತ್ರಗಳಿಗೆ ಕೇಂದ್ರ ಪಡೆಗಳನ್ನು ನಿಯೋಜಿಸಲಿದ್ದಾರೆ.



ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆದ ಬಡ ಮಕ್ಕಳ ಹೊರಗಟ್ಟಿ ನಕಲಿ ದಾಖಲೆ ಮೂಲಕ 84 ಲಕ್ಷ ಗುಳುಂ

● ಹುಣಸೂರು ಹಿಂದುಳಿದ ವರ್ಗಗಳ ಬಾಲಕರ ವಿದ್ಯಾರ್ಥಿನಿಲಯದಲ್ಲಿ ವಾರ್ಡನ್, ಇತರರು ಸೇರಿ ಮಹಾ ವಂಚನೆ ● ನಾಲ್ಕು ವರ್ಷಗಳಿಂದ 100 ಮಕ್ಕಳ ಹೆಸರಲ್ಲಿ ಲಕ್ಷಾಂತರ ರೂ. ನುಂಗಿ ನೀರು ಕುಡಿದ ನೀಚ ಕೃತ್ಯ



ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಡಾ.ಸಿ.ಕೆ.ಜಗದೀಶ್ ಕುಮಾರ್ ಪರಿಶೀಲನೆ ನಡೆಸಿ, ವಿದ್ಯಾರ್ಥಿಗಳ ಹೆಬ್ಬೆಟ್ಟಿನ ನಕಲಿ ಗುರುತು, ದಾಖಲೆ ವಶಪಡಿಸಿಕೊಳ್ಳುತ್ತಿರುವುದನ್ನು ಕಾಣಬಹುದು.

ಹುಣಸೂರು, ಏ.6–ಇದು ಬಡ ವಿದ್ಯಾರ್ಥಿಗಳ ಅನ್ನಕ್ಕೆ ಕನ್ನ ಹಾಕಿದ ನೀಚ ಪ್ರಕರಣ. ಹುಣಸೂರಿನ ಸಾರಿಗೆ ಬಸ್ ಡಿಪೋ ಹಿಂಭಾಗವಿರುವ ಮೆಟ್ರಿಕ್ ನಂತರದ ಹಿಂದುಳಿದ ವರ್ಗಗಳ ಬಾಲಕರ ವಿದ್ಯಾರ್ಥಿನಿಲಯದ ವಾರ್ಡನ್ ಹಾಗೂ ಇತರರು 100 ವಿದ್ಯಾರ್ಥಿಗಳ ಅನುದಾನ ಸುಮಾರು 84 ಲಕ್ಷ ರೂ.ಗಳನ್ನು ಗುಳುಂ ಮಾಡಿದ್ದಾರೆ. ವಾರ್ಡನ್ ಮತ್ತಿತರರು ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ ಪಡೆದಿದ್ದ ವಿದ್ಯಾರ್ಥಿ ಗಳನ್ನೇ ಹೊರಗಟ್ಟಿ ಅವರ ಬಯೋ ಮೆಟ್ರಿಕ್ ಅನ್ನು ನಕಲು ಮಾಡಿ, 4 ವರ್ಷ ಕಾಲ ಹಣ ಲಪಟಾಯಿಸಿದ್ದು, ಇದೀಗ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಡಾ.ಸಿ.ಕೆ.ಜಗದೀಶ್ ಕುಮಾರ್ ●9ನೇ ಪುಟಕ್ಕೆ



ಎಂದೂ ಒಕ್ಕಲಿಗರ ಬಗ್ಗೆ ಸಹಾನುಭೂತಿ ಇಲ್ಲದ ಸಿಎಂ ಸಿದ್ದರಾಮಯ್ಯ

ಲಕ್ಷ್ಮಣನ ಹರಕೆ ಕುರಿ ಮಾಡಿದ್ದಾರೆ...!

● ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಗಂಭೀರ ಆರೋಪ ● ಸಿಎಂ ಸಿದ್ದರಾಮಯ್ಯ ತಮ್ಮ ಮಗನನ್ನೇ ಏಕೆ ನಿಲ್ಲಿಸಲಿಲ್ಲ! ● ರೈತರ ಪರ ಆಡಳಿತ ನೀಡಿದ ಕುಮಾರಸ್ವಾಮಿ; ಜನರ ಸೇವೆಗೆ ಜೀವನ ಮುಡುಪಾಗಿಟ್ಟ ರಾಜಮನೆತನದ ಯದುವೀರ್ ಗೆಲ್ಲಿಸಲು ಮನವಿ



ಕೆಆರ್ ನಗರದಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಜಂಟಿ ಸುದ್ದಿಗೋಷ್ಠಿ ನಡೆಸಿದರು.

ಕೆ.ಆರ್.ನಗರ, ಏ.6– ಎಂದೂ ಒಕ್ಕಲಿಗರ ಬಗ್ಗೆ ಕಿಂಚಿತ್ತೂ ಸಹಾನುಭೂತಿ ತೋರಿಸದ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಸಂಪುಟದ ಸಚಿವರು ಈಗ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಅಮಾಯಕ ಎಂ.ಲಕ್ಷ್ಮಣನನ್ನು ನಿಲ್ಲಿಸುವ ಮೂಲಕ ಹರಕೆ ಕುರಿ ಮಾಡಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಆರೋಪಿಸಿದ್ದಾರೆ.

ಪಟ್ಟಣದ ತಮ್ಮ ನಿವಾಸದಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರೊಡಗೂಡಿ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕ್ಷೇತ್ರದಲ್ಲಿ ಗೆಲ್ಲುವ ವಿಶ್ವಾಸವಿದ್ದಿದ್ದರೆ ಸಿದ್ದರಾಮಯ್ಯ ತನ್ನ ಮಗನನ್ನೇಕೆ ನಿಲ್ಲಿಸಲಿಲ್ಲ ಅಥವಾ ಬೇರೊಬ್ಬ ಬಲಿಷ್ಠ ಅಭ್ಯರ್ಥಿಯನ್ನು ಏಕೆ ನಿಲ್ಲಿಸಲಿಲ್ಲ ಎಂದು ಪ್ರಶ್ನಿಸಿದ ಅವರು, ಇದು ಬೇರೆಯವರನ್ನು ಬಾವಿಗೆ ತಳ್ಳಿ ದಡದಲ್ಲಿ ನಿಂತು ಕೇಕೆ ಹಾಕುವ ನಿಮ್ಮಂತಹ (ಸಿದ್ದರಾಮಯ್ಯ) ನಾಯಕರಿಗೆ ಈ ಚುನಾವಣೆ ತಕ್ಕ ಶಾಸ್ತಿ ಮಾಡಲಿದೆ ಎಂದು ಕಿಡಿಕಾರಿದರು. ಮಂಡ್ಯದಿಂದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮತ್ತು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಗೆಲ್ಲಿಸಿ ಲೋಕಸಭೆಗೆ ಕಳುಹಿಸುವ ಮೂಲಕ ರಾಜ್ಯದ ಹಿರಿಮೆ ಎತ್ತಿ ಹಿಡಿಯಬೇಕು ಎಂದು ಅವರು ಹೇಳಿದರು. ●9ನೇ ಪುಟಕ್ಕೆ

ಗ್ಯಾರಂಟಿ 5 ವರ್ಷ ವಾರಂಟಿ

ಮುಳುಬಾಗಿಲು ಐತಿಹಾಸಿಕ ಕುರುಡುಮಲೆ ಗಣೇಶನಿಗೆ ಪೂಜೆ ಸಲ್ಲಿಸಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಚುನಾವಣಾ ಪ್ರಚಾರ ರಣಕಹಳೆ

ಬೆಂಗಳೂರು, ಏ.6(ಕೆಎಂಶಿ)–20 ಲೋಕಸಭಾ ಕ್ಷೇತ್ರಗಳನ್ನು ಗೆಲ್ಲುವ ಗುರಿಯೊಂದಿಗೆ ಕಾಂಗ್ರೆಸ್ ಚುನಾವಣಾ ಪ್ರಚಾರಕ್ಕೆ ಭರ್ಜರಿ ಚಾಲನೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮೂಡಣ ಬಾಗಿಲು, ದೇವರ ಮೂಲೆಯೆಂದೇ ಪ್ರಸಿದ್ಧಿ ಪಡೆದಿರುವ ಕೋಲಾರದ ಮುಳುಬಾಗಿಲಿನ ಕುರುಡುಮಲೆ ಗಣೇಶನಿಗೆ ಪೂಜೆ ಸಲ್ಲಿಸುವ ಮೂಲಕ ಪ್ರಜಾಧ್ವನಿ–2 ಯಾತ್ರೆ ಮತ್ತು ಲೋಕ ಸಭಾ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದರು. ಗಣೇಶನಿಗೆ ಪೂಜೆ ಸಲ್ಲಿಸುವುದಕ್ಕೂ ಮುನ್ನ ಸಿದ್ದರಾಮಯ್ಯ, ಸ್ಥಳೀಯ ದರ್ಗಾಕ್ಕೆ ತೆರಳಿ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿದರು. ಏಪ್ರಿಲ್ 26ರಂದು ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ●9ನೇ ಪುಟಕ್ಕೆ



ಮುಳುಬಾಗಿಲಿನ ಕುರುಡುಮಲೆ ಗಣೇಶನಿಗೆ ಪೂಜೆ ಸಲ್ಲಿಸಿದ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್



ಮೈಸೂರಿನಲ್ಲಿ ಯದುವೀರ್ ಭರ್ಜರಿ ರೋಡ್ ಶೋ

ಕಮಲದ ಹೂವು, ಝುರಿ ಹಾರ ಹಾಕಿ ಅಭೂತಪೂರ್ವ ಸ್ವಾಗತ

ಮೈಸೂರು, ಏ.6(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇಂದು ಮೈಸೂರು ನಗರದಲ್ಲಿ ಭರ್ಜರಿ ರೋಡ್ ಶೋ ನಡೆಸಿ ಮತಯಾಚಿಸಿದರು. ಇಂದು ಕನ್ನೇಗೌಡನ ಕೊಪ್ಪಲಿಗೆ (ಕೆ.ಜಿ.ಕೊಪ್ಪಲು) ಆಗಮಿಸಿದ ಯದುವೀರ್ ಅವರಿಗೆ ಕಮಲ ಹೂವು ಹಾಗೂ ಝುರಿ ಹಾರ ಹಾಕಿ, ಮೈಸೂರು ಪೇಟ ತೊಡಿಸಿ ಜನರು ಅಭೂತಪೂರ್ವ ಸ್ವಾಗತ ಕೋರಿದರು.

ರೈಲ್ವೆ ಗೇಟ್ ಬಳಿಯ ಸಿದ್ದಪ್ಪಾಜಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಯದುವೀರ್ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿದರು. ತರುವಾಯ ಗಂಗೋತ್ರಿ ಬಡಾವಣೆಯ ಮಾರುತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಅಲ್ಲಿ ಕೂಡ ರೋಡ್ ಶೋ ನಡೆಸಿ ಮತಯಾಚಿಸಿದರು. ನಂತರ ಮಂಡಿ ಮೊಹಲ್ಲಾದ ಪಂಚಮುಖಿ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ರೋಡ್ ಶೋ ನಡೆಸಿದರು. ಯದುವೀರ್ ಭೇಟಿ ನೀಡಿದ ಸ್ಥಳಗಳಲ್ಲಿ ಜನರಿಂದ ಭರ್ಜರಿ ಸ್ವಾಗತ ದೊರೆಯಿತು. ಕೆಲವರು ಕಮಲದ ಹೂವಿನ ಹಾರ ಹಾಕಿದರೆ, ಮತ್ತೆ ಹಲವರು ಝುರಿ ಹಾರ ಹಾಕಿ, ಮೈಸೂರು ಪೇಟ ತೊಡಿಸಿ, ಸ್ವಾಗತ ಕೋರಿದರು.

ಮಂಡಿ ಮೊಹಲ್ಲಾದ ಅಕ್ಬರ್ ರೋಡ್, ಕಬೀರ್ ರೋಡ್, ಸಾಡೆ ರೋಡ್ ಸೇರಿದಂತೆ ಇತರೆಡೆ ರೋಡ್ ಶೋ ನಡೆಸಿ ಯದುವೀರ್ ಮತಯಾಚಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ರೋಡ್ ಶೋನಲ್ಲಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಚಾಮರಾಜ ಕ್ಷೇತ್ರದ ಮಾಜಿ ಶಾಸಕರೂ ಆದ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಅಧ್ಯಕ್ಷ ಶಿವಕುಮಾರ್, ಯುವ ಮೋರ್ಚಾ ನಗರಾಧ್ಯಕ್ಷ ಪಡುವಾರಹಳ್ಳಿ ರಾಮಕೃಷ್ಣ ಸೇರಿದಂತೆ ಹಲವರು ರೋಡ್ ಶೋನಲ್ಲಿ ಭಾಗವಹಿಸಿದ್ದರು. ಮೈಸೂರಿನಲ್ಲಿ ಇಂದು 39 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿತ್ತು. ದಿನ ಕಳೆದಂತೆ ಬಿಸಿಲಿನ ಧಗೆಯಲ್ಲಿ ಇದ್ದೆ. ದಣಿದ ಜನರು ಯದುವೀರ್‌ಗೆ ಜನ ಅಲ್ಲಲ್ಲಿ ಎಳನೀರು ನೀಡುತ್ತಿದ್ದರು.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಶನಿವಾರ ಮೈಸೂರಲ್ಲಿ ರೋಡ್ ಶೋ ಮೂಲಕ ಮತಯಾಚಿಸಿದರು



ಪ್ರಚಾರದ ವೇಳೆ ಅಭಿಮಾನಿಯೊಬ್ಬರು ನೀಡಿದ ಎಳನೀರು ಕುಡಿಯುತ್ತಿರುವ ಯದುವೀರ್

ಧರ್ಮಾತೀತವಾಗಿ ಬೆಂಬಲಿಸಿ

ಜಾತ್ಯಾತೀತ ಹಾಗೂ ಧರ್ಮಾತೀತವಾಗಿ ಪ್ರಧಾನಿ ನರೇಂದ್ರ ಮೋದಿ ಹಲವು ಕೊಡುಗೆ ನೀಡಿರುವ ಕಾರಣ ಎಲ್ಲಾ ಜಾತಿ ಮತ್ತು ಧರ್ಮದ ಜನರು ಬಿಜೆಪಿ ಅಭ್ಯರ್ಥಿಯಾಗಿರುವ ನನ್ನನ್ನು ಬೆಂಬಲಿಸಲಿದ್ದಾರೆ ಎಂದು ಯದುವೀರ್ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ವಿವಿಧೆಡೆ ಶನಿವಾರ ಭರ್ಜರಿ ರೋಡ್ ಶೋ ವೇಳೆ ಪತ್ರಕರ್ತರ ಜೊತೆ ಮಾತನಾಡಿದ ಅವರು, ಬಿಜೆಪಿಯನ್ನು ಒಂದು ಧರ್ಮದ ಜನರು ಬೆಂಬಲಿಸುವುದಿಲ್ಲ ಎಂಬ ಕೆಲವರ ವಾದಕ್ಕೆ ತಿರುಗೇಟು ನೀಡಿದರು. ಮೈಸೂರು ನಗರಕ್ಕೂ ಅರಮನೆಗೂ ಅವಿನಾಭಾವ ಭಾವನಾತ್ಮಕ ಸಂಬಂಧವಿದೆ. ಇದರಿಂದ ನಾನು ಹೋದ ಕಡೆಯಲ್ಲೆಲ್ಲಾ ಜನರು ಉತ್ಸಾಹದಿಂದ ಸ್ವಾಗತಿಸಿ ನನ್ನ ಬೆಂಬಲಿಸುತ್ತಿದ್ದಾರೆ. ಮೋದಿ ಮತ್ತೆ ಪ್ರಧಾನಮಂತ್ರಿ ಆಗಬೇಕೆಂದು ಅಪೇಕ್ಷೆ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು. ಮೈಸೂರಿನ ಪಾರಂಪರಿಕತೆ ಉಳಿಸಿ, ಸ್ವಚ್ಛತೆ ಕಾಪಾಡಲು ಹೆಚ್ಚಿನ ಒತ್ತು ನೀಡುವಂತೆ ಮನವಿ ಮಾಡುತ್ತಿದ್ದಾರೆ. ನಾನು ಸಂಸದನಾಗಿ ಆಯ್ಕೆಯಾದರೆ ಇದರ ಬಗ್ಗೆ ಹೆಚ್ಚಿನ ಗಮನ ಹರಿಸುತ್ತೇನೆ ಎಂದು ಯದುವೀರ್ ಆಶ್ವಾಸನೆ ನೀಡಿದರು.



ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯ 29ನೇ ಘಟಿಕೋತ್ಸವ

ವ್ಯವಹಾರ ಕ್ಷೇತ್ರದಲ್ಲಿ ಬೆಳೆಯಲು ಕೌಶಲ್ಯ, ಶೈಕ್ಷಣಿಕ ಅರ್ಹತೆ ಅವಶ್ಯಕ

ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ವಿದ್ಯಾರ್ಥಿಗಳಿಗೆ ಕಿವಿಮಾತು



ಎಸ್‌ಡಿಎಂಐಎಂಡಿ ಮೈಸೂರು ಕೇಂದ್ರದಲ್ಲಿ ನಡೆದ 29ನೇ ವಾರ್ಷಿಕ ಘಟಿಕೋತ್ಸವದಲ್ಲಿ ಟಿಮ್ಕೆನ್ ಇಂಡಿಯಾ ಲಿಮಿಟೆಡ್‌ನ ಛೇರ್ಮನ್ ಸಂಜಯ್ ಕೌಲ್ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದರು. ಡಾ.ವೀರೇಂದ್ರ ಹೆಗ್ಗಡೆ ಸೇರಿದಂತೆ ಇತರರಿದ್ದಾರೆ.

ಮೈಸೂರು, ಏ.6(ಎಸ್‌ಪಿಎನ್)– ಜಗತ್ತಿನ ವ್ಯವಹಾರ ಕೇತ್ರದಲ್ಲಿ ಯುವ ಸಮೂಹ ಗುರುತಿಸಿಕೊಳ್ಳಬೇಕಾದರೆ ಆ ಕ್ಷೇತ್ರದಲ್ಲಿನ ಕೌಶಲ್ಯ, ಸಾಮಾಜಿಕ ಬದ್ಧತೆ, ಶೈಕ್ಷಣಿಕ ಅರ್ಹತೆಗಳನ್ನು ಮೊದಲು ಅಳವಡಿಸಿಕೊಳ್ಳಬೇಕು ಎಂದು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಮೈಸೂರು ಕೇಂದ್ರದ (ಎಸ್‌ಡಿಎಂಐಎಂಡಿ) ವ್ಯವಸ್ಥಾಪಕ ನಿರ್ದೇಶಕ ಹಾಗೂ ರಾಜ್ಯಸಭಾ ಸದಸ್ಯ ಡಾ.ಡಿ.ವೀರೇಂದ್ರ ಹೆಗ್ಗಡೆ ಸಲಹೆ ನೀಡಿದರು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಮೈಸೂರು ಕೇಂದ್ರದ ಆವರಣದಲ್ಲಿ ಆಯೋಜಿಸಿದ್ದ 29ನೇ ವಾರ್ಷಿಕ ಘಟಿಕೋತ್ಸವದಲ್ಲಿ 172 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ವ್ಯವಹಾರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳು ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿ, ಅದರ ಶ್ರೇಷ್ಠತೆಯನ್ನು ಸಮಾಜಕ್ಕೆ ನಿವ್ವಳ ಕೊಡುಗೆದಾರರಾಗಿ ನೀಡಬೇಕು. ಆಗ ಮಾತ್ರ ನಮ್ಮ ಸಂಸ್ಥೆಯಲ್ಲಿ ಅಧ್ಯಯನ ನಡೆಸಿದ್ದಕ್ಕೂ ಸಾರ್ಥಕತೆ ಬರುತ್ತದೆ. ಎಂಬಿಎ ಪದವಿ ಎಂದರೆ ಕೇವಲ ಪ್ರಮಾಣಪತ್ರ ಪಡೆಯುವುದೇ ಪ್ರಧಾನ ಅಲ್ಲ. ಬದಲಾಗಿ ಇದರಲ್ಲಿನ ಜ್ಞಾನವನ್ನು ಪಡೆದುಕೊಂಡು ದೊಡ್ಡ ದೊಡ್ಡ ಕಂಪನಿಗಳಲ್ಲಿ ನಿಮ್ಮ ದೃಷ್ಟಿಕೋನಗಳನ್ನು ವಿಸ್ತರಿಸುವುದು ಹಾಗೂ ಈ ಕ್ಷೇತ್ರದ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡರೆ ಮಾತ್ರ ಇಂದಿನ ಘಟಿಕೋತ್ಸವ ಕಾರ್ಯಕ್ರಮಕ್ಕೆ ಸಾರ್ಥಕತೆ ಬರುತ್ತದೆ ಎಂದರು.

ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಜಗತ್ತಿನ ಬೇರೆ ಬೇರೆ ಕ್ಷೇತ್ರದ ಕಂಪನಿಗಳ ಉನ್ನತ ಹುದ್ದೆಗಳಲ್ಲಿ ಗುರುತಿಸಿಕೊಳ್ಳಬೇಕು. ಆ ಕಂಪನಿಯ ಷೇರುದಾರರ ನಂಬಿಕೆ ಉಳಿಸಿ, ಆ ಕಂಪನಿಯ ಮೌಲ್ಯವನ್ನು ಹೆಚ್ಚಿಸುವ ಹೊಣೆಗಾರಿಕೆ ನಿಮ್ಮದಾಗಿರುತ್ತದೆ. ಇದರ ಬಗ್ಗೆ ನಿಮ್ಮ ಗಮನವಿರಲಿ ಎಂದರಲ್ಲದೆ, ಎಂಬಿಎ ಪದವಿ ಪ್ರಮಾಣ ಪತ್ರ ಪಡೆದಿರುವ ವಿದ್ಯಾರ್ಥಿಗಳಿಗೂ ಮುಂದಿನ ಜೀವನ ಶುಭದಾಯಕವಾಗಲಿ ಎಂದು ಹಾರೈಸಿದರು.

ಈ ವೇಳೆ 'ಫೈನಾನ್ಸ್' ವಿಷಯದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿ ಕೆ.ಕೆ.ಕರುಂಬಯ್ಯರಿಗೆ, ಅಂಕುರ್ ಗುಪ್ತ ಮೆಮೋರಿಯಲ್ ಗೋಲ್ಡ್ ಮೆಡಲ್, 'ಹೆಚ್‌ಆರ್‌ಎಂ' ವಿಷಯದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿನಿ ಆಕೃತಿ ಶರ್ಮಾರಿಗೆ ಸುಮನ್ ನಾರಾಯಣ್ ಮೆಮೋರಿಯಲ್ ಗೋಲ್ಡ್ ಮೆಡಲ್, ಹಾಗೂ ಮಾರ್ಕೆಟಿಂಗ್, ಸಿಸ್ಟಮ್, ಹಾಗೂ ಬೆಸ್ಟ್ ಅಕಾಡೆಮಿಕ್ ಪರ್ಫಾರ್ಮೆನ್ಸ್ ವಿಷಯದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿನಿ ಉಮಾ ಸಾಯಿ ಕಿರಣ್ ಮಿನ್ನಾಕುರಿ ಅವರಿಗೆ ಮೂರು ಚಿನ್ನದ ಪದಕಗಳನ್ನು ನೀಡಿ ಗೌರವಿಸಲಾಯಿತು. ಅಂಕುರ್ ಗುಪ್ತ ಮೆಮೋರಿಯಲ್ ಗೋಲ್ಡ್ ಮೆಡಲ್ ಅನ್ನು ಬೆಸ್ಟ್ ಓವರ್ ಆಲ್ ಪರ್ಫಾರ್ಮೆನ್ಸ್ ಪ್ರದರ್ಶಿಸಿದ ವಿದ್ಯಾರ್ಥಿ ರಜತ್ ಷಹಾರಿಗೆ ನೀಡಿ, ಗೌರವಿಸಲಾಯಿತು. ವೇದಿಕೆಯಲ್ಲಿ ಟಿಮ್ಕೆನ್ ಇಂಡಿಯಾ ಲಿಮಿಟೆಡ್‌ನ ಛೇರ್ಮನ್ ಸಂಜಯ್ ಕೌಲ್, ಬೋಧಕ ಮತ್ತು ಬೋಧಕೇತರ ವೃಂದ ಉಪಸ್ಥಿತರಿದ್ದರು.

ಅಂಚೆ ಕಚೇರಿಯಲ್ಲಿ ಅಪಘಾತ ವಿಮೆ ಬಂಪರ್

ಅಪಘಾತದಲ್ಲಿ ಸಾವನ್ನಪ್ಪಿದರೆ ನಾಮಿನಿದಾರರಿಗೆ 10 ಲಕ್ಷ ಪರಿಹಾರ: ಅಂಚೆ ಅಧೀಕ್ಷಕ ಗೋವಿಂದರಾಜು



ಮೈಸೂರು, ಏ.6–ಅಂಚೆ ಕಚೇರಿಯಲ್ಲಿ ಅಪಘಾತ ವಿಮಾ ಯೋಜನೆ ಜಾರಿಯಲ್ಲಿದ್ದು, ಯೋಜನೆಗೆ ರೂ 520/– ಪಾವತಿಸಬೇಕಿದೆ. ಆಕಸ್ಮಿಕವಾಗಿ ಅಪಘಾತದಲ್ಲಿ ಮೃತಪಟ್ಟರೆ ನಾಮಿನಿದಾರರಿಗೆ 10 ಲಕ್ಷ ರೂ. ಪರಿಹಾರ ಸಿಗಲಿದೆ. ಇದನ್ನು ಎಲ್ಲರೂ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಅಂಚೆ ಇಲಾಖೆಯ ನಂಜನಗೂಡು ವಿಭಾಗದ ಅಧೀಕ್ಷಕ ಗೋವಿಂದರಾಜು ತಿಳಿಸಿದರು.

ಕಳೆದ 2023ರ ಜೂನ್‌ನಲ್ಲಿ ನೇರಳೆ ಅಂಚೆ ಕಚೇರಿ ವ್ಯಾಪ್ತಿಯ ನೇರಳೆ ಗ್ರಾಮದ ಶ್ರೀಮತಿ ಕೌಸಲ್ಯ ಅವರ ಪತಿ ರವಿ ಅಪಘಾತದಲ್ಲಿ ಮೃತಪಟ್ಟಿದ್ದರು. ಅವರು ಅಂಚೆ ಕಚೇರಿಯಲ್ಲಿ ಅಪಘಾತ ವಿಮೆ ಮಾಡಿಸುವ ಸಂದರ್ಭದಲ್ಲಿ ಅವರ ಪತ್ನಿ ಕೌಸಲ್ಯ ಅವರನ್ನು ನಾಮಿನಿಯಾಗಿ ಮಾಡಿಸಿದ್ದರು. ಈಗ ಅವರಿಗೆ 10 ಲಕ್ಷ ರೂ.ಗಳ ಚೆಕ್ಕನ್ನು ನೀಡಲಾಗಿದ್ದು ಇದು ಅವರ ಕುಟುಂಬದ ನಿರ್ವಹಣೆಗೆ ಅನುಕೂಲವಾಗಿದೆ ಎಂದು ತಿಳಿಸಿದರು.

ಅಂಚೆ ಇಲಾಖೆಯಲ್ಲಿರುವ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (IPPB) ಖಾತೆ ಉಳ್ಳ ವ್ಯಕ್ತಿಗೆ ಟಾಟಾ, ಬಜಾಜ್ ಇನ್ಶೂರೆನ್ಸ್ ಕಂಪನಿಯವರು ವಾರ್ಷಿಕವಾಗಿ ರೂ. 520 ಕಟ್ಟಿಸಿಕೊಂಡು ವಿಮಾ ಪಾಲಿಸಿ ನೀಡುತ್ತಾರೆ. ಈ ಪಾಲಿಸಿದಾರರಾದರೆ ಅಪಘಾತದಲ್ಲಿ ಮರಣ ಹೊಂದಿದರೆ ಕಂಪನಿ ಹಾಗೂ ಇಲಾಖೆ ವತಿಯಿಂದ 10 ಲಕ್ಷ ರೂ. ಪರಿಹಾರವನ್ನು ನಾಮಿನಿದಾರರಿಗೆ ನೀಡಲಾಗುತ್ತದೆ ಎಂದರು. ಇದಲ್ಲದೆ ಅಪಘಾತದ ಕಾರಣ ಒಳರೋಗಿಯಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೆ ರೂ 60 ಸಾವಿರದವರೆಗೆ ಚಿಕಿತ್ಸಾ ವೆಚ್ಚದ ರಿಎಂಬರ್ಸ್‌ಮೆಂಟ್ ದೊರೆಯುತ್ತದೆ. ಎಲ್ಲಾ ಸಾರ್ವಜನಿಕರು ಈ ಕಡಿಮೆ ವೆಚ್ಚದ ಅಪಘಾತ ಪಾಲಿಸಿಯ ಸದುಪಯೋಗಪಡಿಸಿಕೊಳ್ಳಬೇಕು ಎಂದರು. IPPB ಹಿರಿಯ ವ್ಯವಸ್ಥಾಪಕ ಸುಧಾಕರ್ ಹೆಚ್.ಎಲ್, ಟಿ.ನರಸೀಪುರ ಉಪವಿಭಾಗದ ಮುಖ್ಯಸ್ಥ ಸುಪ್ರಿಯಾ ಮೃತರ ಕುಟುಂಬಕ್ಕೆ 10 ಲಕ್ಷ ರೂ. ಚೆಕ್ ನೀಡಿದರು. ಉಪವಿಭಾಗದ ಮುಖ್ಯಸ್ಥ ಶ್ರೀಧರ್, ಸತ್ಯಪ್ರಕಾಶ್, ಮೂರ್ತಿ ನಾಯಕ್, ಹೆಡ್ ಪೋಸ್ಟ್ ಮಾಸ್ಟರ್ ಜಾನ್ಸನ್ ರಾಯ್, ಎಕ್ಸಿಕ್ಯೂಟಿವ್ ಗಿರೀಶ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮಹದೇವಪ್ಪ ಇದ್ದರು.



ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಹಿರಿಯ ಮುಖಂಡರಾದ ಶ್ರೀನಿವಾಸ್ ಅವರನ್ನು ಗೌರವಿಸಲಾಯಿತು. ಈ ವೇಳೆ ಮಂಡಲದ ಅಧ್ಯಕ್ಷ ಪೈಟಿ.ರವಿ ಲಕ್ಷ್ಮೀಪುರ, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ, ನಿಕಟಪೂರ್ವ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಗೋಪಾಲಗೌಡ, ಡಿ.ಚಂದ್ರಶೇಖರ್, ಗಣೇಶ್, ಮಧುಕುಮಾರ್, ಪ್ರಧಾನ ಕಾರ್ಯದರ್ಶಿ ಹೇಮಂತ್‌ಕುಮಾರ್, ಶಿವಕುಮಾರ್, ಮಹಾಶಕ್ತಿ ಕೇಂದ್ರದ ಅಧ್ಯಕ್ಷೆ ಶಾಲಿನಿ ಕುಮಾರ್, ನಾರಾಯಣ್, ನಂಜುಂಡಸ್ವಾಮಿ, ಮೋಹನ್, ಸುನೀಲ್ ಉಪಸ್ಥಿತರಿದ್ದರು.

ಏ.9, ಶ್ರೀ ಫಲ ಶ್ರೀ ಸೂಕ್ತ ಮಹಾಲಕ್ಷ್ಮಿ ಹೋಮ

ಮೈಸೂರು, ಏ.6– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ವಿರಾಜಮಾನಳಾದ ಶ್ರೀ ಚಕ್ರಾಂಕಿತೆ ಶ್ರೀ ಸಾಮ್ರಾಜ್ಯ ಮಹಾಲಕ್ಷ್ಮಿ ದಿವ್ಯ ಸಾನ್ನಿಧ್ಯದಲ್ಲಿ ಯುಗಾದಿ ಪ್ರಯುಕ್ತ ಏ.9ರಂದು ಮಂಗಳವಾರ ವ್ಯಾಪಾರಿಗಳಿಗೆ ಮತ್ತು ವ್ಯಾಪಾರ ಅಭಿವೃದ್ಧಿಗಾಗಿ ಶ್ರೀ ಫಲ ಶ್ರೀ ಸೂಕ್ತ ಹೋಮ ಮತ್ತು ಮಹಾಲಕ್ಷ್ಮಿ ಮೂಲ ಮಂತ್ರದಿಂದ ಹೋಮ ನೆರವೇರಿಸಲಾಗುವುದು. ಹೆಚ್ಚಿನ ವಿವರಗಳಿಗೆ ಮೈಕುಮಾರ್ ಜಾತಕ ವಿಮರ್ಶಕರನ್ನು ಮೊ. 9845183392 9845183399 ಮೂಲಕ ಸಂಪರ್ಕಿಸಬಹುದು.

ಏ.12, ರಾಜ್ಯಾದ್ಯಂತ 'ಮುಕ್ತ ಮನಸ್ಸು' ಬಿಡುಗಡೆ

ಮೈಸೂರು,ಏ.6(ಜಿಎ)–ಮುಗ್ಧ ಮನಸ್ಸುಗಳನ್ನು ಸೆಳೆಯುವ ನಿಟ್ಟಿನಲ್ಲಿ 'ಮುಕ್ತ ಮನಸ್ಸು' ಎಂಬ ಹೆಸರಿನ ಚಲನಚಿತ್ರವನ್ನು ತಾವು ನಿರ್ಮಿಸಿದ್ದು, ಏ.12ರಂದು ರಾಜ್ಯಾದ್ಯಂತ ಬಿಡುಗಡೆಗೊಳ್ಳಲಿದೆ. ಸಿನಿಪ್ರಿಯರು ಪ್ರೋತ್ಸಾಹಿಸಬೇಕೆಂದು ನಿರ್ದೇಶಕ ಆರ್.ಸಿ. ರಂಗಶೇಖರ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಯಕನಾಗಿ ಮೋಹನ್, ನಾಯಕಿಯಾಗಿ ಮಾನ್ಯ ನಟಿಸಿದ್ದಾರೆ. ಪ್ರೀತಿಯನ್ನು ಕೊನೆವರೆಗೂ ಹೇಗೆ ಉಳಿಸಿಕೊಂಡು ಹೋಗಬಹುದು ಎಂಬ ಎಳೆಯ ಮೇಲೆ ಚಿತ್ರ ಸಾಗುತ್ತದೆ. ಹೊಸ ಕಲಾವಿದರಿಗೆ ಅವಕಾಶ ನೀಡಲಾಗಿದೆ. ಐದು ಅತ್ಯುತ್ತಮ ಹಾಡುಗಳಿವೆ. ಅಲ್ಲದೆ, 50ಕ್ಕೂ ಹೆಚ್ಚು ರಂಗಭೂಮಿ ಕಲಾವಿದರು ನಟಿಸಿದ್ದಾರೆ. ಇದೊಂದು ಕಾಲ್ಪನಿಕ ಕಥೆ ಆಧರಿಸಿದ ಚಿತ್ರ ಎಂದು ಮಾಹಿತಿ ನೀಡಿದರು.

ಈ ವೇಳೆ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಮಾತನಾಡಿ, ನಾಡಿನ ಚಲನಚಿತ್ರ ಮಂದಿರಗಳು ಮತ್ತು ದೈನಿಕ ಪತ್ರಿಕೆಗಳು ನಮ್ಮ ಸಂಸ್ಕೃತಿಯ ರಾಯಭಾರಿಗಳಾಗಿದ್ದು, ಈಗ ಉಭಯ ಕ್ಷೇತ್ರಗಳೂ ಇಂದು ಸಂಕಷ್ಟದಲ್ಲಿದ್ದು, ಇವುಗಳನ್ನು ಸರ್ಕಾರ ಬಹಳ ಮುತುವರ್ಜಿಯಿಂದ ಉಳಿಸಿಕೊಳ್ಳುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಇಂದು ಸರ್ಕಾರದ ಹಲವು ನೀತಿ ನಿಯಮಗಳ ವ್ಯತಿರಿಕ್ತ ಪರಿಣಾಮ ಮತ್ತು ಅನೇಕ ರೀತಿಯ ಪರಿಸ್ಥಿತಿಗಳಿಂದಾಗಿ ಚಿತ್ರ ಮಂದಿರಗಳ ಮಾಲೀಕರು ನಷ್ಟದ ಸ್ಥಿತಿ ತಲುಪಿದ್ದಾರೆ. ಹಾಗಾಗಿ ಬಹಳಷ್ಟು ಪ್ರದರ್ಶಕರು ಚಲನ ಚಿತ್ರಮಂದಿರಗಳನ್ನು ಮುಚ್ಚಿ ಬೇರೆ ವ್ಯವಹಾರಗಳನ್ನು ಮಾಡುತ್ತಿದ್ದಾರೆ. ಮೈಸೂರಿನಲ್ಲಂತೂ ಚಲನಚಿತ್ರ ಚರಿತ್ರೆಗೆ ಸಾಕ್ಷಿಗಲ್ಲುಗಳಂತಿದ್ದ ಅನೇಕ ಚಿತ್ರಮಂದಿರಗಳನ್ನು ಮುಚ್ಚಲಾಗಿದ್ದು, ಕೆಲವನ್ನು ಕೆಡವಿ ನೆಲಸಮ ಮಾಡಲಾಗಿದೆ. ಹಾಗಾಗಿ ಸಿನಿಮಾಗಳ ಪ್ರದರ್ಶನಕ್ಕೆ ಅದರಲ್ಲೂ ಹೊಸ ಪ್ರತಿಭೆಗಳುಳ್ಳ 'ಮುಕ್ತ ಮನಸ್ಸು' ವಿನಂತಹ ಉತ್ತಮ ಚಿತ್ರಕ್ಕೆ ಚಿತ್ರಮಂದಿರ ಸಿಗಲು ಕಷ್ಟವಾಗುತ್ತಿದೆ ಎಂದರು.

ಚಿತ್ರತಂಡದಿಂದ ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಅವರನ್ನು ಅಭಿನಂದಿಸಲಾಯಿತು. ಚಿತ್ರದ ನಾಯಕ ಮೋಹನ್, ನಾಯಕಿ ಮಾನ್ಯ, ನಿರ್ಮಾಪಕ ವೆಂಕಟೇಶ್ ಮಾತನಾಡಿದರು. ಸಹ ನಿರ್ಮಾಪಕ ಬೋರೇಗೌಡ, ಲೋಕೇಶ್, ಅರ್.ಎಂ.ಧೀರ್, ಮಂಜುನಾಥ ಬಿಳಿಕೆರೆ, ಮಹಾದೇವ ಪ್ರಸಾದ್, ಪವನ್ ದೊರೆ, ಚಂದ್ರು, ಶಶಿಕುಮಾರ್ ಮತ್ತಿತರರಿದ್ದರು.

ರಾಷ್ಟ್ರೀಯ ಚಾಂಪಿಯನ್‌ಶಿಪ್ ಟೆನ್ನಿಸ್‌ನಲ್ಲಿ ಎಂ.ಸ್ಫಟಿಕಗೆ ತೃತೀಯ ಬಹುಮಾನ



ಮೈಸೂರು,ಏ.6–ಮನುಷ್ಯನಿಗೆ ಛಲವೊಂದಿದ್ದರೆ ಏನು ಬೇಕಾದರು ಸಾಧಿಸಬಹುದು ಎಂಬುದಕ್ಕೆ ನಗರದ ವಿಶೇಷ ಚೇತನರಾದ ಎಂ.ಸ್ಫಟಿಕ ಅವರೇ ಸಾಕ್ಷಿ.

ಎಂ.ಸ್ಫಟಿಕ ಮಾ.27 ರಿಂದ 31ರವರೆಗೆ ನವದೆಹಲಿಯ ಮಾಡ್ರನ್ ಸ್ಕೂಲ್ ಬರಖಾಂಬ ವತಿಯಿಂದ ನಡೆದ ವಿಶೇಷ ಚೇತನರ ರಾಷ್ಟ್ರೀಯ ಚಾಂಪಿಯನ್‌ಶಿಪ್ ಲಾಂಗ್ ಟೆನ್ನಿಸ್–2024ರ ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯದಿಂದ ಪ್ರತಿನಿಧಿಸಿ ತೃತೀಯ ಬಹುಮಾನ ಗಳಿಸಿ ಸಾಧನೆ ಗೈದಿದ್ದಾರೆ. ಸ್ಫಟಿಕ ಪ್ರಸ್ತುತ ನಗರದ ಮೈತ್ರಿ ಚಾರಿಟಬಲ್ ಟ್ರಸ್ಟ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದು, ವೈಶಾಲಿ ಮತ್ತು ಪಾಲಿಕೆ ಮಾಜಿ ಸದಸ್ಯ ಎಸ್.ಬಿ.ಎಂ. ಮಂಜು ದಂಪತಿ ಪುತ್ರಿ. ಸ್ಫಟಿಕ ಅವರಿಗೆ ಜಯ ಪ್ರಕಾಶ್ ತರಬೇತುದಾರರಾಗಿದ್ದಾರೆ. ಸ್ಫಟಿಕರ ಈ ಸಾಧನೆಗೆ ಮೈತ್ರಿ ಚಾರಿಟಬಲ್ ಟ್ರಸ್ಟ್‌ನ ಆಡಳಿತ ಮಂಡಳಿ, ಶಿಕ್ಷಕರು, ಸಿಬ್ಬಂದಿ ಅಭಿನಂದಿಸಿದ್ದಾರೆ.



ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ 117ನೇ ಜನ್ಮದಿನದ ಅಂಗವಾಗಿ ರೈಲ್ವೆ ನಿಲ್ದಾಣದ ಬಳಿ ಇರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಜೆಡಿಎಸ್ ಮುಖಂಡರಾದ ಪ್ರಕಾಶ್, ದೇವರಾಜು, ಪ್ರದೀಪ್, ಪ್ರಸನ್ನ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಪ್ರಕಾಶಕರ ಸಂಘದ ವಾರ್ಷಿಕ ಪ್ರಶಸ್ತಿಗೆ ಆಯ್ಕೆ



ರೂಪ ಮತ್ತಿಕೆರೆ



ನಿಂಗರಾಜ್

ಮೈಸೂರು, ಏ.6(ಎಸ್‌ಪಿಎನ್)– ಕರ್ನಾಟಕ ಪ್ರಕಾಶಕರ ಸಂಘವು 2023ರ ವಾರ್ಷಿಕವಾಗಿ ನೀಡುವ ನಂಜನಗೂಡು ತಿರುಮಲಾಂಬ ಪ್ರಶಸ್ತಿಗೆ ವಿಜಯಪುರದ ರೂಪ ಮತ್ತಿಕೆರೆ, ಗೋಪಾಲಕೃಷ್ಣ ಪುಸ್ತಕ ಪರಿಚಾರಕ ಪ್ರಶಸ್ತಿಗೆ ಮೈಸೂರಿನ ಚಿಂತನ ಚಿತ್ತಾರ ಪ್ರಕಾಶನದ ನಿಂಗರಾಜ್ ಚಿತ್ತಣ್ಣವರ್ ಆಯ್ಕೆಯಾಗಿದ್ದಾರೆ.


ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು. ಈ ಪ್ರಶಸ್ತಿಯನ್ನು ಏ.23ರಂದು ಬೆಳಗ್ಗೆ 11ಕ್ಕೆ ವಿಶ್ವ ಪುಸ್ತಕ ದಿನಾಚರಣೆ ಅಂಗವಾಗಿ ಬೆಂಗಳೂರಿನ ಬಿಎಂಶ್ರೀ ಪ್ರತಿಷ್ಠಾನದ ಎಂ.ವಿ.ಸಿ ಸಭಾಂಗಣದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು. ಮುಖ್ಯ ಅತಿಥಿಗಳಾಗಿ ಎನ್.ಗಣೇಶಯ್ಯ, ಸಂಸ್ಕೃತಿ ಚಿಂತಕಿ ಎಂ.ಎಸ್.ಆಶಾದೇವಿ, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಭಾಗವಹಿಸಲಿದ್ದಾರೆ. ಕರ್ನಾಟಕ ಪ್ರಕಾಶಕರ ಸಂಘದ ಜಂಟಿ ಕಾರ್ಯದರ್ಶಿ ಸೃಷ್ಟಿ ನಾಗೇಶ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿವ್ಯಾಂಗ ಮಕ್ಕಳ ಪೋಷಣೆಗಾಗಿ ನೆರಳು ಶಿಕ್ಷಕರ ತರಬೇತಿ

ಮೈಸೂರು, ಏ. 6–ಮೈಸೂರಿನ ಕೇವಲಿನ್ ಚಾರಿಟೆಬಲ್ ಟ್ರಸ್ಟ್ ತನ್ನ ಎರಡನೇ ಉಪಕ್ರಮ ಸುಜ್ಞಾನದ ಶಿಕ್ಷಾ ಯೋಜನೆಯಡಿಯಲ್ಲಿ ದಿವ್ಯಾಂಗ ಮಕ್ಕಳ ಪೋಷಣೆಗಾಗಿ, ಸಹಾಯಕ ಹಾಗೂ ನೆರಳು ಶಿಕ್ಷಕರ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ತರಬೇತಿ ಕಾರ್ಯಕ್ರಮವು ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್, ಚಂಚಲತೆ ಮತ್ತು ಅತೀ ಚಟುವಟಿಕೆಯ ಕಾಯಿಲೆ, ಡಿಸ್ಲೆಕ್ಸಿಯಾ ಮತ್ತು ಇತರ ಬೆಳವಣಿಗೆಯ ಅಸಮರ್ಥತೆಗಳನ್ನು ಒಳಗೊಂಡಂತೆ ವೈವಿಧ್ಯಮಯ ಕಲಿಕೆಯ ಅಗತ್ಯತೆಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುವುದು. ಮೊದಲ ಬ್ಯಾಚ್ ಏ.15ರಿಂದ ಪ್ರಾರಂಭವಾಗಲಿದ್ದು, ಆಸಕ್ತಿಯುಳ್ಳವರು ಹೆಚ್ಚಿನ ಮಾಹಿತಿಗೆ ಮೊ. 84315 81823 ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಿಧನ

ನಿವೃತ್ತ ಡಿಎಫ್‌ಓ ಗುರುಸಿದ್ದಯ್ಯ



ಮೈಸೂರು, ಏ.6– ಮೈಸೂರಿನ ರಾಮಕೃಷ್ಣನಗರದ ನಿವಾಸಿಯಾಗಿದ್ದ ನಿವೃತ್ತ ಡಿಎಫ್‌ಓ ನಿಲಸೋಗೆ ಗುರುಸಿದ್ದಯ್ಯನವರು (86) ಶನಿವಾರ ಮಧ್ಯಾಹ್ನ ನಿಧನರಾದರು. ಮೃತರು ನಿವೃತ್ತಿಯ ನಂತರ ತಮ್ಮ ಸ್ವಗ್ರಾಮ ನಿಲಸೋಗೆಯ ಶ್ರೀ ಮಾಲರಸಮ್ಮ ಸೇವಾ ಟ್ರಸ್ಟ್ ಅಧ್ಯಕ್ಷರಾಗಿ, ಹಾಗೂ ರಾಮಕೃಷ್ಣನಗರದಲ್ಲಿರುವ ಸಿದ್ಧಾರ್ಥ ಸಂಘದ ಹಿರಿಯ ಸದಸ್ಯರಾಗಿ ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡಿದ್ದರು. ಮೃತರು ಪತ್ನಿ ಶಿವಮ್ಮ, ಮೂವರು ಪುತ್ರರಾದ ಪೊಲೀಸ್ ಇನ್ಸ್‌ಪೆಕ್ಟರ್ ಪ್ರವೀಣ್ ಬಾಬು ಮತ್ತು ವಿಶ್ವಗುರು, ಲೋಹಿತ್‌ಗುರು, ಪುತ್ರಿಯರಾದ ಕುಮುದಾ, ಉಮಾ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಟಿ.ನರಸೀಪುರ ತಾಲೂಕಿನ ನಿಲಸೋಗೆ ಗ್ರಾಮದಲ್ಲಿ ನಾಳೆ (ಏ.7) ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ. ಇವರ ನಿಧನಕ್ಕೆ ಶ್ರೀ ಮಾಲರಸಮ್ಮ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.04.2024 ಭಾನುವಾರ, ಮಳೆ ನಕ್ಷತ್ರ: ರೇವತಿ 31.03.2024 ರಿಂದ 12.04.2024
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಪೂಭಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮದಲ್ಲಿ ವಿವಿಧ ರೀತಿಯ ಗಂಟುಗಳು ಮತ್ತು ಅಪಘಾತದಿಂದ ಉಂಟಾಗುವ ಚಿಕ್ಕ ಗಾಯಗಳು ಕುರಿತು ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಬೆಳಗ್ಗೆ 9ರಿಂದ.

■ **ಸಿಗ್ಮಾ ಆಸ್ಪತ್ರೆ:** ಉಚಿತ ಮೂತ್ರಪಿಂಡ ತಪಾಸಣಾ ಶಿಬಿರ, ಸ್ಥಳ: ಸಿಗ್ಮಾ ಆಸ್ಪತ್ರೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ

■ **ಲಯನ್ಸ್ ಅಂತಾರಾಷ್ಟ್ರೀಯ ಸಂಸ್ಥೆ :** ವಾರ್ಷಿಕ ಜಿಲ್ಲಾ ಸಮಾವೇಶ 'ಚೊಚ್ಚಲ ಸಂಭ್ರಮ', ಉದ್ಘಾಟನೆ : ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಎಚ್.ಪಿ.ಸಂದೇಶ್, ಮುಖ್ಯ ಅತಿಥಿಗಳು : ಅಂತರರಾಷ್ಟ್ರೀಯ ಮಾಜಿ ನಿರ್ದೇಶಕರಾದ ವಿ.ವಿ.ಕೃಷ್ಣಾರೆಡ್ಡಿ, ಲಯನ್ ಬಿ.ಎಸ್. ರಾಜಶೇಖರಯ್ಯ, ಲಯನ್ಸ್‌ನ ಮಾಜಿ ರಾಜ್ಯಪಾಲ ಕೆ.ದೇವೇಗೌಡ, ಸ್ಥಳ: ಕರಾಮುವಿವಿ ಘಟಿಕೋತ್ಸವ ಭವನ, ಬೆಳಗ್ಗೆ 10ಕ್ಕೆ

■ **ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಹೇಮಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ:** ಎಂ.ಬಿ.ಸಂತೋಷ್ ಅವರ ಹುಟ್ಟುಹಬ್ಬದ ಪ್ರಯುಕ್ತ 'ನೂಪುರ' ಕವನ ಸಂಕಲನ, ಬಿ.ಶೋಭಾ ಅವರ 'ಭಾವರಂಗದ ಪಯಣ' ಕವನ ಸಂಕಲನ, ಸಿ.ವಾಣಿ ರಾಘವೇಂದ್ರ ಅವರ 'ಡಾ.ಶ್ವೇತಾ' ಕೃತಿಗಳ ಬಿಡುಗಡೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ.ಸಿದ್ದರಾಮ ಹೊನ್ಕಲ್, ಅಧ್ಯಕ್ಷತೆ: ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ.ಸಂತೋಷ್, ಮುಖ್ಯ ಅತಿಥಿಗಳು: ಮಹಾಕವಯಿತ್ರಿ ಡಾ.ಲತಾರಾಜಶೇಖರ್, ಶಿಕ್ಷಕಿ ಶ್ರೀಮತಿ ಶೋಭಾ, ಸಹಾಯಕ ಪ್ರಾಧ್ಯಾಪಕ ಡಾ.ಕೆ.ಪ್ರೇಮ್‌ಕುಮಾರ, ಹೇಮಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷೆ ಎ.ಹೇಮಗಂಗಾ, ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಸಿ.ವಾಣಿ ರಾಘವೇಂದ್ರ, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ ಆವರಣ, ಬೆಳಗ್ಗೆ 10ಕ್ಕೆ

■ **ಬಸವ ಸಮಿತಿ :** ಶರಣ ಸಂಗಮ–292, ಗಾಯಕರು : ಖ್ಯಾತ ಸುಗಮ ಸಂಗೀತ ಗಾಯಕರು, ಆಕಾಶವಾಣಿ ಕಲಾವಿದರು, ಅಧ್ಯಕ್ಷರು, ಮಹಾರತ್ನ ಟ್ರಸ್ಟ್, ವಿಷಯ : ವಚನಗಳು, ಜನಪದ ಗೀತೆಗಳು ಮತ್ತು ಸುಗಮ ಸಂಗೀತ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು ಹಿನಕಲ್, ಸ್ಥಳ: ಬಸವ ಸಮಿತಿ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಬಿ.ಪಿ, ಶುಗರ್, ಬೊಜ್ಜು ನಿವಾರಣೆ, ಗ್ಯಾಸ್ಟ್ರಿಕ್, ಅಸಿಡಿಟಿ, ಅಸ್ತಮಾ, ಅಜೀರ್ಣತೆ, ಅಲರ್ಜಿ, ಹಸಿರು ನರ (ವೆರಿಕೋಸ್ ವೈನ್), ಬೆನ್ನು ನೋವು, ಸಯಾಟಿಕ್, ಸಂಧಿವಾತ, ಥೈರಾಯಿಡ್, ಮೊಣಕಾಲು ನೋವು ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಸತ್ಯನಾರಾಯಣ ಸನ್ನಿಧಿ, ಶ್ರೀ ಅಮೃತೇಶ್ವರ ದೇವಸ್ಥಾನ, ದೇವರಾಜ ಮೊಹಲ್ಲಾ, ಬೆಳಗ್ಗೆ 10.30 ರಿಂದ

■ **ಸುಯೋಗ್ ಆಸ್ಪತ್ರೆ:** ವಿಶ್ವ ಆರೋಗ್ಯ ದಿನಾಚರಣೆ, ಉದ್ಘಾಟನೆ : ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ್, ಅಧ್ಯಕ್ಷತೆ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಮುಖ್ಯ ಅತಿಥಿಗಳು: ಶಾಸಕ ಡಾ.ಮಂಥರ್‌ಗೌಡ, ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ. ಎನ್.ಎಸ್.ರಾಮೇಗೌಡ, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ದಕ್ಷಿಣಾಮ್ನಾಯಿ ಶಾರದಾ ಪೀಠ, ಶೃಂಗೇರಿ:** ಮೈಸೂರು ಅಭಿನವ ಶಂಕರಾಲಯದ ಶತಮಾನೋತ್ಸವ, ಬೆಳಗ್ಗೆ 8.30ಕ್ಕೆ ಕೆ.ಆರ್. ನಗರಕ್ಕೆ ನಿರ್ಗಮನ.

■ **ಮೈಸೂರು ಆರ್ಟ್ ಗ್ಯಾಲರಿ, ಕನ್ನಡ ಸಾಹಿತ್ಯ ಕಲಾಕೂಟ:** ಅರಿವಿನ ಮಹಾಗುರು ಅಲ್ಲಮಪ್ರಭು ಕಲಾಕೃತಿ ಲೋಕಾರ್ಪಣೆ ಹಾಗೂ ಜಯಂತಿ ಕಾರ್ಯಕ್ರಮ, ಕಲಾಕೃತಿ ಲೋಕಾರ್ಪಣೆ : ಶರಣ ಸಾಹಿತ್ಯ ಪರಿಷತ್, ನಗರ ಘಟಕ ಅಧ್ಯಕ್ಷ ಮ.ಗು. ಸದಾನಂದಯ್ಯ, ಅಲ್ಲಮ ಪ್ರಭುಗಳನ್ನು ಕುರಿತು: ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಮುಖ್ಯ ಅತಿಥಿಗಳು : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಅಧ್ಯಕ್ಷತೆ : ಹಿರಿಯ ಕಲಾವಿದರು ಹಾಗೂ ಸಾಹಿತಿ ಎಲ್.ಶಿವಲಿಂಗಪ್ಪ, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸ್‌ವಾದಿ), ಮೈಸೂರು ಜಿಲ್ಲಾ ಸಮಿತಿ :** ರಾಜಕೀಯ ಸಮ್ಮೇಳನ, ಉದ್ಘಾಟನೆ : ಸಿಪಿಐ (ಎಂ) ರಾಜ್ಯ ಕಾರ್ಯದರ್ಶಿ ಬಸವರಾಜ್, ಸ್ಥಳ: ಮೈಸೂರು ಸಿಟಿ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ ಸಮುದಾಯ ಭವನ, ನಾಲಾಬೀದಿ, ಬೆಳಗ್ಗೆ 11ಕ್ಕೆ.

■ **ಆಮ್ ಆದ್ಮಿ ಪಾರ್ಟಿ, ಮೈಸೂರು ಜಿಲ್ಲಾ ಘಟಕ:** ಒಂದು ದಿನದ ಉಪವಾಸ ಸತ್ಯಾಗ್ರಹ, ಸ್ಥಳ: ಪುರಭವನ, ಗಾಂಧಿಚೌಕ, ಬೆಳಗ್ಗೆ 11.30ಕ್ಕೆ.

■ **ಗೃಹ ರಕ್ಷಕ ದಳ, ಮೈಸೂರು ಜಿಲ್ಲೆ:** ಗೃಹ ರಕ್ಷಕರ ಮೂಲ ತರಬೇತಿ 2ನೇ ಬ್ಯಾಚಿನ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಉಪ ಪೊಲೀಸ್ ಆಯುಕ್ತ ಎ.ಮಾರುತಿ, ಅಪರ ಪೊಲೀಸ್ ಅಧೀಕ್ಷಕ ಎಲ್.ನಾಗೇಶ್, ಉಪ ಪೊಲೀಸ್ ಅಧೀಕ್ಷಕ ಟಿ.ಆರ್.ಪಾಲಾಕ್ಷ, ಚಾಮರಾಜನಗರ ವಿವಿ ಕುಲಸಚಿವ ಡಾ.ಪಿ.ಮಾದೇಶ್, ಅಧ್ಯಕ್ಷತೆ: ಜಿಲ್ಲಾ ಗೃಹ ರಕ್ಷಕ ದಳದ ಗೌರವ ಸಮಾದೇಷ್ಟ ಡಾ. ಎಂ. ಕಾಂತರಾಜು, ಉಪಸ್ಥಿತರು: ಎಂ.ಆರ್.ಚಂದನ್, ಎಸ್. ಮಂಜುನಾಥ್, ಎಂ.ಎನ್. ವಿಶ್ವನಾಥ್, ಸ್ಥಳ: ಡಿಎಆರ್ ಸಮುದಾಯ ಭವನ, ಜ್ಯೋತಿನಗರ, ಸಂಜೆ 4ಕ್ಕೆ.

■ **ಆಕೃತಿ ಪುಸ್ತಕ, ಬೆಂಗಳೂರು:** ಬಾಶೋ ಹಾಯ್ಕು ಪುಸ್ತಕ ಬಿಡುಗಡೆ ಸಮಾರಂಭ, ಕನ್ನಡಕ್ಕೆ: ಡಾ. ಸಿ.ರವೀಂದ್ರನಾಥ್, ಪುಸ್ತಕ ಬಿಡುಗಡೆ: ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ, ಪುಸ್ತಕ ಕುರಿತು: ಕವಯತ್ರಿ ಆರ್. ಪವಿತ್ರ ಪ್ರಿಯಭಾಷಿಣಿ, ಉಪಸ್ಥಿತರು: ಡಾ.ಸಿ.ರವೀಂದ್ರನಾಥ್, ಡಿ.ಎನ್. ಗುರುಪ್ರಸಾದ್, ಪಿ.ಭಾರತೀದೇವಿ ಅವರಿಂದ ಗಾಯನ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ಉತ್ತಿಷ್ಠ ಭಾರತ ಪ್ರತಿಷ್ಠಾನ, ಮೈಸೂರು, ಹಿಮಾಲಯ ಪ್ರತಿಷ್ಠಾನ :** ವಿಶ್ವ ಆರೋಗ್ಯ ದಿನಾಚರಣೆ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಮುಖ್ಯ ಅತಿಥಿಗಳು : ರಾಜಶೇಖರ್ ಆಸ್ಪತ್ರೆ ನಿರ್ದೇಶಕ ಡಾ. ಹೆಚ್.ಬಿ. ರಾಜಶೇಖರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಆರ್.ಕೆ. ನರ್ಸಿಂಗ್ ಹೋಂ ಮುಖ್ಯ ನಿರ್ವಾಹಕರಾದ ಡಾ. ಲಕ್ಷ್ಮೀದೇವಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 5ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪ್ರವಚನಕಾರರಾದ ಪಂಡಿತ್ ಶ್ರೀ ಸತ್ಯಬೋಧಾಚಾರ್ಯ ರಟ್ಟಿಹಳ್ಳಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ–18, ಸ್ಥಳ: ಶ್ರೀರಾಘವೇಂದ್ರ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ:** ಡಾ.ವಸುಂಧರಾ ದೊರೆಸ್ವಾಮಿಯವರ ಶಿಷ್ಯೆ ವಿದುಷಿ ಎಸ್.ಪಿ. ಸೌಂದರ್ಯ ಅವರ ಭರತನಾಟ್ಯ ರಂಗಪ್ರವೇಶ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಧರಣಿದೇವಿ ಮಾಲಗತ್ತಿ, ಮುಖ್ಯ ಅತಿಥಿಗಳು: ಮಕ್ಕಳ ತಜ್ಞ ಡಾ. ಯು.ಜಿ. ಶೆಣೈ, ನೃತ್ಯಗಿರಿ ಪ್ರದರ್ಶಕ ಕಲೆಗಳ ಅಕಾಡೆಮಿ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ಕೃಪಾ ಫಡ್ಕೆ, ಅಧ್ಯಕ್ಷತೆ: ವಿಪಿಎಸಿ ಮತ್ತು ಸಿ ಅಧ್ಯಕ್ಷೆ ಸವಿತಾ ರಮೇಶ್, ಗುರುವಂದನೆ: ವಿಪಿಎಸಿ ಮತ್ತು ಸಿ ನಿರ್ದೇಶಕರಾದ ಗುರು ಡಾ.ವಸುಂಧರಾ ದೊರೆಸ್ವಾಮಿ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಅಘಹರಾನಂದ ಅವರಿಂದ ಸೋದರ ಸಂನ್ಯಾಸಿಗಳೊಂದಿಗೆ ಸ್ವಾಮಿ ವಿವೇಕಾನಂದರು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.


■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಭಗವದ್ಗೀತಾ ಅಭಿಯಾನ, ಪ್ರವಚನಕಾರರಾದ ಪಂಡಿತ್ ಶ್ರೀ ಸತ್ಯಬೋಧಾಚಾರ್ಯ ರಟ್ಟಿಹಳ್ಳಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ –18, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.

■ **ರಂಗಾಯಣ:** ರಂಗಾಯಣದ ರೆಪರ್ಟರಿ ಕಲಾವಿದರಿಂದ ಗೋರ್‌ಮಾಟಿ ನಾಟಕ ಪ್ರದರ್ಶನ, ರಂಗರೂಪ: ಶಿರಗಾನಹಳ್ಳಿ ಶಾಂತನಾಯಕ್, ನಿರ್ದೇಶನ: ಸಿ.ಬಸವಲಿಂಗಯ್ಯ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಕೇಶವ ವಿ.ಫಡ್ಕೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳ ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ–ಡಾ.ತೀತೀರ ರೇಖಾವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಮತ ಹಾಕೋಣ ಬನ್ನಿ –18ನೇ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಕುಮಾರ ಅವರೊಂದಿಗೆ ಮಾತುಕತೆ ಇವರೊಂದಿಗೆ ಪಾಲ್ಗೊಳ್ಳುತ್ತಾರೆ: ಪ್ರಭುಸ್ವಾಮಿ ಮಳಿಮಠ, 9.40 ನಮ್ಮ ಆರೋಗ್ಯ ಕಾರ್ಯಕ್ರಮ, ವಿಶ್ವ ಆರೋಗ್ಯ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ತಿಳಿಸಿಕೊಡಲಿದ್ದಾರೆ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯ ಅಧ್ಯಕ್ಷ ಡಾ.ಮೋತಿ ಮತ್ತು ಕಾರ್ಯದರ್ಶಿ ಡಾ.ಶಶಿಕಿರಣ್ ಕೆ.ಬಿ., ಪ್ರಸ್ತುತಿ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಮೇಟಗಳ್ಳಿಯಲ್ಲಿರುವ ಕುವೆಂಪು ಶತಮಾನೋತ್ಸವ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ಶ್ರೀಗುರು ಕಲಾ ಶಾಲೆಯ ಮಕ್ಕಳಿಂದ "ಯುಗಾದಿ" ಕುರಿತ ಕಾರ್ಯಕ್ರಮ, 11.00 ಮಿಶ್ರ ಮಾಧುರ್ಯ, ಮತದನಕ್ಕೊಂದು ಪ್ರಶ್ನೆಗೆ ಉತ್ತರ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ–ಅಂಬಿಕಾ ಕೆ.ರಾಮ್, 2.35 ಕನ್ನಡ ಚಲನಚಿತ್ರ ಧ್ವನಿ ವಾಹಿನಿ "ಪ್ರತಿಧ್ವನಿ", 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಶ್ರೀ ರಾಮ ನಿರ್ಯಾಣ, ಪ್ರಸ್ತುತಿ–ಪುತ್ತೂರು ಬೆಟ್ಟಂಪಾಡಿಯ ಕರ್ನಾಟಕ ಯಕ್ಷ ಭಾರತಿ ಕಲಾವಿದರು, 6.50 ಕೃಷಿರಂಗ– ತೋರಣ ಹೂರಣ, ಪ್ರಸ್ತುತಿ– ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, 8.00 "ಹಾದಿಯಲ್ಲಿ ಕಂಡ ಮುಖ", ಬಾನುಲಿ ಸರಣಿ, ಅಂಧ ಗಾಯಕ ಜೋಡಿ ಕುಮಾರಸ್ವಾಮಿ ಮತ್ತು ಸುಧಾಮಣಿ ಅವರೊಂದಿಗೆ ಸಂವಾದ, ಪ್ರಸ್ತುತಿ–ಅಬ್ದುಲ್ ರಶೀದ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಪಂಡಿತ್ ಉಮಾಕಾಂತ್ ಗುಂಡೇಚಾ ಮತ್ತು ಅನಂತ್ ಗುಂಡೇಚಾ, ಧ್ರುಪದ್–ಧಮರ್–ಗಾಯನ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಆರೋಗ್ಯ ಸೇವೆಯಲ್ಲಿ ದೊಡ್ಡ ಸುಧಾರಣೆ ತರಲು ಸಹಕರಿಸಿ

ವೈದ್ಯಕೀಯ ಕ್ಷೇತ್ರದ ವೃತ್ತಿನಿರತರ ಬೆಂಬಲ ಕೋರಿದ ಬಿಜೆಪಿ ಅಭ್ಯರ್ಥಿ ಯದುವೀರ್

ಮೈಸೂರು,ಏ.6(ಪಿಎಂ)– ಪ್ರಾಥಮಿಕ ಆರೋಗ್ಯ ಸೇವೆಯಲ್ಲಿ ದೊಡ್ಡ ಮಟ್ಟದ ಸುಧಾರಣೆ ತರುವ ಮೂಲಕ ಮೈಸೂರು ಮತ್ತು ಕೊಡಗು ಲೋಕಸಭಾ ಕ್ಷೇತ್ರವನ್ನು ಮಾದರಿ ಆಗಿಸಬೇಕೆಂಬ ಆಕಾಂಕ್ಷೆ ಹೊಂದಿದ್ದು, ಈ ನಿಟ್ಟಿನಲ್ಲಿ ತಮ್ಮೆಲ್ಲರ ಸಹಕಾರ ಅಗತ್ಯ ಎಂದು ವೈದ್ಯಕೀಯ ಕ್ಷೇತ್ರದ ವೃತ್ತಿನಿರತರಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದರು.

ಮೈಸೂರಿನ ಬಿಎನ್ ರಸ್ತೆಯಲ್ಲಿರುವ ಹೋಟೆಲ್ ಪೈ ವಿಸ್ತಾದಲ್ಲಿ ಲೋಕಸಭಾ ಚುನಾವಣೆ ಪ್ರಯುಕ್ತ ಬಿಜೆಪಿ ಮೈಸೂರು ನಗರ–ಜಿಲ್ಲೆ ಹಾಗೂ ಬಿಜೆಪಿ ರಾಜ್ಯ ವೈದ್ಯಕೀಯ ಪ್ರಕೋಷ್ಠ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ವೈದ್ಯಕೀಯ ವೃತ್ತಿನಿರತರ ಸಭೆಯಲ್ಲಿ ಅವರು ಮಾತನಾಡಿದರು.

ಸಮೃದ್ಧ ಸಮಾಜಕ್ಕೆ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳ ಅಭಿವೃದ್ಧಿ ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಅಂದಿನ ಮೈಸೂರು ಸಂಸ್ಥಾನದಲ್ಲಿ ಈ ಎರಡೂ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಪ್ರಸ್ತುತ ಪ್ರಾಥಮಿಕ ಆರೋಗ್ಯ ಸೇವೆಗೆ ದೊಡ್ಡ ಉತ್ತೇಜನ ನೀಡಬೇಕಿದೆ. ಇಲ್ಲವಾದರೆ ದೊಡ್ಡ ಮಟ್ಟದ ಆರೋಗ್ಯ ಸಂಸ್ಥೆಗಳ ಮೇಲೆ ಒತ್ತಡ ಹೆಚ್ಚಾಗಲಿದೆ. ಹೀಗಾಗಿ ಮೈಸೂರಲ್ಲಿ ತಳಮಟ್ಟದ ಹೆಲ್ತ್‌ಕೇರ್ ವ್ಯವಸ್ಥೆಗೆ ಹೆಚ್ಚಿನ ಉತ್ತೇಜನ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಬಿಜೆಪಿ ರಾಜ್ಯ ವೈದ್ಯಕೀಯ ಪ್ರಕೋಷ್ಠದ ಸಭೆ ನಡೆಯಿತು.

ನೀಡುವುದು ಅತ್ಯಂತ ಅಗತ್ಯ ಎಂದರು.

ನಮ್ಮ ಆರೋಗ್ಯ ಸೇವಾ ವಲಯಕ್ಕೆ ಮೈಸೂರು ಅರಸರು ಕೊಟ್ಟ ಕೊಡುಗೆ ಎಲ್ಲರಿಗೂ ಗೊತ್ತಿದೆ. ಅಂದು ಬ್ರಿಟನ್‌ಗೆ ಹೋಲಿಸಿದರೆ ಮೈಸೂರು ಸಂಸ್ಥಾನದಲ್ಲೇ ಉತ್ತಮ ಆರೋಗ್ಯ ಸೌಲಭ್ಯ ಇತ್ತು. ವಿಶ್ವ ರ್‍ಯಾಂಕಿಂಗ್‌ನಲ್ಲಿ 3 ಅಥವಾ 4ನೇ ಸ್ಥಾನವನ್ನು ಅಂದು ಮೈಸೂರು ಹೊಂದಿತ್ತು. ಜರ್ಮನಿ ಮತ್ತು ಇಂಗ್ಲೆಂಡ್‌ಗಿಂತಲೂ ಉತ್ತಮ ಹೆಲ್ತ್‌ಕೇರ್ ವ್ಯವಸ್ಥೆ ಮೈಸೂರು ಸಂಸ್ಥಾನದಲ್ಲಿತ್ತು. ಪ್ರತಿಯೊಂದು ಸ್ಪೆಷಾಲಿಟಿಯಲ್ಲಿಯೂ ಉತ್ತಮ ಆರೋಗ್ಯ ಸೇವೆಗಳು ಲಭ್ಯವಿದ್ದವು. ನಿಮ್ಹಾನ್ಸ್‌ನಲ್ಲಿ ಹೆರಿಟೇಜ್ ಮ್ಯೂಸಿಯಂ ಉದ್ಘಾಟನೆಗೆ ಹೋಗಿದ್ದಾಗ ಈ ವಿಚಾರಗಳು ಪ್ರಸ್ತಾಪವಾದವು ಎಂದು ಹೇಳಿದರು.

ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ, ಮೈಸೂರಲ್ಲಿ ಕೆಆರ್ ಆಸ್ಪತ್ರೆ, ವೈದ್ಯರ ತರಬೇತಿಗಾಗಿ ಮೈಸೂರು ಮೆಡಿಕಲ್ ಕಾಲೇಜು ಅಂದೇ ಸ್ಥಾಪನೆಗೊಂಡವು. ಆಯುರ್ವೇದ ಸೇರಿದಂತೆ ಭಾರತದ ಪಾರಂಪರಿಕ ವೈದ್ಯಕೀಯ ಪದ್ಧತಿಗಳಿಗೂ ಪ್ರೋತ್ಸಾಹ ನೀಡಲಾಗಿತ್ತು. ಅದೇ ರೀತಿಯಲ್ಲಿ ಇಂದು ನಮ್ಮ ಪ್ರಧಾನಿಗಳು ಆರೋಗ್ಯ ಕ್ಷೇತ್ರಕ್ಕೆ ಕೊಡುಗೆ ನೀಡುತ್ತಿದ್ದಾರೆ. ವೈದ್ಯಕೀಯ ಕಾಲೇಜುಗಳನ್ನು ಆರಂಭಕ್ಕೆ ಉತ್ತೇಜನ ನೀಡಿದ್ದಾರೆ. ದೇಶದಲ್ಲಿ ಕಳೆದ 10 ವರ್ಷಗಳಲ್ಲಿ ಏಮ್ಸ್ ಸಂಸ್ಥೆಗಳ ಸಂಖ್ಯೆ 7ರಿಂದ 22ಕ್ಕೆ ಏರಿಕೆಯಾಗಿವೆ. ಯೋಗಾಭ್ಯಾಸಕ್ಕೂ ಉತ್ತೇಜನ ನೀಡಲಾಗುತ್ತಿದೆ ಎಂದು ತಿಳಿಸಿದರು.

ಆಯುರ್ವೇದ ಸೇರಿದಂತೆ ಪರ್ಯಾಯ ಆರೋಗ್ಯ ಸೇವೆಗೆ ಸರ್ಕಾರಿ ಪ್ರೋತ್ಸಾಹದ ಮೂಲಕ ಇನ್ನೂ ದೊಡ್ಡ ಮಟ್ಟದಲ್ಲಿ ಸುಧಾರಣೆಯನ್ನು ನಮ್ಮಲ್ಲಿ ತರಬೇಕಿದೆ. ನಿಮ್ಮ ಸಲಹೆ–ಸಹಕಾರದೊಂದಿಗೆ ಮೈಸೂರು ಮತ್ತು ಕೊಡಗು ಕ್ಷೇತ್ರದ ಹೆಲ್ತ್‌ಕೇರ್ ವ್ಯವಸ್ಥೆಯಲ್ಲಿ ದೊಡ್ಡ ಅಭಿವೃದ್ಧಿ ತರಬೇಕೆಂಬ ಆಕಾಂಕ್ಷೆ ಇದೆ. ಈಗಾಗಲೇ ಮೈಸೂರಿನಲ್ಲಿ ಸಂಪರ್ಕ ವ್ಯವಸ್ಥೆಯ ಸುಧಾರಣೆಯಾಗಿದೆ. ಆದರೆ ಇನ್ನು ಹೆಚ್ಚಿನ ಅಭಿವೃದ್ಧಿಯಾಗಬೇಕು. ಇದು ಹೆಲ್ತ್‌ಕೇರ್ ವ್ಯವಸ್ಥೆಗೂ ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಸಮಗ್ರ ಅಭಿವೃದ್ಧಿ ಕೈಗೊಳ್ಳಬೇಕೆಂಬ ದೃಷ್ಟಿಕೋನ ಹೊಂದಿದ್ದೇನೆ. ಇದಕ್ಕೆಲ್ಲಾ ತಮ್ಮ ಸಹಕಾರ ಅಗತ್ಯ ಎಂದು ಕೋರಿದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಮೈಸೂರು ನಗರದಲ್ಲಿ 3,500 ವೈದ್ಯರು ಇದ್ದು, ಈ ಎಲ್ಲರೂ ಮನಸ್ಸು ಮಾಡಿದರೆ ನಮ್ಮ ಅಭ್ಯರ್ಥಿಗೆ ಲಕ್ಷ ಮತಗಳನ್ನು ಹಾಕಿಸಬಹುದು. ಈ ನಿಟ್ಟಿನಲ್ಲಿ ಮನಸ್ಸು ಮಾಡಬೇಕೆಂದು ಮನವಿ ಮಾಡಿದರು. ವೈದ್ಯಕೀಯ ಪ್ರಕೋಷ್ಠದ ರಾಜ್ಯ ಸಹ ಸಂಚಾಲಕ ಡಾ.ಸದಾನಂದ, ಬಿಜೆಪಿ ಮುಖಂಡರಾದ ಎಂ.ವಿ.ಫಣೀಶ್, ವೈ.ವಿ.ರವಿಶಂಕರ್, ಮುಖಂಡರಾದ ಡಾ.ಚಂದ್ರಶೇಖರ್, ಡಾ.ಕೆ.ರವೀಂದ್ರನಾಥ್, ಜೀವಾಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಸೇರಿದಂತೆ ವೈದ್ಯರು ಹಾಗೂ ವೈದ್ಯಕೀಯ ಕ್ಷೇತ್ರದ ವೃತ್ತನಿರತರು ಹಾಜರಿದ್ದರು.

ಬರ ಪರಿಹಾರ ವಿಳಂಬಕ್ಕೆ ಕೇಂದ್ರ ಸರ್ಕಾರ ಕಾರಣವಲ್ಲ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟನೆ

ಬೆಂಗಳೂರು, ಏ.6– ಕರ್ನಾಟಕಕ್ಕೆ ಬರ ಪರಿಹಾರದ ಅನುದಾನ ಬಿಡುಗಡೆ ವಿಳಂಬವಾಗಲು ಕೇಂದ್ರ ಸರ್ಕಾರ ಕಾರಣವಲ್ಲ. ಉನ್ನತಾಧಿಕಾರ ಸಮಿತಿ ಸಭೆ ನಡೆಸಲು ಕೇಂದ್ರ ಚುನಾವಣಾ ಆಯೋಗದ ಅನುಮತಿ ಬಾರದಿರುವುದು ವಿಳಂಬಕ್ಕೆ ಕಾರಣ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಮಾಧ್ಯಮ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಂತರ ಸಚಿವಾಲಯ ಅಧಿಕಾರಿಗಳ ತಂಡ ರಾಜ್ಯದಲ್ಲಿ ಬರ ಪರಿಸ್ಥಿತಿ ಕುರಿತು ಅಧ್ಯಯನ ನಡೆಸಿ ಸಲ್ಲಿಸಿದ ವರದಿಯನ್ನು ಕೃಷಿ ಮತ್ತು ಗೃಹ ಸಚಿವಾಲಯಗಳು ಪರಿಶೀಲನೆ ನಡೆಸಿದ್ದವು. ಆದರೆ, ಅಷ್ಟರಲ್ಲೇ ಚುನಾವಣೆ ಘೋಷಣೆಯಾಯಿತು. ಆಯೋಗದ ಅನುಮತಿ ದೊರಕದೇ ಉನ್ನತಾಧಿಕಾರ ಸಮಿತಿ ಸಭೆ ನಡೆಸಲು ಸಾಧ್ಯವಾಗಿಲ್ಲ' ಎಂದರು.

ಕರ್ನಾಟಕ ಮಾತ್ರವಲ್ಲ, ತೆಲಂಗಾಣ, ತಮಿಳುನಾಡು, ಸಿಕ್ಕಿಂ, ಮಿಜೋರಾಂ, ಅಸ್ಸಾಂ ಸೇರಿದಂತೆ ಹಲವು ರಾಜ್ಯಗಳಿಗೆ ವಿಪತ್ತು ಪರಿಹಾರ ನಿಧಿಯಡಿ ನೆರವು ನೀಡುವ ಪ್ರಸ್ತಾವಗಳು ಉನ್ನತಾಧಿಕಾರ ಸಮಿತಿ ಮುಂದಿವೆ. ಚುನಾವಣಾ ಆಯೋಗದ ಅನುಮತಿ ದೊರಕಿದ ಬಳಿಕವೇ ತೀರ್ಮಾನ ಕೈಗೊಳ್ಳಬೇಕಿದೆ ಎಂದು ಹೇಳಿದರು. ಕೇಂದ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಕಾಯ್ದೆಯಲ್ಲಿ ಪರಿಹಾರ ವಿತರಣೆಗೆ ಅವಕಾಶ ಇಲ್ಲ. ಪರಿಹಾರ, ನೆರವು, ಮಧ್ಯಂತರ ಪರಿಹಾರ ಎಂಬ ಉಲ್ಲೇಖಗಳೇ ಇಲ್ಲ. ಕೇಂದ್ರ ಸರ್ಕಾರ ಇನ್ಪುಟ್ ಸಹಾಯಧನ ಮತ್ತು ಪರಿಸ್ಥಿತಿ ಸುಧಾರಣೆಗೆ ಸಹಾಯಧನವನ್ನು ಮಾತ್ರ ನೀಡುತ್ತದೆ ಎಂದು ಕಾಯ್ದೆಯನ್ನು ಓದಿದರು. ತುರ್ತು ಪರಿಹಾರ ನೀಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು. ಇದಕ್ಕಾಗಿ ರಾಜ್ಯ ವಿಪತ್ತು ಪರಿಹಾರ ನಿಧಿಗೆ ಕೇಂದ್ರವು ವಂತಿಗೆ ನೀಡುತ್ತದೆ. ಕರ್ನಾಟಕಕ್ಕೆ ಎರಡೂ ಕಂತುಗಳ 629 ಕೋಟಿಯನ್ನು ಮುಂಗಡವಾಗಿಯೇ ಬಿಡುಗಡೆ ಮಾಡಲಾಗಿತ್ತು.



ಆರೋಪದಲ್ಲಿ ಹುರುಳಿಲ್ಲ: ತೆರಿಗೆ ಪಾಲು, ಅನುದಾನ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಇಲ್ಲಿನ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವ ಆರೋಪದಲ್ಲಿ ಹುರುಳಿಲ್ಲ. ಸುಳ್ಳು ಆರೋಪ ಮಾಡುವುದರಲ್ಲಿ ಕಾಂಗ್ರೆಸ್ ಪಕ್ಷದವರು ನಿಸ್ಸೀಮರು ಎಂದು ನಿರ್ಮಲಾ ಹೇಳಿದರು. ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳಿಗೆ ವಿಶೇಷ ನೆರವು ನೀಡಬೇಕೆಂಬ ಶಿಫಾರಸು 15ನೇ ಹಣಕಾಸು ಆಯೋಗದ ಮಧ್ಯಂತರ ವರದಿಯಲ್ಲಿ ಮಾತ್ರ ಇತ್ತು. ಅಂತಿಮ ವರದಿಯಲ್ಲಿ ಅಂತಹ ಶಿಫಾರಸು ಇರಲಿಲ್ಲ. ಬೇರೆ ಯಾವ ರಾಜ್ಯಗಳೂ ಅಂತಹ ಬೇಡಿಕೆ ಇಡುತ್ತಿಲ್ಲ ಎಂದರು.

ರಾಜ್ಯಗಳಿಗೆ ಬಂಡವಾಳ ವೆಚ್ಚಕ್ಕೆ ನೆರವು ನೀಡಬೇಕೆಂಬ ಶಿಫಾರಸು ಕೂಡ ಇರಲಿಲ್ಲ. ಪ್ರಧಾನಿ ನರೇಂದ್ರ ಮೋದಿಯವರ ಆಶಯದಂತೆ ಕೇಂದ್ರ ಸರ್ಕಾರ ರಾಜ್ಯಗಳಿಗೆ 50 ವರ್ಷಗಳ ಅವಧಿಗೆ ಬಡ್ಡಿರಹಿತ ಸಾಲ ನೀಡಿದೆ. ಈ ಬಗ್ಗೆ ಕಾಂಗ್ರೆಸ್ ಪಕ್ಷದವರು ಏಕೆ ಮಾತನಾಡುತ್ತಿಲ್ಲ ಎಂದು ಕೇಳಿದರು. ಪ್ರಧಾನಿ ಮೋದಿಯವರು ಕರ್ನಾಟಕದ ಎಲ್ಲ ಬೇಡಿಕೆಗಳಿಗೂ ಸ್ಪಂದಿಸಿದ್ದಾರೆ. ಇಲ್ಲಿನ ಜನರು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಆರೋಪಕ್ಕೆ ಕಿವಿಗೊಡುವುದಿಲ್ಲ ಎಂಬ ವಿಶ್ವಾಸವಿದೆ ಎಂದರು.

ನಮ್ಮ ತೆರಿಗೆ– ನಮ್ಮ ಹಕ್ಕು ಎಂಬ ಘೋಷಣೆ ಚೆನ್ನಾಗಿದೆ. ಆದರೆ, ಅದನ್ನು ಹೇಳುತ್ತಿರುವವರ ಉದ್ದೇಶ ಸರಿ ಇಲ್ಲ. ಹಣಕಾಸು ಅವ್ಯವಹಾರದ ಪ್ರಕರಣಗಳಲ್ಲಿ ಜಾಮೀನು ಪಡೆದು ಹೊರಗಿರುವ ಕಾಂಗ್ರೆಸ್ ಪಕ್ಷದ ನಾಯಕರು ತನಿಖಾ ಸಂಸ್ಥೆಗಳ ಬಗ್ಗೆ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಿರುವುದು ದುರದೃಷ್ಟಕರ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಗ್ಯಾರಂಟಿಗಳಂತೆ ನಿಮಗೆ ನನ್ನ ಸೇವೆ ಗ್ಯಾರಂಟಿ

ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಮನವಿ

ಮೈಸೂರು, ಏ.6(ಎಸ್‌ಬಿಡಿ)– ಕಾಂಗ್ರೆಸ್ ಕೊಟ್ಟ ಮಾತಿನಂತೆ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಿದಂತೆ ನಾನೂ ನಿಮ್ಮ ಸೇವಕನಾಗಿ ದುಡಿಯುತ್ತೇನೆಂದು ಗ್ಯಾರಂಟಿ ನೀಡುತ್ತೇನೆ. ದಯವಿಟ್ಟು ಅವಕಾಶ ಮಾಡಿಕೊಡಿ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮನವಿ ಮಾಡಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಆಲನಹಳ್ಳಿ ಹಾಗೂ ಹೊಸಹುಂಡಿ ಗ್ರಾಮಗಳಲ್ಲಿ ಮಾಜಿ ಶಾಸಕ ಡಾ.ಯತೀಂದ್ರ ಜೊತೆಗೂಡಿ ಮತಯಾಚನೆ ಮಾಡಿದ ಅವರು, ವಿಧಾನಸಭಾ ಚುನಾವಣೆಗೆ ಮುನ್ನ ಕಾಂಗ್ರೆಸ್ ನೀಡಿದ್ದ ಗ್ಯಾರಂಟಿಗಳನ್ನು ಸರ್ಕಾರ ಬಂದ ಕೂಡಲೇ ಹಂತ ಹಂತವಾಗಿ ಅನುಷ್ಠಾನಗೊಳಿಸಿತು. ಹಾಗೆಯೇ ನನಗೆ ಆಶೀರ್ವದಿಸಿ ಆಯ್ಕೆ ಮಾಡಿದರೆ ನಿಮ್ಮ ಸೇವಕನಾಗಿ ಪ್ರಾಮಾಣಿಕವಾಗಿ ದುಡಿಯುತ್ತೇನೆ ಎಂದರು.

ಕಾಂಗ್ರೆಸ್ ಪ್ರತಿಯೊಬ್ಬರನ್ನೂ ಒಟ್ಟಿಗೆ ಕರೆದೊಯ್ಯುವ ಜನಸಾಮಾನ್ಯರ ಪಕ್ಷವಾಗಿದೆ. ಬಿಜೆಪಿಯವರು ಮಾತನಾಡುವುದನ್ನು ಬಿಟ್ಟರೆ ಬೇರೇನೂ ಮಾಡಿಲ್ಲ. ಸುಳ್ಳುಗಳ ಮೂಲಕ ಜನರ ದಿಕ್ಕು ತಪ್ಪಿಸುವ



ಪ್ರಯತ್ನ ಮಾಡುತ್ತಾರಷ್ಟೇ. ಕರ್ನಾಟಕದ ಬಗ್ಗೆ ಕೇಂದ್ರ ಸರ್ಕಾರ ನಿರ್ಲಕ್ಷ್ಯ ಧೋರಣೆ ಹೊಂದಿದೆ. ಇದನ್ನೆಲ್ಲಾ ಜನತೆ ಅರ್ಥ ಮಾಡಿಕೊಳ್ಳಬೇಕು. ಸಿದ್ದರಾಮಯ್ಯನವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಮೈಸೂರಿನ ಅಭಿವೃದ್ಧಿ ಕಾರ್ಯಗಳಿಗೆ ಸಾವಿರಾರು ಕೋಟಿ ಹಣ ನೀಡಿದರು. ಈಗಲೂ ಸಾಕಷ್ಟು ಯೋಜನೆಗಳಿಗೆ ಅನುದಾನ ನೀಡಿದ್ದಾರೆ. ನನಗೆ ನೀವು ಹಾಕುವ ಮತಕ್ಕೆ ಐದು ವರ್ಷವೂ ನಿಮ್ಮ ಸೇವಕನಾಗಿ ಕೆಲಸ ಮಾಡುತ್ತೇನೆ. ಒಂದು ಬಾರಿ ಅವಕಾಶ ಕೊಡಿ ಎಂದು ಮನವಿ ಮಾಡಿದರು.

ಯೋಚಿಸಿ ಮತ ಹಾಕಿ: ಮಾಜಿ ಶಾಸಕ ಡಾ.ಯತೀಂದ್ರ ಮಾತನಾಡಿ, ದೇಶದಲ್ಲಿ ಬಡಜನರ ಬದುಕು ಉಳಿಯಬೇಕಾದರೆ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಬರಬೇಕು. ಹಾಗಾಗಿ ಎಂ.ಲಕ್ಷ್ಮಣ ಅವರಿಗೆ ನೀಡುವ ಒಂದೊಂದು ಮತವೂ ಬಡವರ ಬದುಕು ಉಳಿಸುವ ಮತ ಎನ್ನುವುದನ್ನು ಮರೆಯಬೇಡಿ. ಏ.26ರಂದು ಮತದಾನ ನಡೆಯಲಿದ್ದು, ದೇಶವನ್ನು ಯಾರು ಮುನ್ನಡೆಸಿದರೆ ಒಳ್ಳೆಯದು ಎಂದು ಯೋಚಿಸಿ ಮತ ಚಲಾಯಿಸಿ. ಕಾಂಗ್ರೆಸ್ ಹಾಗೂ ಬಿಜೆಪಿ ಸರ್ಕಾರಗಳ ಅವಧಿಯ ಆಡಳಿತವನ್ನು ತುಲನೆ ಮಾಡಿ, ಯಾವ ಪಕ್ಷ ಸೂಕ್ತ ಎಂದು ಆಯ್ಕೆ ಮಾಡಿ ಎಂದು ತಿಳಿಸಿದರು.

ಚುನಾವಣಾ ಅಕ್ರಮ ಆರೋಪ: ಮಾಜಿ ಸಚಿವೆ ಶಶಿಕಲಾ ಜೊಲ್ಲೆಗೆ ಬಿಗ್ ರಿಲೀಫ್



ಬೆಂಗಳೂರು, ಏ.6– ಕಳೆದ ವಿಧಾನಸಭೆ ಚುನಾವಣೆ ವೇಳೆ ಅಕ್ರಮ ನಡೆಸಿದ ಆರೋಪದ ಮೇಲೆ ನಿಪ್ಪಾಣಿ ಶಾಸಕಿ ಹಾಗೂ ಮಾಜಿ ಸಚಿವೆ ಶಶಿಕಲಾ ಜೊಲ್ಲೆ ವಿರುದ್ಧ ದಾಖಲಿಸಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ. ಬಿಜೆಪಿ ಶಾಸಕಿ ಶಶಿಕಲಾ ಜೊಲ್ಲೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ನೇತೃತ್ವದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ವಾದ–ಪ್ರತಿವಾದ ಆಲಿಸಿದ ಪೀಠವು ಪ್ರಕರಣ ಸಂಬಂಧ ಶಶಿಕಲಾ ಜೊಲ್ಲೆ ವಿರುದ್ಧ ನಿಪ್ಪಾಣಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್, ಅದನ್ನು ಆಧರಿಸಿ ತನಿಖೆ ನಡೆಸಿ ಪೊಲೀಸರು ಸಲ್ಲಿಸಿದ್ದ ಆರೋಪ ಪಟ್ಟಿ ಮತ್ತು ಪ್ರಕರಣ ಸಂಬಂಧ ನಿಪ್ಪಾಣಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಯನ್ನು ರದ್ದುಪಡಿಸಿದೆ. ಅಲ್ಲದೇ, ಅರ್ಜಿದಾರ ಆರೋಪಿಯನ್ನು ಪ್ರಕರಣದಿಂದ ಮುಕ್ತಗೊಳಿಸಲಾಗಿದೆ ಎಂದು ಹೇಳಿದೆ.

ಪುಲ್ವಾಮ ದಾಳಿ ಹೇಳಿಕೆ: ಶಾಸಕರ ವಿರುದ್ಧ ದೂರು

ಬೆಂಗಳೂರು: ಕಾಶ್ಮೀರದ ಪುಲ್ವಾಮ ದಾಳಿಗೆ ಬಿಜೆಪಿ ಕಾರಣ ಎಂಬ ಗೃಹ ಸಚಿವ ಪರಮೇಶ್ವರ್ ಮತ್ತು ಕೆಲ ಕಾಂಗ್ರೆಸ್ ಶಾಸಕರ ಹೇಳಿಕೆ ವಿಚಾರವಾಗಿ ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ಸಲ್ಲಿಕೆ ಮಾಡಿದೆ.

ಸಚಿವ ಪರಮೇಶ್ವರ್ ಮತ್ತು ಶಾಸಕರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ದೂರು ನೀಡಲಾಗಿದೆ. ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣ ಸ್ವಾಮಿ, ಬಿಜೆಪಿ ರಾಜ್ಯ ವಕ್ತಾರ ಅಶೋಕ್ ಗೌಡ, ಕಾನೂನು ಪ್ರಕೋಷ್ಠದ ರಾಜ್ಯ ಸಂಚಾಲಕ ವಸಂತ್ ಕುಮಾರ್ ಅವರಿಂದ ನೃಪತುಂಗ ರಸ್ತೆಯಲ್ಲಿರುವ ಮುಖ್ಯ ಚುನಾವಣಾ ಅಧಿಕಾರಿಯವರಿಗೆ ದೂರು ನೀಡಲಾಗಿದೆ.

ರಾಮಮಂದಿರ ಉದ್ಘಾಟನೆಗೆ ಬಂದಿದ್ದ ಕಾಂಗ್ರೆಸ್ ನಾಯಕರ ಪಕ್ಷದಿಂದ ವಜಾಗೊಳಿಸಲಾಗಿದೆ

ಅಜ್ಮೀರ್, ಏ. 6: ಅಯೋಧ್ಯೆ ರಾಮಮಂದಿರದ ಪ್ರಾಣ ಪ್ರತಿಷ್ಠಾ ಕಾರ್ಯಕ್ರಮಕ್ಕೆ ಬರದಂತೆ ಕಾಂಗ್ರೆಸ್ ತನ್ನ ನಾಯಕರಿಗೆ ತಾಕೀತು ಮಾಡಿತ್ತು. ಪ್ರಾಣ ಪ್ರತಿಷ್ಠಾಪನೆಗೆ ಆಗಮಿಸಿದ್ದ ಕೆಲ ನಾಯಕರನ್ನು ಪಕ್ಷದಿಂದ ಆರು ವರ್ಷ ಉಚ್ಚಾಟನೆ ಮಾಡಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಲೋಕಸಭೆ ಚುನಾವಣಾ ಪ್ರಚಾರದ ಅಂಗವಾಗಿ ಶನಿವಾರ ಅಜ್ಮೀರ್‌ನಲ್ಲಿ ರೋಡ್ ಶೋ ಮಾಡಿ ಬಳಿಕ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ಶ್ರೀರಾಮನನ್ನು ದ್ವೇಷಿಸುತ್ತದೆ ಎಂದು ಕಿಡಿಕಾರಿದ್ದಾರೆ.

ರಾಮಮಂದಿರ ನಿರ್ಮಾಣದಿಂದ ಎಲ್ಲರಿಗೂ ಸಂತೋಷವಾಗಿದೆಯೋ, ಇಲ್ಲವೇ ನೀವೇ ಹೇಳಿ. ಆದರೆ ಕಾಂಗ್ರೆಸ್ ಮಾತ್ರ ರಾಮನನ್ನು ಎಷ್ಟು ದ್ವೇಷಿಸುತ್ತದೆ ಎಂದರೆ ಅವರು ಪ್ರಾಣಪ್ರತಿಷ್ಠೆಗೆ ಬರುವವರನ್ನು ವಿರೋಧಿಸುವುದು ಎಷ್ಟು ಸೂಕ್ತ ಎಂದು ಪ್ರಶ್ನಿಸಿದ್ದಾರೆ.

ಶ್ರೀರಾಮನಿಲ್ಲದ ಈ ದೇಶವನ್ನು ನೀವು ಊಹಿಸಬಲ್ಲಿರಾ? ನಮ್ಮ ದಿನನಿತ್ಯ ಆರಂಭವಾಗುವುದೇ ರಾಮನಿಂದ ಕೊನೆಗೊಳ್ಳುವುದು ಕೂಡ ರಾಮನಿಂದ ಆದರೆ ನಿಮಗೆ (ಕಾಂಗ್ರೆಸ್) ಯಾಕೆ ಆ ರಾಮನ ಮೇಲೆ ಅಷ್ಟು ಕೋಪ ಇದುವನ್ನಗೆ ಅರ್ಥವಾಗುತ್ತಿಲ್ಲ ಎಂದು ಹೇಳಿದ್ದಾರೆ.

ನಮ್ಮ ಮನೆಯಲ್ಲಿ ರಾಮನಿದ್ದಾನೆ ಇನ್ನೇನು ಕೆಲ ದಿನಗಳಲ್ಲಿ ರಾಮನವಮಿ ಬರುತ್ತದೆ. ಪ್ರತಿಯೊಬ್ಬರು ಅದ್ದೂರಿಯಾಗಿ ರಾಮನವಮಿ ಆಚರಿಸುತ್ತಾರೆ. ನೀವು ಎಷ್ಟು ಪ್ರತಿಭಟಿಸುತ್ತೀರಿ ನೋಡೋಣ ಎಂದು ವಾಗ್ದಾಳಿ ಮಾಡಿದ್ದಾರೆ

ಇನ್ನು ರಾಮಮಂದಿರ ನಿರ್ಮಾಣದಿಂದಾಗಿ ಇಡೀ ಅಭಿವೃದ್ಧಿ ಹಿನ್ನಡೆಯಾಗಿದೆ ಎಂದು ಕಾಂಗ್ರೆಸ್ ಆರೋಪ ವಿಚಾರವಾಗಿ ಮಾತನಾಡಿದ ಅವರು, ಬಡವರು, ಹಿಂದುಳಿದವರು ಮತ್ತು ಯುವಕರ ಕಲ್ಯಾಣದ ಬಗ್ಗೆ ಕಾಂಗ್ರೆಸ್ ಎಂದಿಗೂ ಯೋಚಿಸಿಲ್ಲ. 100 ವರ್ಷಗಳ ಭಾರತವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಪ್ರಧಾನಿ ಹುದ್ದೆಯು ನಾಗರಿಕರು ನೀಡಿದ ಉತ್ತಮ ಅವಕಾಶವಾಗಿದೆ ಎಂದು ಹೇಳಿದ್ದಾರೆ.

ದೇಶದ ಮೂರು ರಾಜ್ಯದಲ್ಲಿ ಸರ್ಕಾರ ಇಟ್ಟುಕೊಂಡು ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯಲು ಸಾಧ್ಯವೇ?

ಮಾಜಿ ಪ್ರಧಾನಿ ದೇವೇಗೌಡರ ಪ್ರಶ್ನೆ

ಹಾಸನ: ಕೇವಲ ಮೂರು ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್, ಕೇಂದ್ರ ಸರ್ಕಾರದ ಅಧಿಕಾರ ಹಿಡಿಯಲು ಸಾಧ್ಯವೇ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ಪ್ರಶ್ನಿಸಿದರು.



ಅರಸೀಕೆರೆ ತಾಲೂಕಿನ ಗಂಡಸಿ ಹೋಬಳಿ ನಾಗರಹಳ್ಳಿ ಗ್ರಾಮದಲ್ಲಿ ಶನಿವಾರ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್‌ಗೆ ಈವರೆಗೆ ಲೋಕಸಭೆಯಲ್ಲಿ ಅಧಿಕೃತವಾಗಿ ಪ್ರತಿಪಕ್ಷದ ಸ್ಥಾನ ಕೂಡ ಸಿಕ್ಕಿಲ್ಲ. ಇಲ್ಲಸಲ್ಲದ ಸುಳ್ಳು ಭರವಸೆಗಳನ್ನು ನೀಡಿ ಜನರಿಗೆ ಮೋಸ ಮಾಡಲು ಕಾಂಗ್ರೆಸ್ ಮುಂದಾಗಿದೆ ಎಂದರು.

ಇತ್ತೀಚೆಗೆ ಕಾಂಗ್ರೆಸ್‌ನ ಮಲ್ಲಿಕಾರ್ಜುನ್ ಖರ್ಗೆ, ಸೋನಿಯಾ ಗಾಂಧಿ ಸೇರಿದಂತೆ ವಿವಿಧ ನಾಯಕರು ಸುದ್ದಿಗೋಷ್ಠಿ ನಡೆಸಿ ಒಂದು ಪ್ರಣಾಳಿಕೆ ಬಿಡುಗಡೆ ಮಾಡಿದ್ದು, 25 ಗ್ಯಾರಂಟಿ ಘೋಷಣೆ ಮಾಡಿದ್ದಾರೆ. ತಮ್ಮ ಸರ್ಕಾರ ಬಂದರೆ ದೇಶದಲ್ಲಿ 8 ಕೋಟಿ ಮನೆಗಳನ್ನು ನಿರ್ಮಾಣ ಮಾಡಿ, ಎಲ್ಲ ರೀತಿಯ ಸಾಲಮನ್ನಾ ಮಾಡುವುದಾಗಿ ಹೇಳಿದ್ದಾರೆ. ಇವರ ಈ ಎಲ್ಲ ಭರವಸೆಗಳನ್ನು ಈಡೇರಿಸಲು ಹಣ ಎಲ್ಲಿದೆ? ಇಂತಹ ಸುಳ್ಳನ್ನು ಜನ ನಂಬಬಾರದು ಎಂದರು.

ಅರಸೀಕೆರೆಯಲ್ಲಿ 28 ಕೊಳವೆಬಾವಿ ಕೊರೆದರೂ ಅದು ಕುಡಿಯಲು ಯೋಗ್ಯವಲ್ಲದ ನೀರು ಎಂದು ತಿಳಿದಾಗ, ಹೇಮಾವತಿಯಿಂದ ನೀರು ಕೊಡಲು ಮುಂದಾದೆ. ಆದರೆ, ಎತ್ತಿನಹೊಳೆ ಮೂಲಕ ಕೋಲಾರ, ಚಿಕ್ಕಬಳ್ಳಾಪುರಕ್ಕೆ ನೀರು ಕೊಡಲು ಮುಂದಾಗಿರುವ ಕಾಂಗ್ರೆಸ್, ಅರಸೀಕೆರೆಗೆ ನೀರನ್ನು ಹರಿಸುವುದಾಗಿ ಸುಳ್ಳು ಹೇಳುತ್ತಿದ್ದಾರೆ ಎಂದರು.

ನಿನ್ನೆ ಬಾಬು ಜಗಜೀವನ್‌ರಾಂ ಜಯಂತಿ. ಆದರೆ ಕಾಂಗ್ರೆಸ್‌ನ ಯಾವೊಬ್ಬ ಮಹಾನ್ ನಾಯಕ ಬಾಬು ಜಗಜೀವನ್‌ರಾಂ ಬಗ್ಗೆ ಒಂದು ಮಾತನಾಡಿಲ್ಲ. ಇಂದಿರಾಗಾಂಧಿ, ನೆಹರೂ ಕಾಲದಲ್ಲಿ ಸಚಿವರಾಗಿದ್ದವರಿಗೆ ಸಲ್ಲಿಸುವ ಗೌರವ ಇದೇನಾ ಎಂದು ಪ್ರಶ್ನಿಸಿದರು. ಬಾಬಾಸಾಹೇಬ್ ಅಂಬೇಡ್ಕರ್ ಅವರ ಆಶಯದಂತೆ ಎಸ್ಸಿ, ಎಸ್ಟಿ ಸಮುದಾಯದ ಮೀಸಲಾತಿ ಹೆಚ್ಚಳ ಮಾಡಿದ್ದು ಇದೇ ದೇವೇಗೌಡ. ಇದರ ಬಗ್ಗೆ ಜನರು ಯೋಚಿಸಬೇಕು ಎಂದರು.

ತೆಂಗಿನಮರದ ಕೆಳಗೆ ಮಲಗಿ, ಪರಿಹಾರಕ್ಕಾಗಿ ಡ್ರಾಮಾ ಮಾಡಿದ ವ್ಯಕ್ತಿಗಳನ್ನು ನಾನು ನೋಡಿದ್ದೇನೆ ಎಂದು ಶಾಸಕ ಕೆ.ಎಂ.ಶಿವಲಿಂಗೇಗೌಡರ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಬೆಂಗಳೂರಿನಲ್ಲಿ ಡಾ.ಸಿ.ಎನ್. ಮಂಜುನಾಥ ಅವರನ್ನು ಸೋಲಿಸಲು ಅದೇ ಹೆಸರಿನ ಹಲವರು ನಾಮಪತ್ರ ಸಲ್ಲಿಸಿದ್ದಾರೆ. ಇಂತಹ ವಿಧಾನಗಳಿಂದ ಅವರನ್ನು ಸೋಲಿಸಲು ಸಾಧ್ಯವೇ? ಎಂದು ಕೇಳಿದರು.



ಗುಂಡೂರಾವ್ ಮನೆಯಲ್ಲಿ ಅರ್ಧ ಪಾಕಿಸ್ತಾನವಿದೆ ಹೇಳಿಕೆ: ಕಾಂಗ್ರೆಸ್‌ನಿಂದ ಯತ್ನಾಳ್ ವಿರುದ್ಧ ದೂರು

ಬೆಂಗಳೂರು: ಸಚಿವ ದಿನೇಶ್ ಗುಂಡೂರಾವ್ ಮನೆಯಲ್ಲಿ ಅರ್ಧ ಪಾಕಿಸ್ತಾನವಿದೆ ಎಂಬ ಹೇಳಿಕೆ ವಿಚಾರಕ್ಕೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ದೂರು ದಾಖಲಿಸಲಾಗಿದೆ.

ಬೆಂಗಳೂರಿನ ಶೇಷಾದ್ರಿಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಸಚಿವ ದಿನೇಶ್ ಗುಂಡೂರಾವ್ ಕುಟುಂಬದವರನ್ನು ಅವಮಾನಿಸಲಾಗಿದೆ. ಗುಂಡೂರಾವ್ ಮನೆಯಲ್ಲಿ ಅರ್ಧ ಪಾಕಿಸ್ತಾನವಿದೆ ಎಂಬ ಹೇಳಿಕೆ ದೇಶ ವಿರೋಧಿ ಹೇಳಿಕೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಗಾಂಧಿನಗರ ಬ್ಲಾಕ್ ಕಾಂಗ್ರೆಸ್ ವತಿಯಿಂದ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ರಾಮೇಶ್ವರಂ ಕೆಫೆ ಬಾಂಬ್ ಬ್ಲಾಸ್ಟ್ ಕೇಸ್‌ನಲ್ಲಿ ಎನ್‌ಐಎ ಬಿಜೆಪಿ ಕಾರ್ಯಕರ್ತರೊಬ್ಬರನ್ನು ವಿಚಾರಣೆ ನಡೆಸಿತ್ತು. ಈ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡುವ ವೇಳೆ ಶಾಸಕ ಯತ್ನಾಳ್, ದಿನೇಶ್ ಗುಂಡೂರಾವ್ ಅವರ ಕುಟುಂಬದ ಬಗ್ಗೆ ಮಾತನಾಡಿದ್ದರು.

ಈಶ್ವರಪ್ಪಗೆ ಮೋದಿ ಫೋಟೋ ಬಳಕೆ ಮಾಡುವ ಅಧಿಕಾರವಿಲ್ಲ

ವಿಪಕ್ಷ ನಾಯಕ ಆರ್.ಅಶೋಕ್

ಬೆಂಗಳೂರು: ಶಿವಮೊಗ್ಗದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಈಶ್ವರಪ್ಪ ಅವರಿಗೆ ಚುನಾವಣಾ ಪ್ರಚಾರದ ವೇಳೆ ಪ್ರಧಾನಿ ಮೋದಿ ಫೋಟೋ ಬಳಕೆ ಮಾಡುವ ಅಧಿಕಾರವಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಶನಿವಾರ ಹೇಳಿದ್ದಾರೆ.

ಸುದ್ದಿಗಾರರರೊಂದಿಗೆ ಮಾತನಾಡಿದ ಅವರು, ಈಶ್ವರಪ್ಪಗೆ ಮೋದಿ ಫೋಟೋ ಬಳಕೆ ಮಾಡಿಕೊಳ್ಳುವ ಅಧಿಕಾರವಿಲ್ಲ. ಒಂದು ವೇಳೆ ಬಳಕೆ ಮಾಡಿದರೆ ಅದು ತಪ್ಪು. ಸರ್ಕಾರಿ ಕಾರ್ಯಕ್ರಮ ಆಗಿದ್ದರೆ ಪ್ರಧಾನಿ ಆಗಿರುವುದರಿಂದ ಮೋದಿ ಫೋಟೋ ಬಳಸಿಕೊಳ್ಳಬಹುದು. ಆದರೆ, ರಾಜಕೀಯವಾಗಿ ಚುನಾವಣೆ ವೇಳೆ ಬಿಜೆಪಿಗೆ ಮಾತ್ರ ಮೋದಿ ಫೋಟೊ ಬಳಕೆಯ ಅಧಿಕಾರ ಇದೆ ಎಂದು ಹೇಳಿದ್ದಾರೆ.

ಈಶ್ವರಪ್ಪ ಅವರು ಅನಧಿಕೃತವಾಗಿ ಮೋದಿಯವರ ಫೋಟೋ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅವರು ನಾಮಪತ್ರ ಸಲ್ಲಿಸಿದ ಬಳಿಕ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಈಶ್ವರಪ್ಪ ಪ್ರಚಾರದ ವೇಳೆ ಮೋದಿ ಭಾವಚಿತ್ರ ಬಳಸಿದ್ದಕ್ಕೆ ಬಿಜೆಪಿ ಅಭ್ಯರ್ಥಿ ಬಿವೈ ರಾಘವೇಂದ್ರ ಅವರು ವ್ಯಂಗ್ಯವಾಡಿದ್ದರು. ಈ ಹಿನ್ನೆಲೆಯಲ್ಲಿ ರಾಘವೇಂದ್ರ ಅವರಿಗೆ ತಿರುಗೇಟು ನೀಡಿದ್ದ ಈಶ್ವರಪ್ಪ, ಮೋದಿ ಅವರಪ್ಪನ ಆಸ್ತಿಯೇ, ಮೋದಿ ಭಾವಚಿತ್ರವನ್ನು ಯಾರಾದರೂ ಬಳಸಬಹುದು ಎಂದು ಹೇಳಿದ್ದರು. ಇದರೊಂದಿಗೆ ಮೋದಿ ಫೋಟೋ ಕುರಿತು ಜಟಾಪಟಿ ಶುರುವಾಗಿದೆ.

ನಕ್ಕರೆ ಅದೇ ಸ್ವರ್ಗ

ಆತ : ಪ್ರತಿದಿನ ಆಫೀಸಿಗೆ ಲೇಟಾಗಿ ಬರುತ್ತಿದ್ದವನು ಈ ದಿನ ಬೇಗ ಬಂದಿದ್ದಿಯಲ್ಲಾ ಯಾಕೆ?

ಈತ : ಹೆಂಡತಿ ಮಕ್ಕಳೆಲ್ಲಾ ಊರಿಗೆ ಹೋಗಿದ್ದಾರೆ. ತಿಂಡಿ ಅಡುಗೆ ನನಗೊಬ್ಬನಿಗೇ. ಹಾಗಾಗಿ ಕೆಲಸ ಬೇಗ ಮುಗೀತಿದೆ.

ಮೈಸೂರು ಮಿತ್ರ

ಭಾನುವಾರ, 7 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಆನಂದದಾಯಕ ಮಾತುಗಳು ಚಂದ್ರ ಕಿರಣದಂತೆ ಮನಸ್ಸಿಗೆ ಡಾಯಿಸುತ್ತವೆ.
–ಅವ್ವೈಯಾರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆ ಮುರಿದರೆ ಕಟ್ಟಬಹುದು / ಮನ ಮುರಿದರೆ ಕಟ್ಟಬಹುದೇ?

ನಿಮ್ಮ ಪತ್ರಗಳು

■ ವಿನಾಶದ ಅಂಚಿನಲ್ಲಿರುವ ಅವಿಭಕ್ತ ಕುಟುಂಬಗಳು!

ಮಾನ್ಯರೆ,

ಅವಿಭಕ್ತ ಕುಟುಂಬ ಎಂದರೇ ಹಲವು ಕುಟುಂಬಗಳು ಒಟ್ಟಿಗೆ ಸೇರಿ ಜೀವನ ನಡೆಸುವುದು. ಕೂಡು ಕುಟುಂಬ ಎಂತಲೂ ಎನ್ನಬಹುದು. ಹಿಂದಿನ ದಿನಗಳಲ್ಲಿ ಇವು ಯಥೇಚ್ಚವಾಗಿ ಕಂಡು ಬರುತ್ತಿದ್ದವು. ಪ್ರತಿ ಹಳ್ಳಿಗಳಲ್ಲಿ ಅವಿಭಕ್ತ ಕುಟುಂಬಗಳ ಸಂಖ್ಯೆಯೇ ಅಧಿಕವಾಗಿದ್ದವು. ಕೂಡಿ ಬಾಳಿದರೆ ಸ್ವರ್ಗ ಸುಖ ಎನ್ನುವಂತೆ ಎಲ್ಲರೂ ಒಟ್ಟಾಗಿ ತಮ್ಮ ನೋವು–ನಲಿವುಗಳನ್ನು ಹಂಚಿಕೊಂಡು ಜೀವನ ಸಾಗಿಸುತ್ತಿದ್ದ ಕಾಲವದು. ಆದರೆ ವಿಪರ್ಯಾಸವೆಂದರೆ ಪ್ರತಿ ಗ್ರಾಮಗಳಲ್ಲಿ ಅಂತಹ ಕೂಡು ಕುಟುಂಬಗಳ ಸಂಖ್ಯೆ ಬೆರಳೆಣಿಕೆಯಷ್ಟು ಇಲ್ಲದಿರುವುದು ದುರಂತವೇ ಸರಿ..!

ಇಂತಹ ಕೂಡು ಕುಟುಂಬಗಳು ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಸ್ವಲ್ಪಮಟ್ಟಿಗೆ ಕಂಡುಬರುತ್ತಿದೆ. ಮುಂದಿನ ದಿನಗಳಲ್ಲಿ ಅಲ್ಲಿಯೂ ನಶಿಸಿ ಹೋಗುವುದರಲ್ಲಿ ಯಾವುದೇ ಸಂಶಯವಿಲ್ಲ ಎನ್ನಬಹುದು. ಬಲ್ಲವರೇ ಬಲ್ಲರು ಬೆಲ್ಲದ ರುಚಿಯನ್ನು ಎನ್ನುವಂತೆ ಹಿಂದೆ ಕೂಡಿ ಬಾಳಿ ಅದರ ಸವಿಯನ್ನು ಉಂಡವರು ಇಂದಿನ ಪೀಳಿಗೆಯ ಜನತೆಗೆ ಅದರ ಬಗ್ಗೆ ತಿಳಿ ಹೇಳಿ ದಾರಿದೀಪವಾಗಬೇಕು. ಒಗ್ಗಟ್ಟಿನಲ್ಲಿ ಬಲ ಎನ್ನುವಂತೆ ಅದರ ಬಗ್ಗೆ ಇಂದಿನ ಜನತೆಗೆ ಮನಮುಟ್ಟುವಂತೆ ಹಿರಿಯರು ಅರ್ಥೈಸಬೇಕು. ಕಿರಿಯರಾದವರು ಅವರು ಸಾಗಿದ ದಿಕ್ಕಿನಲ್ಲಿ ಸಾಗಬೇಕೆನ್ನುವುದನ್ನು ರೂಢಿಸಿಕೊಳ್ಳಬೇಕು. ವಿನಾಶದ ಅಂಚಿನಲ್ಲಿರುವ ಅವಿಭಕ್ತ ಕುಟುಂಬವನ್ನು ಮುಂದೆಯೂ ಕೂಡ ಕುಟುಂಬವನ್ನಾಗಿ ಮುಂದುವರೆಸಿಕೊಂಡು ಹೋಗಬೇಕೆನ್ನುವುದು ನಮ್ಮೆಲ್ಲರ ಬಯಕೆ.

ಈ ನಿಟ್ಟಿನಲ್ಲಿ ಕುಟುಂಬದಲ್ಲಿರುವ ಹಿರಿಯರು ತಮ್ಮ ಮಕ್ಕಳಿಗೆ ತಿಳಿ ಹೇಳಿ ವಿವಾಹವಾದ ಕೆಲವು ಮಾಸದಲ್ಲೇ ತಂದೆ–ತಾಯಿ, ಬಂಧು–ಬಳಗವನ್ನು ತೊರೆದು ತಮ್ಮದೇ ಆದ ಸಂಸಾರವನ್ನು ಕಟ್ಟಿಕೊಳ್ಳಬೇಕೆಂದು ಬಯಸುವ ಮಕ್ಕಳಿಗೆ ಈ ಕೂಡು ಕುಟುಂಬದ ಸವಿಯನ್ನು ಉಣಬಡಿಸಬೇಕು. ಸ್ವಲ್ಪ ದಿನಗಳು ತಮ್ಮ ಜೊತೆಯಲ್ಲಿ ಇದ್ದು ಅದರ ರುಚಿಯನ್ನು ಸವಿದು ಅದು ರುಚಿಸಲಿಲ್ಲ ಅಂದಾಗ ಮುಂದಿನ ತೀರ್ಮಾನ ಎಂದು ತಿಳಿ ಹೇಳಿ ಪ್ರತಿ ಮನೆ ಮನೆಗಳಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸಿದಾಗ ಅವರೇ ತಮ್ಮ ಸುತ್ತ ಮುತ್ತಲಿನವರಿಗೆ ಮಾರ್ಗದರ್ಶನ ನೀಡುತ್ತಾರೆ. ಇದರ ಬಗ್ಗೆ ಪ್ರತಿ ಗ್ರಾಮಗಳಲ್ಲಿ, ನಗರಗಳಲ್ಲಿ ಘೋಷ ವಾಕ್ಯಗಳ ಮೂಲಕ ಮಾಧ್ಯಮಗಳ ಮೂಲಕ ಜಾಗೃತಿ ಮೂಡಿಸಿದಾಗ ವಿನಾಶದ ಅಂಚಿನಲ್ಲಿರುವ ಈ ಕೂಡು ಕುಟುಂಬವನ್ನು ರಕ್ಷಿಸಿ ಮುಂದುವರೆಸಿಕೊಂಡು ಹೋಗಬೇಕೆನ್ನುವುದೇ ನಮ್ಮೆಲ್ಲರ ಹಾರೈಕೆ! ಕೂಡು ಕುಟುಂಬಗಳ ರಕ್ಷಣೆ ನಮ್ಮೆಲ್ಲರ ಹೊಣೆಯಲ್ಲವೇ?

–ಅನಿಲ್ ರಾಜ, ಸಹ ಶಿಕ್ಷಕರು, ಸಿದ್ಧಾರ್ಥನಗರ, ಮೈಸೂರು

■ ನಮಗ್ಯಾರು ಬೇಕು?

ಮಾನ್ಯರೆ,

ನಡುರಾತ್ರಿ ಮಲಗಿದ್ದಾಗ ಮೊಬೈಲ್‌ನ ಸದ್ದು ಎದೆ ಮೇಲೆ ಬಡಿದಂತೆ ಎಚ್ಚರವಾಗಿಸಿಬಿಡ್ತು. ಮೊಬೈಲ್ ನೋಡಿದರೆ ಶುಭಾಶಯಗಳು ಸಾಲುಗಟ್ಟಲೇ ಇವೆ. ಹೊಸ ವರ್ಷದ ಶುಭಾಶಯಗಳು. ನಿಮ್ಮ ಕನಸೆಲ್ಲವೂ ನನಸಾಗಲಿ, ದೇವರು ನಿಮ್ಮ ಕನಸೆಲ್ಲವನ್ನು ಈಡೇರಿಸಲಿ ಎಂಬ ಸಂದೇಶಗಳು. ಹಾರೈಸಿದ ಮನಗಳಿಗೆಲ್ಲ ಉತ್ತರವಾಗಿ ಶುಭಾಶಯಗಳನ್ನು ತಿಳಿಸಿದ್ದು ಆಯಿತು.

ಹತ್ತಾರು ಸಂದೇಶಗಳು ಹುಟ್ಟು ಹಬ್ಬಕ್ಕೆ, ಹಬ್ಬಗಳಿಗೆ ಬರುತ್ತಲೇ ಇರುತ್ತವೆ. ಅದು ಒಂದು ತರಹದ ವಾಡಿಕೆಗಷ್ಟೇ ಸೀಮಿತವೆಂದರೆ ತಪ್ಪಾಗಲಾರದು. ಒಬ್ಬರಿಗೆ ಹಾರೈಸೋದು ಬರೀ ಮಾತಿಗೂ ಅಲ್ಲಾ! ಬರಿಯ ಸಾಮಾಜಿಕ ಮಾಧ್ಯಮಗಳ ಸಂದೇಶಕ್ಕೆ ಸೀಮಿತವಾಗಿದೆ ಇಂದಿನ ದಿನಗಳಲ್ಲಿ, ಅವಶ್ಯಕತೆಗಷ್ಟೇ ಅವರ ನಡುವೆ ಒಂದು ಸಣ್ಣ ಪ್ರಮಾಣದಾದರೂ ನಂಟೊ, ಸ್ನೇಹವಿರಲಿ ಎಂಬ ಮಾತ್ರಕ್ಕೆ ಸಂದೇಶಗಳು ಬರುತ್ತಲೇ ಇರುತ್ತೆ.

ಯಾವುದು ಶ್ರೇಷ್ಠ?: ಸ್ಪಂದಿಸೋ ಮನಗಳು ಬೇಕೆ ಹೊರತು, ಉಚಿತವಾಗಿ ಸಿಗುವ ಸಂದೇಶಗಳಿಂದ ಯಾವುದೇ ಪ್ರಯೋಜನಕಾರಿ ಅಲ್ಲ. ನೂರು, ಸಾವಿರ ನಂಬರ್‌ಗಳು ಮೊಬೈಲ್‌ನಲ್ಲಿ ಇದ್ದರೂ ತುರ್ತು ಪರಿಸ್ಥಿತಿಯಲ್ಲಿ ಸ್ಪಂದಿಸೋ ಮನಗಳು ಬೆರಳೆಣಿಕೆಗಷ್ಟೆ ಸೀಮಿತ. ಈ ಸಮಯ ಕಳೆದು ಹೋಗುತ್ತದೆ. ಹಾಗೇ ಎಲ್ಲರ ಪರಿಸ್ಥಿತಿಗಳು ಕೂಡ ಬದಲಾಗುತ್ತಲೇ ಇರುತ್ತವೆ. ಬದಲಾವಣೆ ಜಗದ ನಿಯಮ. ಚಿನ್ನದ ತಟ್ಟೆಯ ಮೇಲೆ ನಿಮ್ಮ ಹೆಸರು ಬರೆದು ಉಳಿಸುವುದಕ್ಕಿಂತ ನೊಂದ ಮನಗಳಿಗೆ ಸ್ಪಂದಿಸಿ ಅವರ ಎದೆಯಲ್ಲಿ ಉಳಿಯುವುದೇ ಶ್ರೇಷ್ಠ ಅಲ್ಲವೇ. ಹಾರೈಸುವುದರ ಜೊತೆ ಕೈ ಚಾಚುವ ಕೈಗಳನ್ನು ಒಮ್ಮೆ ಜಾಚಿಕೊಳ್ಳಿ. ಸಂದೇಶಗಳು ರವಾನೆಯ ಜೊತೆಗೆ ಸಂತೆಯ ಚಿಂತೆಗಳ ನಡುವೆ ಕಳೆದು ಹೋದವರ ಕೈ ಹಿಡಿದು ನಡೆಸಿ.

–ಮಂಜೇಶ್ ದೇವಗಳ್ಳಿ, ಮೈಸೂರು

■ ಚುನಾವಣೆ ಕಣದಲ್ಲಿ ಟೀಕಾಸ್ತ್ರದ ಭರಾಟೆ

ಮಾನ್ಯರೆ,

ಲೋಕಸಭಾ ಚುನಾವಣೆ ದಿನಗಣನೆ ಶುರುವಾದಂತೆ ಪಕ್ಷ ಪಕ್ಷಗಳ ಅಭ್ಯರ್ಥಿಗಳ ವಿರೋಧಿಗಳ ಟೀಕಾಪ್ರಹಾರಗಳ ಸುರಿಮಳೆಗಳೆ ನಡೆಯುತ್ತಿವೆ. ಟೀಕಿಸುವರು ಯೋಚಿಸುವುದಿಲ್ಲ, ಯೋಚಿಸುವರು ಟೀಕಿಸುವುದಿಲ್ಲ ಎಂಬ ಮಾತಿದೆ. ಇಲ್ಲದ ಆರೋಪಗಳು ಸಲ್ಲದ ಆರೋಪಗಳು ಇವುಗಳಲ್ಲಿ ಇರಬಹುದು. ರಾವಣನ ಟೀಕಿಸುವ ರಾಮಭಕ್ತರು, ರಾಮನನ್ನು ಟೀಕಿಸುವ ರಾವಣನ ಭಕ್ತರು ಇದ್ದೇ ಇರುತ್ತಾರೆ ಎಂಬುದು ಪ್ರೇರಣೆಯ ಮಾತುಗಳನ್ನು ಆಡುವ ಹಿರಿಯರ ಮಾತಿದೆ.

ಟೀಕೆಗೆ ಧ್ವನಿ ಪದಗಳ ಸ್ಪಷ್ಟತೆ ಇದ್ದರೆ ಸಾಕು ಗ್ಯಾಲರಿಯ ಪ್ರೇಕ್ಷಕರನ್ನು ಸೆಳೆಯುವುದು ಸುಲಭ. ನಾವು ಒಬ್ಬರನ್ನು ಟೀಕಿಸುವಾಗ ಯಾವ ಸ್ವರೂಪದ ಟೀಕೆಯನ್ನು ಮಾಡುತ್ತಿದ್ದೀನಿ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಹಂಬಲಕ್ಕಿಂತ ತಮಗೆ ಗೊತ್ತಿರದ ಸಂಗತಿಯನ್ನು ಟೀಕಿಸುವುದು ಹೇಗೆ ಎನ್ನುವುದರ ಬಗ್ಗೆ ಕೆಲವರ ಚಿಂತೆ ಇರುತ್ತದೆ.

ಆ ವಿಷಯಗಳ ಬಗ್ಗೆ ಟೀಕಿಸಿ ಪಕ್ಕ ಎದಿರೇಟು ಕೊಟ್ಟೆ ಎಂಬ ಭ್ರಮೆಯಲ್ಲಿ ಅವರು ಮುಳುಗಿರುತ್ತಾರೆ. ಯಾವುದು ತಪ್ಪು, ಯಾವುದು ಸರಿ ಎಂಬುದು ಅವರ ಅವರ ಬುದ್ಧಿ ಮಟ್ಟಕ್ಕೆ ಸಂದದ್ದು. ರಚನಾತ್ಮಕ ಧೋರಣೆ ಟೀಕೆಗಳು ಸಲಹೆಗಳನ್ನು ನೀಡುತ್ತದೆ. ಟೀಕೆಗಳಿಂದ ಸಮಾಜವನ್ನು ಸುಧಾರಿಸುವ ಕೆಲಸವಾಗಬೇಕೆ ಹೊರತು ತಮ್ಮ ವಾಕ್ಚಾತುರ್ಯದ ಗುಣವನ್ನು ವಿಸ್ತರಿಸುವುದಕಲ್ಲ.


–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತ ನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

15. ವೇದಾಂತಂ ಶಿವರಾಮ ಶಾಸ್ತ್ರಿ





ಗೌರಿ ಸತ್ಯ
ಹಿರಿಯ ಪತ್ರಕರ್ತರು

ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲ ಸಾಂಸ್ಕೃತಿಕ ದೃಷ್ಟಿಯಿಂದ ಒಂದು ಸುವರ್ಣ ಯುಗ. ಮುಮ್ಮಡಿಯವರೇ ಸಾಹಿತ್ಯ, ಸಂಗೀತ, ಕಲೆ ಇತ್ಯಾದಿಗಳಿಗೆ ಪೋಷಣೆ–ಕಾಣಿಕೆ ನೀಡಿದ್ದಲ್ಲದೆ, ಇವರ ಅವಧಿಯಲ್ಲಿ ಹಲವಾರು ಮಹನೀಯರು ಮೈಸೂರಿಗೆ ಬಂದು ರಾಜಾಶ್ರಯ ಪಡೆದುಕೊಂಡರು. ಸ್ವತಃ ಮಹಾರಾಜರೇ ಹಲವಾರು ಮಂದಿಯನ್ನು ಕರೆಸಿಕೊಂಡು ಆಶ್ರಯ ನೀಡಿದರು. ತಮ್ಮ ರಾಜಕೀಯ ಸಂಘರ್ಷದ ನಡುವೆಯೂ ಉದಾರವಾಗಿ ಈ ಆದರ್ಶ ಪುರುಷರಿಗೆ ಪ್ರೋತ್ಸಾಹ ನೀಡಿದರು. ಮೈಸೂರಿನ ಕೀರ್ತಿ ಹೆಚ್ಚುವಂತೆ ಮಾಡಿ ಅವರು ಮೈಸೂರಿನ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದ್ದಾರೆ. ಹಾಗೆ ಅವರ ಕೃಪಾಶ್ರಯದಲ್ಲಿ ಕೀರ್ತಿ ಪಡೆದವರಲ್ಲಿ ಒಬ್ಬರು ವೇದಾಂತಂ ಶಿವರಾಮ ಶಾಸ್ತ್ರಿಗಳು.

ಶಾಸ್ತ್ರಿಗಳ ಪೂರ್ವಜರು ಆಂಧ್ರದ ಕರ್ನೂಲಿನ ನಂದಿಕೋಟಕೂರಿನಲ್ಲಿ ನೆಲೆಸಿದ್ದರು. ಮಿಡುಚನಮಟ್ಲು ಎಂಬುದು ಅವರ ಮನೆತನದ ಹೆಸರು. ಅವರಲ್ಲಿ ಅಪ್ಪಾಶಾಸ್ತ್ರಿಗಳೆಂಬುವರು ತಮ್ಮ ಪಾಂಡಿತ್ಯದಿಂದಾಗಿ ಅನೇಕ ಶಿಷ್ಯರನ್ನು ಆಕರ್ಷಿಸಿದ್ದರು. ಇವರ ಮಗ ಶೇಷಾದ್ರಿ ಶಾಸ್ತ್ರಿ. ತಂದೆಗೆ ತಕ್ಕ ಮಗ. ಇವರಿಗೆ ವಾಜೇಶ್ವರ ಶಾಸ್ತ್ರಿಗಳೆಂಬ ಮಗ. ಆದರೆ ಅವರು ಪಾಂಡಿತ್ಯದಲ್ಲಿ ತದ್ವಿರುದ್ಧ. 18ನೇ ವಯಸ್ಸಿನವರೆಗೆ ಯಾವುದೇ ವಿದ್ಯೆ ಇಲ್ಲದೆ ದಡ್ಡನೆಂಬ ಅಪಹಾಸ್ಯ–ಅಸಡ್ಡೆಗಳಿಗೆ ಗುರಿಯಾಗಿದ್ದರು. ಇದರಿಂದ ನೊಂದ ವಾಜೇಶ್ವರ ಶಾಸ್ತ್ರಿಯವರು ಮನೆ ಬಿಟ್ಟು ಹೊರಟರು. ಎಲ್ಲೆಲ್ಲೋ ಹೋಗಿ ಸಾಧುಸಂತರ ಸೇವೆ ಮಾಡಿ ವಿದ್ಯೆಯನ್ನು ಸಾಧಿಸಿದರು.

ಅವರು ತಮ್ಮ ಶಿಷ್ಯರೊಂದಿಗೆ ಪ್ರವಾಸ ಮಾಡುತ್ತಿದ್ದಾಗ ಮೈಸೂರಿಗೆ ಬಂದರು. ಪಶ್ಚಿಮವಾಹಿನಿಯಲ್ಲಿ ಅವರು ಸ್ನಾನ ಮಾಡುತ್ತಿದ್ದಾಗ ಸ್ಥಳೀಯ ವಿದ್ವಾಂಸರೊಬ್ಬರು ಅವರನ್ನು ಕಂಡು ಆಕರ್ಷಿತರಾಗಿ ಅವರನ್ನು ಮೈಸೂರಿಗೆ ಕರೆತಂದರು. ಅರಮನೆಯಲ್ಲಿ ಮಹಾರಾಜರ ಭೇಟಿಯಾಯಿತು. ಅವರ ಮುಂದೆ ತಮ್ಮ ವಿದ್ವತ್ತಿನ ಪ್ರದರ್ಶನ ನೀಡಿದರು. ಅವರಿಂದ ಸನ್ಮಾನಿತರಾಗಿ ಆಸ್ಥಾನ ವಿದ್ವಾಂಸರೂ ಆದರು. ಅವರು ಮಹಾರಾಜರ ವಿಶ್ವಾಸವನ್ನು ಎಷ್ಟರಮಟ್ಟಿಗೆ ಗಳಿಸಿದರೆಂದರೆ ಅವರ ಜೊತೆ ಚದುರಂಗವನ್ನು ಆಡುತ್ತಿದ್ದರಂತೆ. ಅಲ್ಲಿಂದ ಮುಂದಕ್ಕೆ ಅವರ ಪೀಳಿಗೆಯವರು ಮೈಸೂರಿನಲ್ಲಿಯೇ ನೆಲೆಸಿದರು. ದೇವೀ ಭಕ್ತರಾಗಿದ್ದ ಶಾಸ್ತ್ರಿಗಳು ಚಾಮುಂಡಿ ಬೆಟ್ಟದ ಬಸವನ ಬಳಿಯಿರುವ ಗುಹೆಯೊಂದರಲ್ಲಿ ವಾಮಮಾರ್ಗದಲ್ಲಿ ಶ್ರೀಚಕ್ರೋಪಾಸನೆಯನ್ನು ಮಾಡುತ್ತಿದ್ದರಂತೆ! ಈ ಪೂಜಾದಿಗಳಿಗೆ ಅವರು ಮಾಡುತ್ತಿದ್ದ ದುಂದುವೆಚ್ಚದಿಂದಾಗಿ ಅವರು ಸಾಲಗಾರರಾಗಬೇಕಾಯಿತು. ವಿಪರೀತ ಸಾಲ ಮಾಡಿ ಕೋರ್ಟ್ ವ್ಯಾಜ್ಯದಲ್ಲಿ ತಮ್ಮ ಆಸ್ತಿಯೆಲ್ಲವನ್ನೂ ಕಳೆದುಕೊಳ್ಳಬೇಕಾಯಿತು ಎನ್ನಲಾಗಿದೆ.

ರಾಜೇಶ್ವರ ಶಾಸ್ತ್ರಿಗಳ ಪುತ್ರ ಶೇಷಾದ್ರಿ ಶಾಸ್ತ್ರಿಗಳೆಂಬುವರು. ಅವರು ಮೈಸೂರಿನ ಆಸ್ಥಾನದಲ್ಲಿ ವಿದ್ವಾಂಸರು. ವ್ಯಾಕರಣ ಶಾಸ್ತ್ರದಲ್ಲಿ ಎತ್ತಿದ ಕೈ. ತಮ್ಮ ತಂದೆಯವರಿಂದ ಅವರಿಗೆ ಶ್ರೀವಿದ್ಯೋಪಾಸನೆಯ ಉಪದೇಶವಾಗಿತ್ತು. ಆದರೆ ತಂದೆಯ ನಂತರ ಅವರು ಶ್ರೀಚಕ್ರವನ್ನು ವಿಸರ್ಜಿಸಿ ಶಿವೋಪಾಸನೆಯನ್ನು ಕೈಗೊಂಡರು.

ಈ ಶೇಷಾದ್ರಿ ಶಾಸ್ತ್ರಿಗಳ ಎರಡನೇ ಮಗನೇ ಶಿವರಾಮ ಶಾಸ್ತ್ರಿಗಳು. ಇವರು 1861ರ ಮಾರ್ಚ್ 23ರಂದು ಜನಿಸಿದರು. ತಾಯಿಯ ಹೆಸರು ಸುಂದರಾಂಬ. ಚಿಕ್ಕಂದಿನಿಂದಲೇ ವೇದಾಂತ ವಿಚಾರಗಳಲ್ಲಿ ಆಸಕ್ತಿ ಹೆಚ್ಚು. ತಂದೆಯೇ ಮೊದಲ ಗುರು. ಎಂಟನೆಯ ವಯಸ್ಸಿಗೆ ತಿರುಪತಿಯಲ್ಲಿ ಉಪನಯನ. ತಂದೆಯಿಂದಲೇ ಶಿವ ಮಂತ್ರೋಪದೇಶ ಪಡೆದು ಶಿವೋಪಾಸನೆಯ ಕ್ರಮವನ್ನು ಅರಿತುಕೊಂಡರು. ಹೆಚ್ಚು ಜ್ಞಾನವನ್ನು ಸಂಪಾದಿಸಬೇಕೆಂಬ ತುಡಿತ ಎಷ್ಟಿತ್ತೆಂದರೆ ಮನೆಯನ್ನು ಬಿಟ್ಟು ವಿಂಧ್ಯ ಪರ್ವತದವರೆಗೆ ಪ್ರಯಾಣ ಮಾಡಿದರು. ಸಾಧು ಸಂತರಿಂದ ಅನೇಕ ಆಧ್ಯಾತ್ಮಿಕ ವಿಚಾರಗಳನ್ನು ತಿಳಿದುಕೊಂಡರು. ಮನೆಗೆ ಹಿಂತಿರುಗುವ ವೇಳೆಗೆ ಅವರಿಗೆ 20 ವರ್ಷ ವಯಸ್ಸು. ತಂದೆ ತಾಯಿಯರ ಒತ್ತಾಯಕ್ಕೆ ಮಣಿದು ಒಲ್ಲದ ಮನಸ್ಸಿನಿಂದ ಅಕ್ಕಯ್ಯಮ್ಮ ಎಂಬುವರನ್ನು ವಿವಾಹವಾದರು. ಅವರಿಗೆ ಒಂದು ಹೆಣ್ಣು ಮಗುವಾಯಿತು. ಆದರೆ ಒಂದೆರಡು ವರ್ಷಗಳಲ್ಲೇ ಅಕ್ಕಯ್ಯಮ್ಮ ನಿಧನರಾದರು.

ಶಾಸ್ತ್ರಿಗಳು ಪುನಃ ಮನೆ ಬಿಟ್ಟು ದೇಶ ಸಂಚಾರ ಕೈಗೊಂಡರು. ನೇಪಾಳದಲ್ಲಿ ಇವರಿಗೆ ನಿಜಾನಂದರೆಂಬ ಯೋಗಿಗಳ ದರ್ಶನವಾಯಿತು. ನಿಜಾನಂದರು ಶಾಸ್ತ್ರಿಗಳ ಮೇಲೆ ಗಾಢವಾದ ಪ್ರಭಾವ ಬೀರಿದರು. ಅವರ ಶಿಷ್ಯರಾಗಿ ಅವರ ಸೇವೆ ಮಾಡತೊಡಗಿ ಅವರಿಂದ ಉಪದೇಶ ಪಡೆದರು. ನಿಜಾನಂದರು ಶಾಸ್ತ್ರಿಗಳಿಗೆ ಉಪನಿಷತ್ತುಗಳ ಮಹಾವಾಕ್ಯವನ್ನು ಉಪದೇಶಿಸಿದರು. ಅಧ್ಯಯನ ಧ್ಯಾನದ ಮೂಲಕ ಶಾಸ್ತ್ರಿಗಳು ಅದರ ರಹಸ್ಯವನ್ನು ಅನುಭವಕ್ಕೆ ತಂದುಕೊಂಡರು. ಸನ್ಯಾಸಾಶ್ರಮ ಸ್ವೀಕರಿಸಲು ಬಯಸಿ ಗುರುಗಳನ್ನು ಕೋರಿದಾಗ ನಿಜಾನಂದರು ಅವರಿಗೆ ತಂದೆತಾಯಿ ಇರುವುದನ್ನು ತಿಳಿದು ಗೃಹಸ್ಥನಾಗಿದ್ದು ಶ್ರೀ ಶಂಕರ ಭಗವತ್ಪಾದರ ಸೇವೆಯನ್ನು ಮಾಡುತ್ತಾ ವೇದಾಂತವನ್ನು ಎಲ್ಲರಿಗೂ ಬೋಧಿಸುವಂತೆ ಆಜ್ಞಾಪಿಸಿದರು. 24 ವರ್ಷ ವಯಸ್ಸಿನ ಶಿವರಾಮ ಶಾಸ್ತ್ರಿಗಳು ಗುರುಗಳ ಆದೇಶದಂತೆ ಮನೆಗೆ ಹಿಂತಿರುಗಬೇಕಾಯಿತು.

ಮನೆಗೆ ಹಿಂತಿರುಗಿ ಬಂದು ಮಂಡ್ಯದ ಬಳಿ ಇರುವ ಕೀಲಾರದಲ್ಲಿದ್ದ ಸುಬ್ಬಾಭಟ್ಟ ಮತ್ತು ಸೀತಮ್ಮನವರ ಎರಡನೇ ಪುತ್ರಿ ಪಾರ್ವತಮ್ಮನವರನ್ನು ಮದುವೆಯಾದರು. ಸೀತಮ್ಮನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಉಪಕುಲಪತಿಗಳಾಗಿದ್ದ ಹೆಚ್.ವಿ.ನಂಜುಂಡಯ್ಯನವರ ತಂಗಿ. ಶಾಸ್ತ್ರಿಗಳಿಗೆ ಮಾತಾಪಿತೃಗಳು ನಿಧನರಾದ ಮೇಲೆ ವೇದಾಂತ ಪ್ರಚಾರಕ್ಕೆ ಹೆಚ್ಚಿನ ಗಮನ ಕೊಡಲಾರಂಭಿಸಿದರು. ಶಿಷ್ಯರ ಸಂಖ್ಯೆಯೂ ಬೆಳೆಯಿತು. ಶಿವರಾಮ ಶಾಸ್ತ್ರಿಗಳು ವೇದಾಂತವು ಸಾರ್ವತ್ರಿಕವಾದದ್ದು ಎಂದು ಪರಿಗಣಿಸಿ ಜಾತಿ ಮತಗಳ ವ್ಯತ್ಯಾಸವನ್ನು ಪರಿಗಣಿಸದೆ ಶಂಕರಾದ್ವೈತವನ್ನು ಎಲ್ಲರಿಗೂ ಬೋಧಿಸಲಾರಂಭಿಸಿದರು. ಪುಸ್ತಕಗಳು ಮತ್ತು ಉಪನ್ಯಾಸಗಳ ಮೂಲಕ ಪ್ರಚಾರ ಮಾಡಲಾರಂಭಿಸಿದರು. 'ಜನ್ಮಹರ ಮಹೋತ್ಸವ ಪತ್ರಿಕೆ' ಹಾಗೂ ಮೈಸೂರಿನಲ್ಲಿ ಶ್ರೀಶಂಕರ ಮಂದಿರ, ಬೆಂಗಳೂರಿನಲ್ಲಿ ಕೈವಲ್ಯಾಶ್ರಮವನ್ನು ಸ್ಥಾಪಿಸುವ ಮೂಲಕ ಈ ಕೆಲಸ ಮಾಡಲಾರಂಭಿಸಿದರು. ವಿದ್ಯಾರಣ್ಯರ ಆರಾಧನೆ ಮತ್ತು ಕೆಲವು ಕಡೆಗಳಲ್ಲಿ ಶಂಕರ ಜಯಂತಿ ಉತ್ಸವವನ್ನು ಪ್ರಾರಂಭಿಸಿದರು. ಸಂಸ್ಕೃತ ಮತ್ತು ಕನ್ನಡಗಳಲ್ಲಿ ಅನೇಕ ಗ್ರಂಥಗಳನ್ನು ರಚಿಸಿದರು.

ಅವರು ಜಾತಿ ಮತಗಳ ಭೇದಭಾವವನ್ನು ಗಮನಕ್ಕೆ ತೆಗೆದುಕೊಳ್ಳದೆ ಎಲ್ಲರಿಗೂ ಶಂಕರಾದ್ವೈತವನ್ನು ಬೋಧಿಸುತ್ತಿದ್ದುದು ಸಂಪ್ರದಾಯವಾದಿಗಳಿಗೆ ಸರಿತೋರದೆ ಬಲವಾಗಿ ವಿರೋಧಿಸಲಾರಂಭಿಸಿದರು. ಶಾಸ್ತ್ರಿಗಳು ಅವರ ಆಕ್ರೋಶಕ್ಕೆ ಗುರಿಯಾದರು. ಅವರಿಗೆ ಛೀಮಾರಿ ಹಾಕಲು ಮೈಸೂರಿನ ತ್ರಿಣೇಶ್ವರ ದೇವಸ್ಥಾನದಲ್ಲಿ ಈ ಜನ ಸಭೆಯೊಂದನ್ನು ಏರ್ಪಡಿಸಿದ್ದರು. ಸಭೆಯಲ್ಲಿ ತ್ರಿಮತಸ್ಥ ಬ್ರಾಹ್ಮಣರೆಲ್ಲಾ ಸೇರಿದ್ದರು. ತೀರ್ಪು ನೀಡಲು ಹಿರಿಯರೊಬ್ಬರು ಅಧ್ಯಕ್ಷ ಸ್ಥಾನ ವಹಿಸಿದ್ದರು. ಸಭೆಯ ಮುಂದೆ ದೂರುಗಳ ಪಟ್ಟಿಯನ್ನು ಇಡಲಾಯಿತು. "ಶಿವರಾಮ ಶಾಸ್ತ್ರಿಗಳ ಮೈಮೇಲೆ ಜನಿವಾರವಿರುವುದಿಲ್ಲ. ಅವರು ಸಂಧ್ಯಾವಂದನೆ ಮಾಡುವುದಿಲ್ಲ" ಎಂದೆಲ್ಲಾ ಒಬ್ಬರು ಆರೋಪ ಮಾಡಿದರು. ತೀರ್ಪುದಾರರು ಶಾಸ್ತ್ರಿಗಳ ಅಭಿಪ್ರಾಯವನ್ನು ಕೇಳಲಾಗಿ ಅವರು, "ಈಗ ತಾನೇ ದೂರುಗಳ ಪಟ್ಟಿ ನಮ್ಮ ಮುಂದಿಟ್ಟರಲ್ಲ ಅವರ ಮೈಮೇಲೆ ಜನಿವಾರವಿದೆಯೇ ಮೊದಲು ಪರೀಕ್ಷಿಸಿ ನೋಡಿ" ಎಂದು ಹೇಳಿದರಂತೆ. ಅದನ್ನು ಹಾಸ್ಯವನ್ನಾಗಿ ಕಂಡ ಆ ದೂರು ಮಾಡಿದವರು ಜನಿವಾರ ತೋರಿಸಲು ಉತ್ತರೀಯವನ್ನು ಸರಿಸಿದಾಗ ಅವರ ಮೈಮೇಲೆ ಜನಿವಾರವೇ ಇರಲಿಲ್ಲವಂತೆ! ಇದರಿಂದ ಸಭೆಯಲ್ಲಿದ್ದವರಿಗೆ ಅವರ ಸಾಧನೆಯ ವಿಷಯದಲ್ಲಿ ಭಯವಾಗಿ ಅವರ ಬಗ್ಗೆ ಗೌರವ ಮೂಡಿತಂತೆ. ಶಾಸ್ತ್ರಿಗಳನ್ನು ಕುರಿತಂತೆ ನಡೆದ ಇಂತಹ ಪ್ರಕರಣಗಳು ಹಲವಾರು.

ಸಿದ್ಧಿ, ಪವಾಡಗಳಲ್ಲಿ ನಂಬಿಕೆ ಇಟ್ಟುಕೊಳ್ಳದಿದ್ದ ಶಿವರಾಮ ಶಾಸ್ತ್ರಿಗಳು ಮೈಸೂರಿನಲ್ಲಿ ಮೊಟ್ಟಮೊದಲು ಶ್ರೀಶಂಕರ ಮಂದಿರವನ್ನು ಸ್ಥಾಪಿಸಿದರು. ಬೆಂಗಳೂರಿನಲ್ಲಿ ಕೈವಲ್ಯಾಶ್ರಮವನ್ನು ಸ್ಥಾಪಿಸಿದರು. ತಮ್ಮ ಉದಾತ್ತ ಬದುಕಿನ ಮೂಲಕವಲ್ಲದೆ, ಅವರು 35 ಕೃತಿಗಳನ್ನು ರಚಿಸಿದರು. ಆದಿಶಂಕರರ ಪರಮ ಭಕ್ತರೂ, ಅನುಭವದ ಸಾಕಾರರೂ ಆದ ಶಿವರಾಮ ಶಾಸ್ತ್ರಿಗಳು ವೇದಾಂತಕ್ಕೆ ಅಪಾರ ಕೊಡುಗೆ ನೀಡಿ ಅದ್ವೈತ ವೇದಾಂತಕ್ಕೆ ಒಂದು ಹೊಸ ಆಯಾಮವನ್ನೇ ನೀಡಿದರು. 1924ರಲ್ಲಿ ಕೋಟೆ ಮೊಹಲ್ಲಾದಲ್ಲಿ ಶ್ರೀ ಅಭಿನವ ಶಂಕರಾಲಯ ಪ್ರಾರಂಭವಾಗುವ ಮುನ್ನವೇ, ಇವರು ಸುಮಾರು 1910ರಲ್ಲಿ ಸೀತಾ ವಿಲಾಸ ಪಕ್ಕದಲ್ಲಿರುವ ಅಡ್ಡರಸ್ತೆಯಲ್ಲಿ ಶ್ರೀ ಶಂಕರ ಮಂದಿರವನ್ನು ಸ್ಥಾಪಿಸಿದ್ದರೆನ್ನಲಾಗಿದೆ. ಅವರು ಹುಟ್ಟಿದ ಮನೆಯೂ ಇಲ್ಲಿಯೇ ಇತ್ತೆಂದು ಹೇಳಲಾಗಿದೆ. ಆ ರಸ್ತೆಗೆ ಇಂದಿಗೂ ಶಂಕರ ಮಠದ ರಸ್ತೆ ಎಂಬ ಹೆಸರಿದೆ.

ಆದಿ ಶಂಕರರ ಪರಮ ಭಕ್ತರಾಗಿದ್ದ ಶಿವರಾಮ ಶಾಸ್ತ್ರಿಗಳು ಕೇವಲ 42 ವರ್ಷಗಳ ಕಾಲ ಬದುಕಿದ್ದರು. ಆದವಾನಿಯ ಸಮೀಪದ ಬದನಹಾಳು ಎಂಬಲ್ಲಿ ತಮ್ಮ ಶಿಷ್ಯನ ಮನೆಗೆ ಹೋಗಿದ್ದಾಗ 1910ರ ಆಗಸ್ಟ್ 25ರಂದು ದೇಹತ್ಯಾಗ ಮಾಡಿದರು. ಅವರು ರಚಿಸಿರುವ ಕೃತಿಗಳು ಇಂದಿಗೂ ಪ್ರಚಾರದಲ್ಲಿವೆ.

ಪೆರಿಫೆರಲ್ ರಿಂಗ್ ರಸ್ತೆ ಡಿಪಿಆರ್ ಸಿದ್ಧಪಡಿಸಲು ಮುಡಾದಿಂದ 3 ಸಂಸ್ಥೆಗಳ ಪಟ್ಟಿ

ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಕೆ





ಮೈಸೂರು,ಏ.6(ಆರ್‌ಕೆ)– ಮೈಸೂರಿನ ಹೊರವಲಯದ ಬಹು ನಿರೀಕ್ಷಿತ ಉದ್ದೇಶಿತ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಿಸುವ ಯೋಜನೆಯ ಕಾರ್ಯ ಸಾಧ್ಯತೆ ವರದಿ (ಫಿಸಿಬಿಲಿಟಿ ರಿಪೋರ್ಟ್) ಮತ್ತು ಸಮಗ್ರ ಯೋಜನಾ ವರದಿ (ಡಿಪಿಆರ್) ತಯಾರಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ವು ಮೂರು ಸಂಸ್ಥೆಗಳ ಪಟ್ಟಿ ಮಾಡಿದೆ

ಬೆಳೆಯುತ್ತಿರುವ ಮೈಸೂರು ನಗರ ವ್ಯಾಪ್ತಿ ಜನಸಂಖ್ಯೆ, ವಾಹನಗಳ ದಟ್ಟಣೆಯಿಂದಾಗಿ ಪ್ರಸ್ತುತ ಇರುವ ಹೊರ ವರ್ತುಲ ರಸ್ತೆ (outer ring road) ಮೇಲೆ ಒತ್ತಡ ಜಾಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಮುಡಾ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿದೆ. ನಗರದ ಹೊರವರ್ತುಲದಲ್ಲಿ 105ರಿಂದ 110 ಕಿಮೀ ಉದ್ದದ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಯೋಜನೆಗೆ ಫಿಸಿಬಿಲಿಟಿ ರಿಪೋರ್ಟ್ ಮತ್ತು ಡಿಪಿಆರ್ ತಯಾರಿಸಲು 10 ಕೋಟಿ ರೂ. ಅನುದಾನವನ್ನು ಪ್ರಾಧಿಕಾರದ ಬಜೆಟ್‌ನಲ್ಲಿ ಮೀಸಲಿರಿಸಿ ಅದರಂತೆ 2023ರ ಜೂ.15ರಂದು ಟೆಂಡರ್ ಕರೆಯಲಾಗಿತ್ತು.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದು ಡಿಪಿಆರ್ ತಯಾರಿಸಲು ಟೆಂಡರ್ ಕರೆದಿದ್ದೆವು. ದೇಶಾದ್ಯಂತ 14 ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದವಾದರೂ ಆ ಪೈಕಿ ಮೂರು ಏಜೆನ್ಸಿಗಳು ಮಾತ್ರ ಅರ್ಹವೆನಿಸಿದ್ದು, ಆ ಮೂರರಲ್ಲಿ ಯಾವ ಏಜೆನ್ಸಿ ಕಡಿಮೆ ಹಣ ನಮೂದಿಸಿದೆಯೋ ಅದಕ್ಕೆ ಕೆಲಸ ಒಪ್ಪಿಸಬೇಕಾಗುತ್ತದೆ ಎಂದರು. ಡಿಪಿಆರ್ ಸಿದ್ಧಪಡಿಸುವ ಯೋಜನೆ 10 ಕೋಟಿಗಳಾಗಿದೆ. ನಿಯಮಾನುಸಾರ 5 ಕೋಟಿಗಿಂತ ಹೆಚ್ಚಿನ ಮೊತ್ತದ ಯೋಜನೆಗೆ ಸರ್ಕಾರದ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುವ ಕಾರಣ ಈ ಸಂಸ್ಥೆಗಳ ಏಜೆನ್ಸಿಗಳ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಸರ್ಕಾರದಿಂದ ಅನುಮೋದನೆ ದೊರೆತ ಬಳಿಕ ಲೋಕಸಭಾ ಚುನಾವಣಾ ಮಾದರಿ ನೀತಿ ಸಂಹಿತೆ ಅಂತ್ಯಗೊಂಡ ನಂತರ ಫೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಯೋಜನೆಗೆ ಡಿಪಿಆರ್ ಸಿದ್ಧಪಡಿಸಲು ಅಂತಿಮವಾಗಿ ಅರ್ಹ ಸಂಸ್ಥೆಗೆ ವರ್ಕ್ ಆರ್ಡರ್ ನೀಡಲಾಗುವುದು ಎಂದರು.

> ಈಗಾಗಲೇ ನಿಗದಿಗೊಳಿಸಿರುವಂತೆ ಅಲೈನ್‌ಮೆಂಟ್ ಜಾಗದಲ್ಲಿ ಖುದ್ದು ಸ್ಥಳ ಪರಿಶೀಲಿಸಿ ಪೆರಿಫೆರಲ್ ರಿಂಗ್ ರಸ್ತೆ ಮಾರ್ಗದಲ್ಲಿ ಬರುವ ಗ್ರಾಮಗಳು, ಕೆರೆ–ಕಟ್ಟೆ, ನಾಲೆ, ಬೆಟ್ಟ–ಗುಡ್ಡ, ಅರಣ್ಯ ಮೀಸಲು ಪ್ರದೇಶ, ದೇವಾಲಯ ಇತ್ಯಾದಿ ಸಾರ್ವಜನಿಕ ಉಪಯೋಗದ ಸೌಲಭ್ಯಗಳಿಗೆ ತೊಂದರೆಯಾಗದಂತೆ ಪ್ಲಾನ್ ತಯಾರಿಸಿ ಭೂಸ್ವಾಧೀನ, ವಿದ್ಯುತ್ ಪರಿವರ್ತಕ, ಪವರ್ ಸ್ಟೇಷನ್‌ಗಳನ್ನು ಸ್ಥಳಾಂತರಿಸಲು ಪೆರಿಫೆರಲ್ ರಿಂಗ್ ರಸ್ತೆ ನಿರ್ಮಿಸುವ ಕಾಮಗಾರಿ ಹಾಗೂ ರಸ್ತೆಯುದ್ದಕ್ಕೂ ಕೈಗಾರಿಕಾ ವಸಾಹತುಗಳು, ವಿಶ್ರಾಂತಿ ತಾಣ, ಕಾರಿಡಾರ್, ಕ್ಲಸ್ಟರ್‌ಗಳನ್ನು ನಿರ್ಮಿಸಲು ತಗಲುವ ವೆಚ್ಚ, ಯೋಜನೆಯಿಂದಾಗುವ ಅನುಕೂಲ ಇತ್ಯಾದಿ ಮಾಹಿತಿಗಳನ್ನೊಳಗೊಂಡ ಸಮಗ್ರ ಯೋಜನಾ ವರದಿಯನ್ನು ಏಜೆನ್ಸಿಯ ನಿಗದಿತ ಅವಧಿಯೊಳಗಾಗಿ ನೀಡಬೇಕಾಗುತ್ತದೆ. ಅದನ್ನು ಪ್ರಾಧಿಕಾರದ ಸಭೆಯಲ್ಲಿ ಸಂಬಂಧಿಸಿದ ಸಂಸ್ಥೆ ಚರ್ಚಿಸಿ ಅನುಮೋದನೆ ಪಡೆದ ಬಳಿಕ ಸರ್ಕಾರಕ್ಕೆ ಸಲ್ಲಿಸಿ ಕಾಮಗಾರಿಗೆ ಒಪ್ಪಿಗೆ ಪಡೆದು ಗ್ಲೋಬಲ್ ಟೆಂಡರ್ ಕರೆಯಬೇಕಾಗುತ್ತದೆ.
>
> 
>
> –ಜಿ.ಟಿ.ದಿನೇಶ್‌ಕುಮಾರ್

ಎಸ್‌ಎಸ್‌ಎಲ್‌ಸಿ ಪರೀಕ್ಷೆ ವೇಳೆ ಕರ್ತವ್ಯ ಲೋಪ; ಮುಖ್ಯ ಶಿಕ್ಷಕಿ ಅಮಾನತು

ಮೈಸೂರು, ಏ.6 (ಎಸ್‌ಪಿಎನ್)– ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರದಲ್ಲಿ ಕರ್ತವ್ಯ ಲೋಪ ಎಸಗಿದ ಆರೋಪದ ಮೇರೆಗೆ ಮುಖ್ಯ ಶಿಕ್ಷಕಿಯೊಬ್ಬರನ್ನು ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ ಅಮಾನತುಗೊಳಿಸಿದ್ದಾರೆ.

ಕೆ.ಆರ್.ನಗರ ತಾಲೂಕಿನ ಭೇರ್ಯ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕಿ ಕಾತ್ಯಾಯಿನಿ ಅಮಾನತಾದವರು. ಏ.2ರಂದು ಪರೀಕ್ಷಾ ಕೇಂದ್ರಕ್ಕೆ ಪರಿಶೀಲನೆಗಾಗಿ ತೆರಳಿದ್ದ ತಂಡಕ್ಕೆ ಅಂದು ಬೆಳಗ್ಗೆ 10.45ರಿಂದ ಮಧ್ಯಾಹ್ನ 12ರವರೆಗಿನ ಸಿಸಿ ಕ್ಯಾಮರಾ ಫೂಟೇಜ್, ರೆಕಾರ್ಡಿಂಗ್ ಲಭ್ಯವಿರುವುದಿಲ್ಲ. ಇದರಿಂದ ಸದರಿ ಸಮಯದ ಪರೀಕ್ಷಾ ನಿರ್ವಹಣೆ ದಾಖಲೀಕರಣ ಆಗದಿರುವುದು ಕಂಡು ಬಂದಿದೆ. ಉಳಿದ ಪರೀಕ್ಷಾ ಸಮಯದ ಕ್ಯಾಮರಾ ಫೋಟೇಜ್‌ಗಳನ್ನು ಗಮನಿಸಿದಾಗ ಪರೀಕ್ಷಾ ಕೊಠಡಿಗಳಲ್ಲಿ ಪರೀಕ್ಷಾರ್ಥಿಗಳು ಎಲ್ಲರೊಂದಿಗೆ ಸಂಭಾಷಣೆಯಲ್ಲಿ ತೊಡಗಿ, ಪರೀಕ್ಷಾ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಮುಖ್ಯ ಶಿಕ್ಷಕಿ ಕಾತ್ಯಾಯಿನಿ ಅವರನ್ನು ಅಮಾನತುಗೊಳಿಸಿ ಆದೇಶಿಸಲಾಗಿದೆ.

ಉಧಕಶಾಂತಿ, ಸಂಧ್ಯಾ ಗಾಯತ್ರಿ ಹೋಮ

ಮೈಸೂರು,ಏ.6–ಮೈಸೂರಿನ ಜಿಲ್ಲಾ ಬ್ರಾಹ್ಮಣ ಮಹಾಸಭಾ, ಕರ್ನಾಟಕ ಬ್ರಾಹ್ಮಣ ಹಿರಿಯ ನಾಗರಿಕ ವೇದಿಕೆ ಸಂಯುಕ್ತ ಆಶ್ರಯದಲ್ಲಿ ಧಾರ್ಮಿಕ ಪ್ರವರ್ತಕರಾದ ಡಾ.ಭಾನುಪ್ರಕಾಶ ಶರ್ಮ ಉಪಸ್ಥಿತಿಯಲ್ಲಿ ಏ.11ರಂದು ಸಂಜೆ ಉಧಕಶಾಂತಿ ಹಾಗೂ ಸಂಧ್ಯಾ ಗಾಯತ್ರಿ ಹೋಮ ನಡೆಯಲಿದೆ. ಏ.12ರಂದು ಪಂಚಮಿಯಂದು (ಶಂಕರ ಜಯಂತಿ) 60ರ ಷಷ್ಟಬ್ಧಿ, 70ರ ಭೀಮರಥ, 80ರ ಉಗ್ರರಥ ಹಾಗೂ 100ರ ಸಹಸ್ರ ಚಂದ್ರದರ್ಪಣ, ಶಾಂತಿ ಕಾರ್ಯಕ್ರಮಗಳು ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಾ.ಬಿ.ಆರ್.ನಟರಾಜ ಜೋಯಿಸ್ ನೇತೃತ್ವದಲ್ಲಿ ನಡೆಸಲಾಗುವುದು. ಆಸಕ್ತಿಯುಳ್ಳ ತ್ರಿಮತಸ್ಥ ಬಾಂಧವರು ತಮ್ಮ ಹೆಸರುಗಳನ್ನು ಶಾಕಂಭರಿ ಧಾರ್ಮಿಕ ಶ್ರದ್ಧ ಕೇಂದ್ರ, ದೇವಯ್ಯನಹುಂಡಿ ಮುಖ್ಯ ರಸ್ತೆ, ಶ್ರೀರಾಂಪುರ 2ನೇ ಹಂತ ಇಲ್ಲಿ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ಮೊ. 8088799540, 8861998817 ಸಂಪರ್ಕಿಸಬಹುದು.

ಯುಗಾದಿ ಹಬ್ಬದಂದು ರಂಗೋಲಿ ಸ್ಪರ್ಧೆ

ಮೈಸೂರು: ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಯುಗಾದಿ ಹಬ್ಬದ ಪ್ರಯುಕ್ತ ಮೈಸೂರು ನಗರ ವ್ಯಾಪ್ತಿಯ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿದೆ. ಮೊದಲ 5 ಸ್ಥಾನ ಪಡೆದ ವಿಜೇತರಿಗೆ ಆಕರ್ಷಕ ಬಹುಮಾನ ನೀಡಲಾಗುವುದು. ಸ್ಪರ್ಧಿಸಿದ ಎಲ್ಲರಿಗೂ ನೆನಪಿನ ಪತ್ರ ನೀಡಲಾಗುವುದು. ಯುಗಾದಿ ಹಬ್ಬದಂದು ಮಹಿಳೆಯರು ತಮ್ಮ ಮನೆಗಳ ಮುಂದೆ ಆಕರ್ಷಕ ರಂಗೋಲಿಯನ್ನು ಬಿಡಿಸಿ 9880752727 ಸಂಖ್ಯೆಗಳಿಗೆ ವಾಟ್ಸಾಪ್ ಮೂಲಕ ರಂಗೋಲಿ ಚಿತ್ರ ಕಳುಹಿಸಬೇಕು. ಅಲ್ಲದೆ, ಹೆಸರು ಮತ್ತು ವಿಳಾಸ ದಾಖಲಿಸಬೇಕು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಭಾಗ್ಯವಿದಾತ ಸಿದ್ದರಾಮಯ್ಯ ಕೊಡುಗೆ ಗಮನದಲ್ಲಿರಿಸಿಕೊಂಡು ಮತ ಹಾಕಿ

ಮತದಾರರಿಗೆ ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡ ಕಿವಿಮಾತು



ಮತ ಯಾಚನೆ ಸಂದರ್ಭ ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಮಾತನಾಡಿದರು.

ಮೈಸೂರು,ಏ.6(ಎಂಟಿವೈ)– ಎಲ್ಲಾ ಜಾತಿ, ಜನಾಂಗ ಹಾಗೂ ಧರ್ಮದ ಬಡವರಿಗೆ ನೆರವಾಗುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ 5 ಗ್ಯಾರಂಟಿ ಯೋಜನೆಯನ್ನು ಲೇವಡಿ ಮಾಡುತ್ತಿರುವ ಬಿಜೆಪಿಗೆ ಜನ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಮನವಿ ಮಾಡಿದ್ದಾರೆ.

ಮೈಸೂರು ತಾಲೂಕಿನ ರಮ್ಮನಹಳ್ಳಿಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮತಯಾಚನೆ ಮಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಬಡವರ ಬಂಧು ಆಗಿದ್ದಾರೆ. ಬಡತನದ ಕಷ್ಟವನ್ನು ಅನುಭವಿಸಿರುವ ಸಿದ್ದರಾಮಯ್ಯ, ಅನ್ನಭಾಗ್ಯ, ಕ್ಷೀರಭಾಗ್ಯ, ಶೂ ಭಾಗ್ಯ, ವಿದ್ಯಾಸಿರಿ ಸೇರಿದಂತೆ ವಿವಿಧ ಜನಪರ ಯೋಜನೆಗಳನ್ನು ಮೊದಲ ಅವಧಿಯಲ್ಲಿ ಅನುಷ್ಠಾನಗೊಳಿಸಿದರು. ಇದೀಗ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ದೇಶದಲ್ಲಿಯೇ ಯಾವ ರಾಜ್ಯದಲ್ಲೂ ಇಲ್ಲದ ಯೋಜನೆಗಳು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲಾಗಿದೆ. ಉಚಿತ ವಿದ್ಯುತ್, ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ, ಮಹಿಳೆಯರಿಗೆ ತಿಂಗಳಿಗೆ ಎರಡು ಸಾವಿರ ಆರ್ಥಿಕ ನೆರವು, ನಿರುದ್ಯೋಗಿ ವಿದ್ಯಾವಂತರಿಗೆ ಗೌರವಧನ ನೀಡುವ ಈ ಐದು ಗ್ಯಾರಂಟಿ ಯೋಜನೆಗಳು ಯಾವುದೇ ಒಂದು ಜಾತಿ, ಧರ್ಮಕ್ಕೆ ಸೀಮಿತವಾಗಿಲ್ಲ. ಎಲ್ಲರೂ ಈ ಯೋಜನೆಗಳ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ಆದರೆ, ಬಿಜೆಪಿ ನಾಯಕರು ಗ್ಯಾರಂಟಿ ಯೋಜನೆಗಳನ್ನು ಅಣಕಿಸುತ್ತಿದ್ದಾರೆ. ಮಹಿಳೆಯರು ಈ ಚುನಾವಣೆಯಲ್ಲಿ ಬಿಜೆಪಿಗರಿಗೆ ತಕ್ಕ ಪಾಠ ಕಲಿಸಬೇಕು ಎಂದು ಮನವಿ ಮಾಡಿದರು.

ಕಳೆದ 25 ವರ್ಷದಿಂದ ಜಿಲ್ಲೆಯ ಜನರ ಪರ ಹೋರಾಟ ಮಾಡಿ ಕೊಂಡು ಬಂದಿರುವ ಎಂ.ಲಕ್ಷ್ಮಣ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸಲಾಗಿದೆ. ಅವರು ಎರಡೂ ಜಿಲ್ಲೆಗಳ ಜನರ ಸಂಕಷ್ಟಕ್ಕೆ ಸ್ಪಂದಿಸಲಿದ್ದಾರೆ. ಕ್ಷೇತ್ರದ ಜನರ ತಮ್ಮತನವನ್ನು ಕಾಯ್ದುಕೊಳ್ಳಲು, ಬಿಜೆಪಿಯನ್ನು ತಿರಸ್ಕರಿಸಬೇಕು. ಬಡವರು, ದೇಶ, ಸಂವಿಧಾನ ಉಳಿಯಬೇಕಾದರೆ ಕಾಂಗ್ರೆಸ್‌ಗೆ ಮತ ನೀಡಬೇಕು. ಸಂವಿಧಾನ ಬದಲಿಸಲು ಉದ್ದೇಶಿಸಿರುವ ಬಿಜೆಪಿ ನಾಯಕರಿಗೆ ತಕ್ಕ ಪಾಠ ಕಲಿಸಬೇಕು ಎಂದು ಮನವಿ ಮಾಡಿದರು.

ರಮ್ಮನಹಳ್ಳಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಪ್ರಚಾರ ಸಭೆ

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ವಾರ್ಷಿಕ ಲಕ್ಷ ನೆರವು; ಯುವಕರಿಗೆ ಕೌಶಲ ತರಬೇತಿಗೆ ಲಕ್ಷ ಸಹಾಯ




ಮೈಸೂರು ತಾಲೂಕಿನ ರಮ್ಮನಹಳ್ಳಿಯಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮತಯಾಚಿಸಿದರು.

ಮೈಸೂರು, ಏ.6(ಎಂಟಿವೈ)– ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಮಹಿಳಾ ನ್ಯಾಯ ಗ್ಯಾರಂಟಿ ಯೋಜನೆ ಜಾರಿಗೊಳಿಸಿ, ಕುಟುಂಬದ ಯಜಮಾನಿಗೆ ವಾರ್ಷಿಕ ಒಂದು ಲಕ್ಷ ರೂ. ಹಾಗೂ ಯುವ ನ್ಯಾಯ ಗ್ಯಾರಂಟಿ ಯೋಜನೆಯಡಿ ವಿದ್ಯಾವಂತ ಯುವಕರಿಗೆ ಕೌಶಲ ತರಬೇತಿಗೆ ಲಕ್ಷ ರೂ. ನೀಡುವ ಕಾರ್ಯಕ್ರಮ ಜಾರಿಗೊಳಿಸಲಿದೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಭರವಸೆ ನೀಡಿದ್ದಾರೆ.

ಮೈಸೂರು ತಾಲೂಕಿನ ರಮ್ಮನಹಳ್ಳಿಯಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹಿ ಮಾಡಿ ನೀಡಿದ್ದ ಗ್ಯಾರಂಟಿ ಕಾರ್ಡ್ ಮಾದರಿಯಲ್ಲಿಯೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ವರಿಷ್ಠ ರಾಹುಲ್ ಗಾಂಧಿ ಸಹಿ ಮಾಡಿರುವ ಗ್ಯಾರಂಟಿ ಕಾರ್ಡ್ ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಐದು ನ್ಯಾಯದಡಿ 25 ಭರವಸೆ ನೀಡಲಾಗಿದೆ. ಈ ಬಾರಿ ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ವಾತಾವರಣವಿದ್ದು, ರಾಜ್ಯದಲ್ಲಿ ಜಾರಿಗೊಳಿಸಿರುವ ಗ್ಯಾರಂಟಿ ಕಾರ್ಯಕ್ರಮದಂತೆ ದೇಶದಾದ್ಯಂತ ಗ್ಯಾರಂಟಿ ಕಾರ್ಯಕ್ರಮಗಳು ಜಾರಿಗೊಳ್ಳಲಿವೆ ಎಂದರು.

ಮಹಿಳಾ ನ್ಯಾಯ ಗ್ಯಾರಂಟಿಯಡಿ ಕುಟುಂಬದ ಯಜಮಾನಿಗೆ ವರ್ಷಕ್ಕೆ ಒಂದು ಲಕ್ಷರೂ. ಆರ್ಥಿಕ ನೆರವು, ರೈತ ನ್ಯಾಯ ಗ್ಯಾರಂಟಿಯಡಿ ರೈತರು ಮಾಡಿರುವ ಸಾಲ ಮನ್ನಾ ಮಾಡಲಾಗುತ್ತದೆ. ಶ್ರಮಿಕ ನ್ಯಾಯ ಗ್ಯಾರಂಟಿಯಡಿ ನರೇಗಾ ಯೋಜನೆಯಡಿ ಕನಿಷ್ಠ ಕೂಲಿ 400 ರೂ. ನೀಡಿ, ವರ್ಷಕ್ಕೆ 200 ದಿನ ಕೆಲಸ ನೀಡಲಾಗುತ್ತದೆ. ಜಾತಿಗಣತಿ ನಡೆಸಿ, ಅದರ ಆಧಾರದ ಮೇರೆಗೆ ಸವಲತ್ತು ನೀಡಲು ಉದ್ದೇಶಿಸಲಾಗಿದೆ ಎಂದರು.

ರಾಜ್ಯ ಸರ್ಕಾರ ಗೃಹಲಕ್ಷ್ಮಿ ಯೋಜನೆಯಡಿ ಯಜಮಾನಿಗೆ ತಿಂಗಳಿಗೆ 2 ಸಾವಿರ ರೂ.ನಂತೆ ವರ್ಷಕ್ಕೆ 24 ಸಾವಿರ ರೂ. ನೀಡುತ್ತಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ವರ್ಷಕ್ಕೆ ಒಂದು ಲಕ್ಷ ಸೇರಿದಂತೆ ವಾರ್ಷಿಕ 1.24 ಲಕ್ಷ ಸಿಕ್ಕಂತಾಗುತ್ತದೆ. ಇದರಿಂದ ಮಹಿಳೆಯರು ಸ್ವಾವಲಂಬಿ ಜೀವನ ನಡೆಸಿ, ಕುಟುಂಬ ಮುನ್ನಡೆಸಲು ಸಹಕಾರಿಯಾಗಲಿದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ನನಗೆ (ಎಂ.ಲಕ್ಷ್ಮಣ) ಬೆಂಬಲ ನೀಡಬೇಕು. ನಿಮ್ಮ ಸೇವೆ ಮಾಡಲು ನಾನು ಬದ್ಧ. ರಾಜ್ಯ ಸರ್ಕಾರ ಇನ್ನು ನಾಲ್ಕು ವರ್ಷ ಇರುತ್ತದೆ. ಈ ಅವಧಿಯಲ್ಲಿ ನಿಮ್ಮ ಸೇವೆ ಮಾಡಲು ಅವಕಾಶ ನೀಡುವಂತೆ ಕೋರಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಡಾ.ಯತೀಂದ್ರ, ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಚುನಾವಣಾ ಹಬ್ಬ: ಚಿತ್ರಕಲಾ ಸ್ಪರ್ಧೆ

ಮೈಸೂರು, ಏ.6– 2024ರ ಲೋಕಸಭಾ ಚುನಾವಣೆ ಹಿನ್ನೆಲೆ ಸ್ವೀಪ್ ಸಮಿತಿ ವತಿಯಿಂದ ಮತದಾರರಲ್ಲಿ ಮತದಾನದ ಮಹತ್ವ, ಪ್ರತಿಯೊಂದು ಮತದಾನದ ಮೌಲ್ಯ ಹಾಗೂ ನೈತಿಕ ಮತದಾನ ಬಗ್ಗೆ, ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಸಂಬಂಧ ಏ.8 ರಂದು ಬೆಳಿಗ್ಗೆ 10 ಗಂಟೆಗೆ ಕಲಾಮಂದಿರದಲ್ಲಿ 'ಚುನಾವಣಾ ಹಬ್ಬ'ವನ್ನು ಆಯೋಜಿಸಲಾಗಿದೆ.

ಮತದಾನ ಮಹತ್ವ ಹಾಗೂ ನೈತಿಕ ಮತದಾನದ ಬಗ್ಗೆ ಬೆಳಗ್ಗೆ 9ರಿಂದ 10 ಗಂಟೆವರೆಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವ ಅಭ್ಯರ್ಥಿಗಳು ಪರಿಕರಗಳನ್ನು ತಂದು ಮತದಾನದ ಪ್ರಾಮುಖ್ಯತೆ ಬಗ್ಗೆ ಚಿತ್ರ ಬಿಡಿಸುವುದು. ಸ್ಪರ್ಧೆಯಲ್ಲಿ ಭಾಗವಹಿಸಲು ಯಾವುದೇ ವಯೋಮಾನದ ಮಿತಿ ಇರುವುದಿಲ್ಲ. ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಸೂಕ್ತ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತದೆ. ಹಾಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಸಿಇಓ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷೆ ಕೆ.ಎಂ. ಗಾಯತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಪರ ಕುವೆಂಪುನಗರ ವಾರ್ಡ್ 47ರಲ್ಲಿ ಮತ ಯಾಚನೆ ಮಾಡಲಾಯಿತು. ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮಹಾಪೌರರಾದ ಟಿ.ಬಿ.ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಶೋಭಾ ಮೋಹನ್, ಪಲ್ಲವಿ ಬೇಗಂ, ಪ್ರದೀಪ್‌ಕುಮಾರ್, ನಗರಪಾಲಿಕೆ ನಾಮ ನಿರ್ದೇಶಿತ ಮಾಜಿ ಸದಸ್ಯರಾದ ತಂಗವೇಲು, ವೆಂಕಟೇಶ್, ಕೆ.ಆರ್. ಕ್ಷೇತ್ರ ಅಧ್ಯಕ್ಷರಾದ ಗಿರೀಶ್, ಸೋಮು, ಮುಖಂಡರಾದ ರಮೇಶ್ ರಾಮಪ್ಪ, ಮಹಿಳಾ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ದಲಿತ ಮುಖಂಡರ ನಡುವೆ ವೈಷಮ್ಯ ಬಿತ್ತುತ್ತಿದ್ದಾರೆ

ದೇವರಾಜ ಅರಸು ವೇದಿಕೆ ಅಧ್ಯಕ್ಷ ಬಿಳಿಕೆರೆ ರಾಜು ಆರೋಪ

ಮೈಸೂರು, ಏ.6(ಜಿಎ)–ಹುಣಸೂರಿನಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ನಡೆಯಿಂದ ದಲಿತ ಸಮುದಾಯಗಳು ಲೋಕಸಭಾ ಚುನಾವಣೆಯಲ್ಲಿ ಮತವನ್ನು ಕಾಂಗ್ರೆಸ್‌ಗೆ ನೀಡಬೇಕೋ ಬೇಡವೋ ಎಂದು ಚಿಂತಿಸುವ ಮಟ್ಟಕ್ಕೆ ತಲುಪುತ್ತಿದ್ದು, ಮುಖ್ಯಮಂತ್ರಿಗಳು ಮತ್ತು ಕೆಪಿಸಿಸಿ ಅಧ್ಯಕ್ಷರು ಹುಣಸೂರಿನತ್ತ ಗಮನಹರಿಸಬೇಕೆಂದು ದೇವರಾಜ ಅರಸು ವೇದಿಕೆ ಅಧ್ಯಕ್ಷ ಬಿಳಿಕೆರೆ ರಾಜು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು 1955ರಿಂದಲೂ ದೇವರಾಜ ಅರಸು ಮತ್ತು ಅವರ ಪುತ್ರಿ ಚಂದ್ರಪ್ರಭ ಅರಸು ಅವರನ್ನು ಬೆಂಬಲಿಸಿಕೊಂಡು 1983ರಲ್ಲಿ ಅಧಿಕೃತವಾಗಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತನಾಗಿ ಸೇವೆ ಸಲ್ಲಿಸಿ, ಕಾಂಗ್ರೆಸ್ ಸರ್ಕಾರದ ಅನೇಕ ಯೋಜನೆಗಳನ್ನು ಹಳ್ಳಿ ಹಳ್ಳಿಗೆ ತಲುಪಿಸುವಲ್ಲಿ ಶ್ರಮಪಟ್ಟಿದ್ದು, 2008ರ ವಿಧಾನಸಭಾ ಚುನಾವಣೆಯಲ್ಲಿ ಪ್ರಬಲ ಆಕಾಂಕ್ಷಿಯಾಗಿದ್ದೆ. ಈ ವೇಳೆ ಪಕ್ಷ ಹೆಚ್.ಪಿ. ಮಂಜುನಾಥ್ ಅವರಿಗೆ ಸ್ಪರ್ಧಿಸಲು ಅವಕಾಶ ಕಲ್ಪಿಸಿತು. ಗೆದ್ದು ಬಂದ ಮಂಜುನಾಥ್ ದಲಿತ ಸಮುದಾಯದ ಮುಖಂಡರ ನಡುವೇ ವೈಷಮ್ಯ ಬಿತ್ತುವ ಕೆಲಸಕ್ಕೆ ಮುಂದಾದರು ಎಂದರು.

ಇದನ್ನು ಪ್ರಶ್ನಿಸುವ ನಾಯಕರನ್ನು ಪರಸ್ಪರ ಎತ್ತಿಕಟ್ಟುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬಂದಿದ್ದು, ಅವರ ತೇಜೋವಧೆಗೆ ನಾನು ಗುರಿಯಾಗಬೇಕಾಯಿತು. ಪರಿಣಾಮ ಜೆಡಿಎಸ್‌ನಲ್ಲಿ ಗುರುತಿಸಿಕೊಂಡೆ. ಈ ಪರಿಣಾಮ ನಂತರ ಹೆಚ್.ವಿಶ್ವನಾಥ್ ಗೆದ್ದು ಬಂದರು. ಸೋಲನ್ನು ಅನುಭವಿಸಿದ ಮಂಜುನಾಥ್ ಬದಲಾಗದೆ, 2019ರ ಉಪಚುನಾವಣೆಯಲ್ಲಿ ಗೆದ್ದು ಪ್ರಾಮಾಣಿಕ ಕಾರ್ಯಕರ್ತರನ್ನು ಕಡೆಗಣಿಸಿದ ಪರಿಣಾಮ 2023ರಲ್ಲಿ ಸೋಲು ಅನುಭವಿಸಬೇಕಾಯಿತು ಎಂದು ದೂರಿದರು.

ಇತ್ತೀಚೆಗೆ ಡಾ.ಜಿ.ಪರಮೇಶ್ವರ್ ಅವರು ನನ್ನನ್ನು ಕರೆದು ಕಾಂಗ್ರೆಸ್ ಪಕ್ಷಕ್ಕೆ ಸೇರಬೇಕೆಂದು ಸೂಚಿಸಿ, ತಾವೇ ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುವುದಾಗಿಯೂ ತಿಳಿಸಿದರು. ಅವರ ಸೂಚನೆಯಂತೆ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ ಅವರನ್ನು ಭೇಟಿ ಮಾಡಿ ನಾನು ಮತ್ತು ನನ್ನೊಟ್ಟಿಗೆ 300ಕ್ಕೂ ಅಧಿಕ ಮಂದಿ ಕಾಂಗ್ರೆಸ್ ಸೇರಲು ಸಿದ್ಧರಿದ್ದೇವೆ ಎಂದು ತಿಳಿಸಿದ್ದಾಗ, ಸದ್ಯದಲ್ಲಿಯೇ ಹುಣಸೂರಿಗೆ ಭೇಟಿ ನೀಡುತ್ತೇನೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಿ ಎಂದರು. ಆದರೆ, ಪಕ್ಷ ಸೇರ್ಪಡೆ ಕಾರ್ಯಕ್ರಮಕ್ಕೆ ಬರಬೇಕಾಗಿದ್ದ ಸಚಿವರು ಮಂಜುನಾಥ್ ಏರ್ಪಡಿಸಿದ್ದ ಸಭೆಯಲ್ಲಿ ಭಾಗಿಯಾದರು. ಇದರಿಂದ ದಲಿತ ಸಮುದಾಯದ ಮುಖಂಡರು ಬೇಸರಿಸಿದರು. ಮುಂದಿನ ದಿನಗಳಲ್ಲಿ ಹುಣಸೂರು ಪಟ್ಟಣದ ಮುನೇಶ್ವರ ಕಾವಲ್ ಮೈದಾನದಲ್ಲಿ ಸಾವಿರಾರು ಕಾರ್ಯಕರ್ತರು ಸೇರಿ ಸಮಾಲೋಚನಾ ಸಭೆ ನಡೆಸಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸಬೇಕೋ ಬೇಡವೋ ನಿರ್ಧರಿಸುತ್ತೇವೆ ಎಂದರು.

ಯದುವೀರ್, ಬಾಲರಾಜ್ ಬೆಂಬಲಿಸುವಂತೆ ಜೆಡಿಎಸ್ ಮಾಜಿ ಶಾಸಕರ ಮನವಿ



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಅನ್ನದಾನಿ ಮಾತನಾಡಿದರು.

ಮೈಸೂರು, ಏ.6(ಜಿಎ)–ಮೈಸೂರು–ಕೊಡಗು ಮತ್ತು ಚಾಮರಾಜನಗರದ ಮೈತ್ರಿ ಅಭ್ಯರ್ಥಿಗಳಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಬಾಲರಾಜ್‌ಗೆ ದಲಿತ ಸಮುದಾಯದವರು ಮತ ನೀಡಿ ಗೆಲ್ಲಿಸುವಂತೆ ಮಾಜಿ ಶಾಸಕರಾದ ಅನ್ನದಾನಿ ಮತ್ತು ಅಶ್ವಿನ್ ಕುಮಾರ್ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿ ಅದೇ ಅಭಿವೃದ್ಧಿ ಎಂದು ಹೇಳಿಕೊಂಡು ಸರ್ಕಾರವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಐದು ಗ್ಯಾರಂಟಿ ಯೋಜನೆಗಳು ಎಷ್ಟು ಜನರಿಗೆ ತಲುಪಿದೆ ಮತ್ತು ಯಶಸ್ವಿಯಾಗಿದೀಯಾ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ತಮ್ಮ ಗ್ಯಾರಂಟಿ ಯೋಜನೆಗಳಿಗೆ ದಲಿತರ ಅಭಿವೃದ್ಧಿಗೆ ಮೀಸಲಿಟ್ಟಿರುವ ಎಸ್‌ಎಸ್‌ಪಿಟಿ ಹಣವನ್ನು ಬಳಸಿಕೊಂಡಿದ್ದಾರೆ. ಯಾವ ನೈತಿಕತೆ ಇಟ್ಟುಕೊಂಡು ಮತ ಕೇಳುತ್ತಿದ್ದೀರಾ ? ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಎಷ್ಟು ಅವಮಾನ ಮಾಡಿದೆ ಎಂಬುದು ಇತಿಹಾಸದಲ್ಲಿದೆ. ಅದನ್ನು ವಿದ್ಯಾವಂತ ದಲಿತರು ತಿಳಿದುಕೊಳ್ಳಬೇಕು.ಈ ಹಿಂದೆ ನಾಲ್ವಡಿ ಕೃಷ್ಣರಾಜ ಒಡೆಯರ್ ದಲಿತ ಸಮುದಾಯಕ್ಕೆ ಮೀಸಲಾತಿ ನೀಡಿದ್ದ ಏಕೈಕ ರಾಜರಾಗಿರುವುದರಿಂದ ಅವರ ವಂಶಸ್ಥರಿಗೆ ನಾವು ಮತ ನೀಡಬೇಕು ಎಂದರು.

ಬಿಜೆಪಿ ಅಧಿಕಾರಕ್ಕೆ ಬಂದರೆ, ಸಂವಿಧಾನ ಬದಲಾವಣೆ ಮತ್ತು ತಿದ್ದುಪಡಿ ಮಾಡುತ್ತಾರೆ ಎಂದು ಕಾಂಗ್ರೆಸ್‌ನವರು ದಲಿತರ ಕೇರಿಯಲ್ಲಿ ಪ್ರಚಾರ ಮಾಡುತ್ತಿರುವುದು ಖಂಡನೀಯ. ಈ ಹಿಂದೆ ಅನಂತಕುಮಾರ್ ಹೆಗಡೆ ನೀಡಿದ ಹೇಳಿಕೆಯನ್ನು ಇಟ್ಟುಕೊಂಡು ಸುತ್ತುತಾ ಇದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಅನೇಕ ಬಾರಿ ಸಂವಿಧಾನವನ್ನು ತಿದ್ದುಪಡಿ ಮಾಡಿದೆ. ಮೋದಿ ಅವರು ಅಂಬೇಡ್ಕರ್ ಅವರ ಪಂಚತೀರ್ಥ ಸ್ಥಳವನ್ನು ಅಭಿವೃದ್ಧಿ ಮಾಡಿದ್ದಾರೆ. ಆದರೆ, ಕಾಂಗ್ರೆಸಿಗರು ಅವರಿಗೆ ಅವಮಾನ ಮಾತ್ರ ಮಾಡಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಅಶ್ವಿನ್‌ಕುಮಾರ್, ಮಾಜಿ ಉಪ ಮೇಯರ್ ಕೃಷ್ಣ, ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಮುಖಂಡರಾದ ಶಿವಕುಮಾರ್, ಮುದ್ದುರಾಜ್ ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸುವಂತೆ ಶೋಷಿತ ಸಮುದಾಯಗಳಿಗೆ ಕರೆ

ಮೈಸೂರು, ಏ.6(ಜಿಎ)–ಶೋಷಿತ ಸಮುದಾಯಗಳು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿ ಸಂವಿಧಾನ ಉಳಿಸುವ ಬದ್ಧತೆಯನ್ನು ಪ್ರದರ್ಶಿಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕೆಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಕರೆ ನೀಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಸಂಚಾಲಕ ಅನಂತನಾಯ್ಕ್ ಮಾತನಾಡಿ, ಜನಸಾಮಾನ್ಯರಿಗೆ ಸುಳ್ಳು ಹೇಳಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಕೇಂದ್ರ ಸರ್ಕಾರದ ಹುಸಿ ಭರವಸೆಗಳು, ದಿಕ್ಕೆಟ್ಟ ಸಾಮಾನ್ಯ ಜನರ ಬದುಕು, ಜನರಿಗಾದ ಮಹಾ ದ್ರೋಹ, ಕರ್ನಾಟಕಕ್ಕೆ ಸತತ ವಂಚನೆ ಮತ್ತು ಇತರೆ ಆತಂಕದಲ್ಲಿ ನಮ್ಮೆಲ್ಲರ ಬದುಕು ಇಂದು ಗಂಭೀರ ಸಂಕಷ್ಟಕ್ಕೆ ಸಿಲುಕಿದೆ. ಅಲ್ಲದೇ, ವೆಚ್ಚಗಳು ಹೆಚ್ಚಾಗಿವೆ, ಆದಾಯ ಕುಸಿದಿದೆ, ಮೀಸಲಾತಿ ಇಲ್ಲವಾಗಿದೆ, ಸಾಲಗಳು ಬೆಳೆದಿವೆ. ಚಿಂತೆಗಳು ಮುತ್ತಿಕೊಂಡಿವೆ. ಆದರೆ, ಇದೆ ಸಮಯದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಪರಮ ಆಪ್ತ ಸ್ನೇಹಿತರುಗಳ ಆಸ್ತಿ ದುಪ್ಪಟ್ಟಾಗಿ ಜಗತ್ತಿನ ಅತೀ ಶ್ರೀಮಂತರಾಗಿ ಬೆಳೆಯುತ್ತಿದ್ದಾರೆ. ಬಿಜೆಪಿ ಅಕ್ರಮ ಸಂಪತ್ತನ್ನು ಗಳಿಸಿ ಜಗತ್ತಿನ ಅತೀ ಶ್ರೀಮಂತ ಪಕ್ಷವಾಗಿ ಬೆಳೆದು ನಿಂತಿದೆ ಎಂದು ದೂರಿದರು.


ಈ ವೇಳೆ ಸಂಚಾಲಕ ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಮಾತನಾಡಿ, ದೇಶ ಬಿಜೆಪಿಯನ್ನು ನಂಬಿ ಮೋಸ ಹೋಗಿದ್ದು ಸಾಕು, ದೇಶದ ಸ್ಥಿತಿಗತಿ ಅಧೋಗತಿಯತ್ತ ಸಾಗುತ್ತಿದೆ. ಹೀಗಾಗಿ ಜನತೆ ಈ ಬಾರಿಯ ಲೋಕಸಭಾ ಚುನಾವಣೆ ವೇಳೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಚುನಾಯಿಸಬೇಕೆಂದು ಮನವಿ ಮಾಡಿದರು.

ಬಿಜೆಪಿ ಅಕ್ರಮ ಸಂಪತ್ತನ್ನು ಕ್ರೋಢೀಕರಿಸಿಕೊಂಡು ಅತಿ ಶ್ರೀಮಂತ ಪಕ್ಷವಾಗಿ ಬೆಳೆದಿದ್ದು, ಪ್ರಜಾತಾಂತ್ರಿಕ ಮೌಲ್ಯಗಳನ್ನು ಗಾಳಿಗೆ ತೂರಿ ಧರ್ಮದ ಹೆಸರಿನಲ್ಲಿ ದ್ವೇಷ, ಗಲಭೆ, ದೌರ್ಜನ್ಯ ಹೆಚ್ಚಿಸಲಾಗಿದೆ. ಹೀಗಾಗಿ ಬಿಜೆಪಿಯನ್ನು ಸೋಲಿಸಲು ಮತದಾರರು ಕಾಂಗ್ರೆಸ್‌ಗೆ ಮತ ನೀಡಬೇಕೆಂದು ಕೋರಿದರು.

ಪ್ರತ್ಯೇಕ ಸಭೆ : ಕರ್ನಾಟಕ ಶೋಷಿತರ ಸಮುದಾಯಗಳ ಮಹಾ ಒಕ್ಕೂಟ ಮತ್ತು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ವತಿಯಿಂದ ಮೈಸೂರಿನ ಸಿದ್ಧಾರ್ಥ ಬಡಾವಣೆಯಲ್ಲಿರುವ ಕನಕ ಸಮುದಾಯ ಭವನದಲ್ಲಿ ಮೈಸೂರು ಜಿಲ್ಲೆಯ ಶೋಷಿತರ ಸಮುದಾಯಗಳ ಮುಖಂಡರ ಸಭೆ ನಡೆಸಲಾಯಿತು.

ಸಭೆಯಲ್ಲಿ ಕರ್ನಾಟಕದ 28 ಲೋಕಸಭಾ ಕ್ಷೇತ್ರದಲ್ಲಿಯೂ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲಲು ಶ್ರಮಿಸಬೇಕೆಂದು ನಿರ್ಧರಿಸಲಾಯಿತು. ಈ ವೇಳೆ ಪ್ರಧಾನ ಸಂಚಾಲಕ ಕೆ.ಎಂ.ರಾಮಚಂದ್ರಪ್ಪ, ರಾಜ್ಯ ಸಮಿತಿ ಸದಸ್ಯರಾದ ಆದರ್ಶ ಯಲ್ಲಪ್ಪ, ಬಿ.ಸುಬ್ರಮಣ್ಯ, ಮಾಜಿ ಮೇಯರ್‌ಗಳಾದ ನಾರಾಯಣ್, ಪುರುಷೋತ್ತಮ್ ಅನಂತ್, ಶಿವಣ್ಣ, ಪ್ರೊ.ಮಹೇಶ್ ಚಂದ್ರಗುರು, ದ್ಯಾವಪ್ಪ ನಾಯಕ, ಎನ್.ಆರ್.ನಾಗೇಶ್, ಯೋಗೇಶ್ ಉಪ್ಪಾರ್, ಕೆ.ಎಸ್.ಶಿವರಾಮು ಮತ್ತಿತರರು ಉಪಸ್ಥಿತರಿದ್ದರು.

ಕೊರಗಜ್ಜ ದೇವಾಲಯದಲ್ಲಿ ಯುಗಾದಿ ಅಮಾವಾಸ್ಯೆ ಪೂಜೆ



ಮೈಸೂರು, ಏ. 6– ಮೈಸೂರಿನ ಸ್ವಾಮಿ ಕೊರಗಜ್ಜ ದೇವಾಲಯದಲ್ಲಿ ಏ.8ರ ಸೋಮವಾರ ಯುಗಾದಿ ಅಮವಾಸ್ಯೆ ಪೂಜೆ ಏರ್ಪಡಿಸಲಾಗಿದೆ. ಅಂದು ಬೆಳಿಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೂ ಸ್ವಾಮಿ ಕೊರಗಜ್ಜನಿಗೆ ವಿಶೇಷ ಅಲಂಕಾರ, ಮಹಾಮಂಗಳಾರತಿ ಇರುತ್ತದೆ. ಮರುದಿನ ಮಂಗಳವಾರ ಯುಗಾದಿ ಹಬ್ಬದ ಹೊಸ ವರ್ಷದ ಪೂಜೆಯು ನಡೆಯಲಿದೆ. ಏ.8ರಂದು ಭಕ್ತರಿಗೆ ಪ್ರಸಾದ ವಿನಿಯೋಗ ಮತ್ತು ಅನ್ನ ಸಂತರ್ಪಣೆ ಇರುತ್ತದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.



ಜಂಬುಪುರ ಗ್ರಾಮದಲ್ಲಿ ಮೈಸೂರು ಜಿಲ್ಲಾ ಸ್ವೀಪ್ ಸಮಿತಿ ಮತ್ತು ಜಂಬುಪುರ ಗ್ರಾಪಂ ವತಿಯಿಂದ ಮಾನವ ಸರಪಳಿ ನಿರ್ಮಿಸಿ ಕಡ್ಡಾಯ ಮತದಾನ ಜಾಗೃತಿ ಮೂಡಿಸಲಾಯಿತು. ಪಿಡಿಓ ಬಸವಣ್ಣ, ಕಾರ್ಯದರ್ಶಿ ನಾಗವೇಣಿ, ಲೆಕ್ಕಸಹಾಯಕ ಆನಂದೇಗೌಡ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಈ ಬಾರಿ ಬಿಜೆಪಿ ಬದಲು ಕಾಂಗ್ರೆಸ್‌ಗೆ ಮತಹಾಕಿ

ಮಹಿಷ ದಸರಾ ಆಚರಣಾ ಸಮಿತಿ ಮನವಿ

ಮೈಸೂರು,ಏ.6(ಜಿಎ)–ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಮಾತು ತಪ್ಪಿದ ಬಿಜೆಪಿಗೆ ಮತ ಹಾಕುವ ಬದಲು ಎಲ್ಲರ ಹಿತರಕ್ಷಣೆ ಮಾಡುವ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡಬೇಕೆಂದು ಮಹಿಷ ದಸರಾ ಆಚರಣಾ ಸಮಿತಿ ಮನವಿ ಮಾಡಿದೆ

ಈ ಕುರಿತು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ದಲಿತ ಸಮುದಾಯಗಳು, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಚುನಾವಣೆ ವೇಳೆ ಮಹತ್ವದ ಪಾತ್ರ ವಹಿಸಲಿದ್ದಾರೆ. ಸಂವಿಧಾನ ಜಾರಿಯಾಗಿ ಆಡಳಿತ ಆರಂಭವಾದ ಬಳಿಕ ಇಡೀ ದೇಶವನ್ನು ನಿರುದ್ಯೋಗ, ಭ್ರಷ್ಟಾಚಾರ, ಬಡತನಕ್ಕೆ ತಳ್ಳಿದ ಏಕೈಕ ಪ್ರಧಾನಿ ಮೋದಿ ಅವರಾಗಿದ್ದಾರೆ. ಹೀಗಾಗಿ ಯುವಜನತೆ ಎಚ್ಚರಿಕೆಯಿಂದ ಮತ ಹಾಕಬೇಕೆಂದು ಕೋರಿದರು.



ಪುರುಷೋತ್ತಮ್

ಪ್ರೊ.ಕೆ.ಎಸ್.ಭಗವಾನ್ ಮಾತನಾಡಿ, ದೇಶದಲ್ಲಿ ದಲಿತರು, ಹಿಂದುಳಿದವರು, ಬಡಜನತೆ ಸಂಕಷ್ಟದಲ್ಲಿದ್ದಾರೆ. ಇವರ ಜೀವನ ಸುಧಾರಣೆ ಆಗಬೇಕೆಂದರೆ ಕಾಂಗ್ರೆಸ್‌ಗೆ ಮತ ನೀಡಬೇಕಾದ ಅಗತ್ಯವಿದೆ. ಕಾಂಗ್ರೆಸ್ ಗ್ಯಾರಂಟಿಯಿಂದ ಎಷ್ಟೋ ಬಡಜನರಿಗೆ ಅನುಕೂಲವಾಗಿದೆ. ಹೀಗಾಗಿ ಇಡೀ ದೇಶಾದ್ಯಂತ ಇದೇ ರೀತಿಯ ಗ್ಯಾರಂಟಿ ಜಾರಿಗೊಳಿಸಲು ಹೊರಟಿರುವುದು ಸ್ವಾಗತಾರ್ಹವೆಂದರು.

ಪ್ರೊ.ಮಹೇಶ್ ಚಂದ್ರಗುರು ಮಾತನಾಡಿ, ಪ್ರಧಾನಿ ಮೋದಿ ವರ್ಣರಂಜಿತರಾಗಿರಬಹುದು, ಆದರೆ ಅವರ ಆಡಳಿತದಲ್ಲಿ ದೇಶದ ಜನತೆ ಸುಖದಿಂದ ಇದ್ದಾರೆಯೇ ಎಂಬುದು ಮುಖ್ಯವಾಗಿದೆ. ನಮಗೆ ಗಾಂಧಿಯಂತಹ ಸೇವಾಲಾಲ್ ಬೇಕೇ ಹೊರತು ಮೋದಿಯಂತಹ ಶೋಕೀಲಾಲ್ ಅಲ್ಲ. ಭಾರತ ಈಗ ಪ್ರಕಾಶಿಸುತ್ತಿಲ್ಲ, ಬದಲಾಗಿ ನಲುಗುತ್ತಿದೆ. ಹೀಗಾಗಿ ಕಾಂಗ್ರೆಸ್‌ಗೆ ಜನತೆ ಮತ ನೀಡಬೇಕಾದ ಅಗತ್ಯವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಿದ್ದಸ್ವಾಮಿ, ಚಿಕ್ಕಂದಾನಿ ಉಪಸ್ಥಿತರಿದ್ದರು.

ಚುನಾವಣಾ ಪ್ರಚಾರ ಕಾರ್ಯಗಳಲ್ಲಿ ಮಕ್ಕಳ ಬಳಕೆ ನಿಷಿದ್ಧ

ಮೈಸೂರು,ಏ.6–ಚುನಾವಣಾ ಅಥವಾ ರಾಜಕೀಯ ಪಕ್ಷಗಳ ಪ್ರಚಾರ ಕಾರ್ಯಗಳಲ್ಲಿ ಯಾವುದೇ ಪಕ್ಷಗಳು 18 ವರ್ಷದೊಳಗಿನ ಮಕ್ಕಳನ್ನು ಬಳಸಿಕೊಳ್ಳುವುದನ್ನು ನಿಷೇಧಿಸಲಾಗಿದ್ದು, ಒಂದು ವೇಳೆ ಈ ರೀತಿಯ ಕಾರ್ಯಗಳಲ್ಲಿ ಮಕ್ಕಳನ್ನು ಬಳಸಿಕೊಂಡಲ್ಲಿ ಕಾಯ್ದೆಗಳನ್ವಯ ಕಾನೂನು ರೀತ್ಯಾ ಸೂಕ್ತ ಶಿಸ್ತಿನ ಕ್ರಮ ಜರುಗಿಸಲಾಗುವುದು ಎಂದು ಸಹಾಯಕ ಕಾರ್ಮಿಕ ಆಯುಕ್ತರು ತಿಳಿಸಿದ್ದಾರೆ.

ರೈತರಿಗೆ ಮೂರು ದಿನಗಳ ತರಬೇತಿ

ಮೈಸೂರು,ಏ.6–ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ಏ.12ರಂದು 'ಕೃಷಿ ಜಮೀನಿನಲ್ಲಿ ಮಣ್ಣು ಮತ್ತು ನೀರು ಸಂರಕ್ಷಣಾ ಕ್ರಮಗಳ ಅಳವಡಿಕೆ' ಏ.16ರಂದು 'ಪ್ರಸ್ತುತ ಬೇಸಿಗೆಯಲ್ಲಿ ತೋಟಗಾರಿಕೆ ಬೆಳೆಗಳ ನಿರ್ವಹಣೆ' ಏ.19 ರಂದು 'ಬೇಸಿಗೆ ಬೆಳೆಗಳನ್ನು ಬಾಧಿಸುವ ಗೆದ್ದಲು, ಕೆಂಜಿಗ ಹಾಗೂ ಇರುವೆ ನಿರ್ವಹಣೆ' ವಿಷಯಗಳ ಕುರಿತು ರೈತ ಅಥವಾ ರೈತ ಮಹಿಳೆಯರಿಗೆ ಆನ್‌ಲೈನ್ ತರಬೇತಿಗಳನ್ನು ಏರ್ಪಡಿಸಲಾಗಿದೆ. ಆಸಕ್ತ ರೈತ ಅಥವಾ ರೈತಮಹಿಳೆಯರು ಗೂಗಲ್ ಮೀಟ್ meet:kmw-kvob-syb ಲಿಂಕ್‌ನ ಮೂಲಕ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ತರಬೇತಿ ಕೇಂದ್ರದ ಕೃಷಿ ಅಧಿಕಾರಿ ದೂ.ಸಂ:8277933116 ಅನ್ನು ಸಂಪರ್ಕಿಸಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು ಎಂದು ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುನಾವಣೆ ಸಂಬಂಧಿತ ಅಹವಾಲು ನೀಡಲು 1950ಕ್ಕೆ ಕರೆ ಮಾಡಿ

ಜೆಎಸ್‌ಎಸ್ ರೇಡಿಯೋ ಕೇಂದ್ರದಲ್ಲಿ ಮಾದರಿ ನೀತಿ ಸಂಹಿತೆ ಸಂಬಂಧ ಜಿಲ್ಲಾ ಚುನಾವಣಾಧಿಕಾರಿ ಡಾ.ರಾಜೇಂದ್ರರಿಂದ ಸಲಹೆ



ಮೈಸೂರು, ಏ.6– ಮಕ್ಕಳನ್ನು ಚುನಾವಣಾ ಪ್ರಚಾರಕ್ಕೆ ಬಳಕೆ ಮಾಡುವುದು ನೀತಿಸಂಹಿತೆಗೆ ವಿರುದ್ಧವಾದದ್ದು, ಇಂತಹ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣ ಸಿ–ವಿಜ್ಜಿಲ್ ಆ್ಯಪ್ ಬಳಸಿ ಫೋಟೋ ಅಥವಾ ವಿಡಿಯೋವನ್ನು ಅಪ್‌ಲೋಡ್ ಮಾಡಿ, ದೂರು ದಾಖಲಿಸಿದರೆ ಕ್ರಮಕೈಗೊಳ್ಳಲಾಗುವುದು.

ಅಲ್ಲದೇ 1950 ಸಹಾಯವಾಣಿಗೆ ಕರೆ ಮಾಡಿ ತಿಳಿಸಬಹುದು. ಆರ್.ಓ, ಎ.ಆರ್.ಓ ಮತ್ತು ಜಿಲ್ಲಾ ಕಂಟ್ರೋಲ್ ರೂಮ್‌ಗೂ ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿಗಳು ಹಾಗೂ ಚುನಾವಣಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಜೆಎಸ್‌ಎಸ್ ರೇಡಿಯೋ 91.2 ಎಫ್.ಎಂ ಕೇಂದ್ರದಲ್ಲಿ ನಡೆದ ನೇರಸಂದರ್ಶನ ಫೋನ್ ಇನ್ ಕಾರ್ಯಕ್ರಮದಲ್ಲಿ ತಿಳಿಸಿದರು.

ಜೆಎಸ್‌ಎಸ್ ರೇಡಿಯೋ 91.2 ಎಫ್.ಎಂ. ಕೇಂದ್ರದಲ್ಲಿ ಮಾದರಿ ನೀತಿಸಂಹಿತೆ ಕುರಿತು ಆಯೋಜಿಸಿದ್ದ ನೇರ ಸಂದರ್ಶನ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜಿಲ್ಲಾಧಿಕಾರಿಗಳು ಹಾಗೂ ಚುನಾವಣಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಲೋಕಸಭಾ ಚುನಾವಣಾ ಸಂದರ್ಭದಲ್ಲಿ ಸಾರ್ವಜನಿಕರು ಹಾಗೂ ಪಕ್ಷದ ಅಭ್ಯರ್ಥಿಗಳು ಅನುಸರಿಸಬೇಕಾದ ನೀತಿ–ನಿಯಮಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಚೆಕ್‌ಪೋಸ್ಟ್‌ನಲ್ಲಿ ತಪಾಸಣಾ ವಿಳಂಬ, ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರ, ಸುಳ್ಳು ಸುದ್ದಿಗಳು, ಹಣ ಮತ್ತು ಉಡುಗೊರೆ ಸಾಗಾಣಿಕೆಯ ಕುರಿತಂತೆ ಅನುಸರಿಸಬೇಕಾದ ನಿಯಮಗಳ ಕುರಿತು ಸಾರ್ವಜನಿಕರು ಚುನಾವಣಾಧಿಕಾರಿಗಳೊಡನೆ ಹಂಚಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ಅವರು ಇದರ ಪರಿಹಾರ ಹಾಗೂ ಸೂಕ್ತ ಕ್ರಮ ಕೈಗೊಳ್ಳುವ ಕುರಿತು ಕೇಳುಗರಿಗೆ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಚುನಾವಣಾಧಿಕಾರಿಗಳು ಈ ರೀತಿಯ ಕೆಲವು ಸಮಸ್ಯೆಗಳು ತಲೆದೋರಿರಬಹುದು. ಹಾಗಾಗಿ ಈ ಚುನಾವಣಾ ಸಂದರ್ಭದಲ್ಲಿ ಸಾರ್ವಜನಿಕರ ಸಹಕಾರ ಅತ್ಯಂತ ಮುಖ್ಯವಾದದ್ದು. ಹಾಗಾಗಿ ಜನರು ಚೆಕ್‌ಪೋಸ್ಟ್ ತಪಾಸಣೆಗೆ ಸಹಕರಿಸಬೇಕು. ಚುನಾವಣೆಯನ್ನು ಹಬ್ಬದ ರೀತಿ ಆಚರಿಸಬೇಕೆಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು, ಕೆಆರ್ ನಗರ, ಹೆಚ್.ಡಿ.ಕೋಟೆ, ಸರಗೂರು ಹಾಗೂ ಚಾಮರಾಜನಗರ ಒಳಗೊಂಡಂತೆ ಹಲವು ಕರೆಗಳಿಗೆ ಅಧಿಕಾರಿಗಳು ಪ್ರತಿಕ್ರಿಯಿಸಿದರು. ಕಾರ್ಯಕ್ರಮವನ್ನು ಜೆಎಸ್‌ಎಸ್ ರೇಡಿಯೋ ಕೇಂದ್ರದ ಸಂಯೋಜಕರು ಹಾಗೂ ನಿರೂಪಕ ಶಿವಕುಮಾರ ನಡೆಸಿಕೊಟ್ಟರು. ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಪ್ರತಿಭಾ, ಜೆಎಸ್‌ಎಸ್ ರೇಡಿಯೋ ಕೇಂದ್ರದ ಕಾರ್ಯಕ್ರಮ ಸಹಾಯಕರಾದ ರಮೇಶ್, ಕನ್ಯಾಕುಮಾರಿ ಹಾಜರಿದ್ದರು.

ಮೈಸೂರು ಮಿತ್ರ
ಭಾನುವಾರ 7 ಏಪ್ರಿಲ್ 2024

ಶ್ರೀರಂಗಪಟ್ಟಣದಲ್ಲಿ ಸ್ಟಾರ್ ಚಂದ್ರು ಅಬ್ಬರದ ಪ್ರಚಾರ

ಹಲವು ಗ್ರಾಮಗಳಲ್ಲಿ ಬೈಕ್ ರ್‍ಯಾಲಿ, ರೋಡ್ ಶೋ



ವೆಂಕಟರಮಣೇಗೌಡರು ಶ್ರೀರಂಗಪಟ್ಟಣ ತಾಲೂಕಿನಲ್ಲಿ ಭರ್ಜರಿ ರೋಡ್ ಶೋ ನಡೆಸಿದರು.

ಶ್ರೀರಂಗಪಟ್ಟಣ,ಏ.6– ಮಂಡ್ಯ ಜಿಲ್ಲೆಯ ಜನರು ತೋರಿಸುತ್ತಿರುವ ಪ್ರೀತಿ, ವಿಶ್ವಾಸ ನನ್ನ ಆತ್ಮಸ್ಥೈರ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಪ್ರಚಾರಕ್ಕೆ ಹೋದ ಕಡೆಯಲ್ಲೆಲ್ಲ ನನ್ನನ್ನು ಮನೆ ಮಗನಂತೆ ಬರಮಾಡಿಕೊಳ್ಳುತ್ತಿದ್ದಾರೆ. ಅವರ ಬೆಂಬಲವೇ ನನಗೆ ಶ್ರೀರಕ್ಷೆ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಆತ್ಮವಿಶ್ವಾಸದ ನುಡಿಗಳನ್ನಾಡಿದರು.

ಶ್ರೀರಂಗಪಟ್ಟಣ ವ್ಯಾಪ್ತಿಯ ಬಸ್ತಿಪುರ, ಹುಲಿಕೆರೆ, ಹೊಂಡವಾಡಿ, ಕೆಆರ್‌ಎಸ್, ಮಜ್ಜಿಗೆಪುರ, ಬೆಳಗೊಳ, ಹೊಸ ಆನಂದೂರು, ಮೊಗರಹಳ್ಳಿ, ಪಿ.ಹೊಸಹಳ್ಳಿ, ಪಾಲಹಳ್ಳಿ, ನಗುವನಹಳ್ಳಿ, ಚಂದಗಾಲು, ಹೊಸೂರು, ಮೇಳಾಪುರ, ಹೆಬ್ಬಾಡಿಹುಂಡಿ, ಹೆಬ್ಬಾಡಿ, ಹಂಪಾಪುರ, ಹುರುಳಿ ಕ್ಯಾತನಹಳ್ಳಿ, ಚಿಕ್ಕಂಕನಹಳ್ಳಿ, ತರಿಪುರ, ಚನ್ನಹಳ್ಳಿ, ಬಿದರಳ್ಳಿ, ಮಹದೇವಪುರ ಬೋರೆ, ಮಹದೇವಪುರ, ಮಂಡ್ಯ ಕೊಪ್ಪಲು, ಗೆಂಡೆಹೊಸಳ್ಳಿ ಗ್ರಾಮಗಳಲ್ಲಿ ಮತಪ್ರಚಾರ ನಡೆಸಿದ ಅವರು ಈ ವೇಳೆ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ನಾನು ಈ ಜಿಲ್ಲೆಯ ಮಣ್ಣಿನ ಮಗ. ಜನರಿಗೆ ಒಳಿತು ಮಾಡಬೇಕು. ನನ್ನ ಜಿಲ್ಲೆಯನ್ನು ಅಭಿವೃದ್ಧಿ ಮಾಡಬೇಕೆಂಬ ಬಯಕೆಯಿಂದ ಚುನಾವಣೆಗೆ ಸ್ಪರ್ಧಿಸಿದ್ದೇನೆ. ನೂರಕ್ಕೆ ನೂರರಷ್ಟು ಜನ ನನ್ನ ಕೈ ಹಿಡಿಯಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿಗಳು ನನ್ನ ಗೆಲುವಿಗೆ ಸಹಕಾರಿಯಾಗಲಿದೆ. ಇದರ ಜೊತೆಗೆ ಸಮಾಜದ ಎಲ್ಲಾ ವರ್ಗಗಳ ಶ್ರೇಯೋಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷ ಹೊರಡಿಸಿರುವ 25 ಭರವಸೆಗಳನ್ನು ಒಳಗೊಂಡ ನ್ಯಾಯಪತ್ರಕ್ಕೆ ಜನಮನ್ನಣೆ ಸಿಗಲಿದ್ದು ಜನ 'ಕೈ' ಹಿಡಿಯಲಿದ್ದಾರೆ ಎಂದರು.

ಜಿಲ್ಲೆಯ ಸಮಸ್ಯೆ, ಸವಾಲುಗಳ ಬಗ್ಗೆ ನನಗೆ ಅರಿವಿದೆ. ಜಿಲ್ಲೆಯ ಅಭಿವೃದ್ಧಿ ಬಗ್ಗೆ ನನ್ನದೇ ಆದ ಕನಸು ಕಟ್ಟಿಕೊಂಡಿದ್ದೇನೆ. ಜನರ ಮಧ್ಯೆಯೇ ಇರಲಿದ್ದೇನೆ. ಜನಸೇವೆಯೊಂದೇ ನನ್ನ ಗುರಿ. ನನ್ನ ಗೆಲುವು ಈ ಜಿಲ್ಲೆಯ ಜನರ ಗೆಲುವು. ರೈತರ ಗೆಲುವು ಎಂದು ಹೇಳಿದರು. ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಶ್ರೀರಂಗಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಿತ್ರ ರಮೇಶ್, ಪ್ರಕಾಶ್ ಸೇರಿದಂತೆ ನೂರಾರು ಕಾರ್ಯಕರ್ತರು ಚುನಾವಣಾ ಪ್ರಚಾರದಲ್ಲಿ ತೊಡಗಿದ್ದರು.

ರಸ್ತೆ ಬದಿಯಲ್ಲೇ ಊಟ, ಟೀ...



ವೆಂಕಟರಮಣೇಗೌಡ ರಸ್ತೆಬದಿಯಲ್ಲಿ ಕುಳಿತು ಊಟ ಮಾಡುತ್ತಿರುವುದು

ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ರಸ್ತೆಬದಿಯಲ್ಲೇ ಊಟ ಮಾಡುವ ಮೂಲಕ ಸರಳತೆ ಮೆರೆದರು. ಪಾಲಹಳ್ಳಿಯಲ್ಲಿ ಮತಪ್ರಚಾರ ನಡೆಸಿದ ಬಳಿಕ ರಸ್ತೆಬದಿಯ ಅರಳಿಕಟ್ಟೆಯಲ್ಲಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಮತ್ತು ಕಾರ್ಯಕರ್ತರ ಜೊತೆಯಲ್ಲಿ ಕೂತು ಮೊಸರನ್ನ ಸೇವಿಸಿ ಎಲ್ಲರ ಗಮನ ಸೆಳೆದರು ಚಿಕ್ಕ ಅಂಕನಹಳ್ಳಿಯಲ್ಲಿ ಪ್ರಚಾರದಲ್ಲಿ ತೊಡಗಿದ್ದ ಸಂದರ್ಭದಲ್ಲಿ ಗ್ರಾಮಸ್ಥರೊಂದಿಗೆ ಟೀ ಕುಡಿದು, ಬನ್, ಬಿಸ್ಕತ್ತು ತಿನ್ನುತ್ತ ಉಭಯಕುಶಲೋಪರಿ ವಿಚಾರಿಸಿದರು. ಶ್ರೀರಂಗಪಟ್ಟಣ ತಾಲೂಕಿನ ಬಸ್ತಿಪುರದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ಅವರು ಹಳ್ಳಿಹಳ್ಳಿಗಳಲ್ಲಿ ಬೈಕ್ ರ್‍ಯಾಲಿ ನಡೆಸಿ ಮತಯಾಚನೆ ಮಾಡಿದರು. ಪ್ರಚಾರದ ನಡುವೆ ಸ್ಟಾರ್ ಚಂದ್ರು ಅವರು ಹುಲಿಗೆರೆ ಗ್ರಾಮದಲ್ಲಿನ ಶ್ರೀ ಪ್ರಸನ್ನ ವೀರಾಂಜನೇಯಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಕೆಆರ್‌ಎಸ್‌ನಲ್ಲಿರುವ ರಾಘವೇಂದ್ರ ಮಠಕ್ಕೆ ಭೇಟಿ ನೀಡಿದ್ದರು. ಅಖಿಲ ಭಾರತ ವೀರಶೈವ ಲಿಂಗಾಯತ ಮತ್ತು ಕ್ರಾಂತಿಯೋಗಿ ಬಸವಣ್ಣ ಜಂಟಿ ಪ್ರಚಾರ ಸಮಿತಿ ಮುಖಂಡರ ಭೇಟಿ ಮಾಡಿ ಬೆಂಬಲ ಕೋರಿದರು. ಪ್ರಚಾರದ ವೇಳೆ ದಲಿತ ಸಂಘಟನೆಯ ಮುಖಂಡರು ಸ್ಟಾರ್ ಚಂದ್ರು ಅವರನ್ನು ಸನ್ಮಾನಿಸಿದರು.

ಮಂಡ್ಯಕ್ಕೆ ಧಕ್ಕೆ ತರುವ ಕೆಲಸ ಯಾರೂ ಮಾಡಬಾರದು

ಶಾಸಕ ಉದಯ್ ಹೇಳಿಕೆಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಪ್ರತಿಕ್ರಿಯೆ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು

ಮಂಡ್ಯ: ಜಿಲ್ಲೆಗೆ ಮತ್ತು ಇಲ್ಲಿನ ರಾಜಕಾರಣಕ್ಕೆ ಅದರದ್ದೇ ಆದ ಗೌರವವಿದೆ. ಅದಕ್ಕೆ ಧಕ್ಕೆ ತರುವ ಕೆಲಸ ಯಾರಿಂದಲೂ ಆಗಬಾರದು. ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಮಾಜಿ ಶಾಸಕ ಎ.ಎಸ್.ರವೀಂದ್ರ ಶ್ರೀಕಂಠಯ್ಯ ಅವರ ಬಗ್ಗೆ ಮದ್ದೂರಿನ ಕಾಂಗ್ರೆಸ್ ಶಾಸಕ ಕೆ.ಎಂ.ಉದಯ್ ಅವರು 3ನೇ ದರ್ಜೆಯ ವ್ಯಕ್ತಿಗಳಂತೆ ಆಡಿರುವ ಮಾತುಗಳು ಸರಿಯಲ್ಲ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಖಂಡಿಸಿದರು.

ಶಾಸಕ ಉದಯ್ ಅವರು ಅಕ್ಕ–ತಂಗಿಯರೊಂದಿಗೆ ಜನ್ಮ ತಾಳಿಲ್ಲವೇ? ರಾಜಕಾರಣ ಮಾಡುತ್ತೇವೆಂಬ ಕಾರಣಕ್ಕೆ ಹೆಂಡತಿ–ಮಕ್ಕಳನ್ನು ಬೀದಿಗೆ ತಂದು ನಿಲ್ಲಿಸಲಾಗುತ್ತದೆಯೇ? 'ಗಂಡಸ್ತನ' ಪದ ಬಳಸಿ ಟೀಕೆ ಮಾಡಲಾರಂಭಿಸಿದವರು ಯಾರು ಎಂಬುದನ್ನು ಅರಿಯಬೇಕು. ಕಾಂಗ್ರೆಸ್‌ನ ವರಿಷ್ಠರು ಶಾಸಕ ಉದಯ್ ಅವರನ್ನು ಹದ್ದುಬಸ್ತಿನಲ್ಲಿಡಬೇಕು. ಇಲ್ಲದಿದ್ದರೆ ಮುಂದಾಗುವ ಅನಾಹುತಕ್ಕೆ ಕಾಂಗ್ರೆಸ್ ವರಿಷ್ಠರೇ ಹೊಣೆಯಾಗಬೇಕಾಗುತ್ತದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.

ಶಾಸಕ ಉದಯ್ ಅವರಾಡಿರುವ ಮಾತುಗಳಿಗೆ ಒಂದು ರೀತಿ ನಾವೇ ದಿಗ್ಭ್ರಮೆಗೊಂಡಿದ್ದೇವೆ. ಜನಪ್ರತಿನಿಧಿಗಳು ತಲೆತಗ್ಗಿಸುವ ಮಟ್ಟಿಗೆ ನಾಲಿಗೆಯನ್ನು ಹರಿಯಬಿಟ್ಟಿದ್ದಾರೆ. ಸೂರ್ಯನನ್ನು ನೋಡಿ ಆಗಸಕ್ಕೆ ಉಗುಳಿದರೆ ಅದು ನಮ್ಮ ಮುಖದ ಮೇಲೆಯೇ ಬೀಳುತ್ತದೆ ಎಂಬುದನ್ನು ಉದಯ್ ಅರಿಯಬೇಕು. ಮಾಜಿ ಶಾಸಕ ಎ.ಎಸ್.ರವೀಂದ್ರ ಶ್ರೀಕಂಠಯ್ಯ ಅವರ ತಾತ ಚುಂಚೇಗೌಡರು ದಾನಧರ್ಮ ಮಾಡಿಕೊಂಡು ಬಂದ ಮನೆತನ. ಅವರ ಜನಸೇವೆಯನ್ನು ಮೆಚ್ಚಿ ಸ್ವತಃ ಮೈಸೂರು ಮಹಾರಾಜರೇ ಶ್ಲಾಘಿಸಿ, ಅವರ ಮನೆಗೆ ಬಂದು ಊಟ ಮಾಡಿ ಹೋಗಿದ್ದಾರೆ. ಇಂತಹ ಕುಟುಂಬದ ಬಗ್ಗೆ ಕೀಳು ಭಾಷೆ ಬಳಸಿ ಮಾತನಾಡಿರುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರು ತಾತನ ಕಾಲದಿಂದಲೂ ನೂರಾರು ಎಕರೆ ಹೊಂದಿರುವ ಜಮೀನ್ದಾರರು. ಜನರ ಕಷ್ಟ ಸುಖಗಳಿಗೆ ಸ್ಪಂದಿಸಿದ, ಆರ್ಥಿಕವಾಗಿ ನೆರವು ನೀಡಿದ ಕುಟುಂಬ ಅವರದು. ಅವರ ಬಗ್ಗೆಯೂ ಕೀಳಾಗಿ ಮಾತನಾಡಿರುವುದು ಶಾಸಕ ಉದಯ್ ಅವರ ವ್ಯಕ್ತಿತ್ವಕ್ಕೆ ಶೋಭೆಯಲ್ಲ. ಜತೆಗೆ, ಜಿಲ್ಲೆಯ ಗೌರವವನ್ನು ಉಳಿಸಿಕೊಂಡು, ಕಾಪಾಡಿಕೊಂಡು ಹೋಗುವುದು ಹಾಗೂ ಗೌರವಯುತವಾಗಿ ಚುನಾವಣೆ ಮಾಡುವುದು ಎಲ್ಲರ ಕರ್ತವ್ಯ ಎಂದರು.


ಮಾಜಿ ಶಾಸಕ ಸುರೇಶ್‌ಗೌಡ ಮಾತನಾಡಿ, ಮಹಾತ್ಮಗಾಂಧೀಜಿ ಅವರು ಹೆಜ್ಜೆ ಇಟ್ಟ ಪುಣ್ಯಭೂಮಿ ಮದ್ದೂರು. ಅಂತಹ ಕ್ಷೇತ್ರವನ್ನು ಪ್ರತಿನಿಧಿಸಿರುವ ಶಾಸಕ ಉದಯ್ ಅವರು ಅಧಿಕಾರ, ಹಣದ ಮದದಲ್ಲಿ ಹೆಣ್ಣು ಮಕ್ಕಳ ಬಗ್ಗೆ ಹಗುರ ಮತ್ತು ಅವಹೇಳನಕಾರಿಯಾಗಿ ಮಾತನಾಡಿರುವುದು ಖಂಡನೀಯ ಎಂದು ಆಕ್ಷೇಪಿಸಿದರು. ಗೋಷ್ಠಿಯಲ್ಲಿ ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ,ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ನವೀನ್ ಕುಮಾರ್ ಹಾಜರಿದ್ದರು.

ಏ.14ರಂದು ಡಾ.ಹಾಮಾನಾ ಪ್ರಶಸ್ತಿ ಪ್ರದಾನ

ಮಂಡ್ಯ,ಏ.6– ಕರ್ನಾಟಕ ಸಂಘದ ವತಿಯಿಂದ ಇದೇ ಏ.14ರಂದು ಸಂಜೆ 5.30ಕ್ಕೆ ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ 11ನೇ ವರ್ಷದ ಡಾ. ಹಾಮಾನಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸಿದ್ಧ ವಕೀಲ ಸಿ.ಎಚ್.ಹನುಮಂತರಾಯ ಪ್ರಶಸ್ತಿ ಪ್ರದಾನ ಮಾಡಲಿದ್ದು, ಪ್ರೊ.ಬಿ.ಜಯಪ್ರಕಾಶ್ ಗೌಡ ಅಧ್ಯಕ್ಷತೆ ವಹಿಸುವರು. ಪ್ರಾಧ್ಯಾಪಕ ಡಾ.ಬಿ.ಬೆಟ್ಟೇಗೌಡ ಅಭಿನಂದನಾ ನುಡಿಗಳನ್ನಾಡಲಿದ್ದು, ಮುಖ್ಯ ಅತಿಥಿಗಳಾಗಿ ಕೆನರಾ ಬ್ಯಾಂಕ್‌ನ ನಿವೃತ್ತ ಮ್ಯಾನೇಜರ್ ಡಾ. ರಾಮಚಂದ್ರ, ಉದ್ಯಮಿ ವಿವೇಕ್ ಹೆಗ್ಗಡೆ ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ವಿಶ್ರಾಂತ ಕುಲಪತಿ ಡಾ.ಸೋಮಶೇಖರಗೌಡಗೆ ಭಾಷಾ ವಿಜ್ಞಾನ ಹಿರಿಯ ಪ್ರಶಸ್ತಿ ಹಾಗೂ ಹಿರಿಯ ಪ್ರಾಧ್ಯಾಪಕ ಪ್ರೊ.ಪಿ.ಮಹದೇವಯ್ಯ ಅವರಿಗೆ ಭಾಷಾ ವಿಜ್ಞಾನ ಯುವ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಹೇಳಿದರು.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಗೋ ಮಾಂಸ ಸಾಗಿಸುತ್ತಿದ್ದ ವಾಹನ ಪಲ್ಟಿ



ಮದ್ದೂರು: ಅಕ್ರಮವಾಗಿ ಗೋ ಮಾಂಸ ಸಾಗಿಸುತ್ತಿದ್ದ ವಾಹನ ಶನಿವಾರ ಮುಂಜಾನೆ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಪಲ್ಟಿಯಾದ ಪರಿಣಾಮ ಗೋಮಾಂಸ ಚೆಲ್ಲಾಡಿದ ಘಟನೆ ನಿಡಘಟ್ಟ ಗ್ರಾಮದ ಬಳಿ ನಡೆದಿದೆ.

ಬೆಂಗಳೂರು ಕಡೆಗೆ ತೆರಳುತ್ತಿದ್ದ ಗೂಡ್ಸ್ ವಾಹನ ಚಾಲಕನ ನಿಯಂತ್ರಣ ತಪ್ಪಿ ಹೆದ್ದಾರಿಯಲ್ಲಿಯೇ ಪಲ್ಟಿಯಾಗಿದೆ. ವಾಹನ ಪಲ್ಟಿಯಾಗುತ್ತಿದ್ದಂತೆ ರಸ್ತೆಗೆ ಗೋಮಾಂಸ ಬಿದ್ದಿದೆ. ಸುಮಾರು 1 ಸಾವಿರ ಕೆ.ಜಿ. ಗೋಮಾಂಸವಿತ್ತು ಎಂದು ಅಂದಾಜಿಸಲಾಗಿದೆ. ಗೂಡ್ಸ್ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ.

ಸ್ಥಳಕ್ಕೆ ಮದ್ದೂರು ಠಾಣಾ ಪೊಲೀಸರು ಆಗಮಿಸಿ ಪ್ರಕರಣ ದಾಖಲಿಸಿಕೊಂಡು ಗೋಮಾಂಸವನ್ನು ಎಲ್ಲಿಗೆ ಸಾಗಿಸಲಾಗುತ್ತಿತ್ತು ಎಂಬ ಬಗ್ಗೆ ತನಿಖೆ ನಡೆಸುತ್ತಿದ್ದಾರೆ.

ಹಿಂದು ಜಾಗರಣ ವೇದಿಕೆ ರಾಜ್ಯ ಪ್ರಮುಖ್ ಯೋಗಾನಂದ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಅಕ್ರಮವಾಗಿ ಗೋಮಾಂಸ ದಂಧೆ ನಡೆಸಿರುವವರ ವಿರುದ್ಧ ಸೂಕ್ತ ಕ್ರಮಕ್ಕೆ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಅಂಗಡಿಗಳಲ್ಲಿ ಕಳ್ಳತನ ಮಾಡುತ್ತಿದ್ದ ಮೈಸೂರಿನ ಮೂವರ ಬಂಧನ

ಭಾರತೀನಗರ,ಏ.6– ದಿನಸಿ ಅಂಗಡಿಗಳಲ್ಲಿ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಮದ್ದೂರು ತಾಲೂಕು ಕೆ.ಎಂ.ದೊಡ್ಡಿ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ಶಾಂತಿನಗರದ ನಿವಾಸಿಗಳಾದ ನವಾಜ್‌ಖಾನ್, ಅಬೀದ್ ಅಹಮದ್ ಹಾಗೂ ಸಬೀರ್‌ಖಾನ್ ಬಂಧಿತರು.

ಏ.1 ರಂದು ಬೆಳಗಿನ ಜಾವ ವಿಶೇಷ ಗಸ್ತಿನಲ್ಲಿದ್ದ ಕೆ.ಎಂ.ದೊಡ್ಡಿ ಪೊಲೀಸರು ಇನೋವಾ ಕಾರನ್ನು ತಡೆದು ಪರಿಶೀಲಿಸಿದಾಗ ಅದರಲ್ಲಿ ಸಂಶಯಾಸ್ಪದ ವಸ್ತುಗಳನ್ನು ಇಟ್ಟುಕೊಂಡಿದ್ದು ಕಂಡುಬಂತು. ಅವರನ್ನು ಕೂಲಂಕಷವಾಗಿ ವಿಚಾರ ಮಾಡಿದಾಗ ಮೂವರು ಕಳೆದ ಮಾ.23 ರಂದು ರಾತ್ರಿ ಕೆ.ಎಂ.ದೊಡ್ಡಿ ಟೌನ್ ಮಂಡ್ಯ ರಸ್ತೆಯಲ್ಲಿರುವ ಚಂದ್ರಣ್ಣ ಅವರ ಕಾಂಪ್ಲೆಕ್ಸ್‌ನ ದೀಕ್ಷಾ ಮಾರ್ಟ್ ದಿನಸಿ ಅಂಗಡಿಯಲ್ಲಿ ಕಳ್ಳತನ ಮಾಡಿರುವುದು ಮತ್ತು ಮಾ.17 ರಂದು ಕೆ.ಆರ್.ಪೇಟೆ ಟೌನ್‌ನಲ್ಲಿ ರಾಮಲಿಂಗೇಶ್ವರ ದಿನಸಿ ಅಂಗಡಿಯಲ್ಲಿ ಕಳ್ಳತನ ಮಾಡಿರುವುದು ತಿಳಿದು ಬಂದಿತು. ಆರೋಪಿಗಳಿಂದ ದಿನಸಿ ಪದಾರ್ಥ ಮತ್ತು ಇನೊವಾ ಕಾರು ವಶಪಡಿಸಿಕೊಳ್ಳಲಾಗಿದೆ.

ಮೈಸೂರಲ್ಲಿ ಟ್ಯಾಕ್ಸಿ ಪ್ರಯಾಣ ದರ ಪರಿಷ್ಕರಣೆ



ಮೈಸೂರು,ಏ.6(ಆರ್‌ಕೆ)–ಮೈಸೂರಿನ ಟ್ಯಾಕ್ಸಿಗಳ ಪ್ರಯಾಣ ದರ ಪರಿಷ್ಕರಣೆ ಮಾಡಿ ಮೈಸೂರು ಟ್ರಾವೆಲ್ ಅಸೋಸಿಯೇಷನ್ ಪ್ರಕಟಣೆ ಹೊರಡಿಸಿದೆ.

ವಾಹನಗಳ ನಿರ್ವಹಣಾ ವೆಚ್ಚ, ಚಾಲಕರ ದುಬಾರಿ ಸಂಬಳ, ಬಾಟ ಬೇಡಿಕೆ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಟ್ಯಾಕ್ಸಿ ಪ್ರಯಾಣ ದರವನ್ನು ಹೆಚ್ಚಿಸಲಾಗಿದೆ ಎಂದು ಮೈಸೂರು ಟ್ರಾವೆಲ್ ಅಸೋಸಿಯೇಷನ್ (ಎಂಟಿಎ) ಅಧ್ಯಕ್ಷ ಜಯಪ್ರಕಾಶ್ ಅರಸ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ದಿನಕ್ಕೆ ಕನಿಷ್ಠ 250 ಕಿ.ಮೀ. ಇದ್ದ ಪ್ರಯಾಣ ಮಿತಿಯನ್ನು 300 ಕಿ.ಮೀ.ಗೆ ನಿಗದಿಪಡಿಸಲಾಗಿದೆ. ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ 400 ಟ್ರಾವೆಲ್ ಏಜೆನ್ಸಿಗಳಲ್ಲಿ 2000 ಟ್ಯಾಕ್ಸಿಗಳು ಕಾರ್ಯನಿರ್ವಹಿಸುತ್ತಿದ್ದು ಈ ಎಲ್ಲಾ ವಾಹನಗಳನ್ನು ಪರಿಷ್ಕೃತ ಪ್ರಯಾಣ ದರ ಏ.1ರಿಂದ ಜಾರಿಗೆ ಬಂದಿದೆ ಎಂದರು.

ಈ ಹಿಂದೆ ದಿನದ ಪ್ರಯಾಣ ಮಿತಿ 250 ಕಿ.ಮೀ. ಇತ್ತು. ಈಗ ಯಾವುದೇ ಆಸನ ಸಾಮರ್ಥ್ಯದ ಟ್ಯಾಕ್ಸಿಯನ್ನು ಬಾಡಿಗೆಗೆ ತೆಗೆದುಕೊಂಡವರು ದಿನಕ್ಕೆ ಕನಿಷ್ಠ 300 ಕಿಮೀಗೆ ಪ್ರಯಾಣ ದರ ನೀಡಬೇಕಾಗುತ್ತದೆ. ಈ ಮಿತಿಗಿಂತ ಕಡಿಮೆ ದೂರ ಪ್ರಯಾಣಿಸಿದ್ದರೂ 300 ಕಿ.ಮೀ.ಗೆ ವೆಚ್ಚ ಭರಿಸಬೇಕಾಗುತ್ತದೆ ಎಂದು ಅವರು ತಿಳಿಸಿದರು. ಮೈಸೂರು ನಗರದಲ್ಲಿ ಸ್ಥಳೀಯವಾಗಿ ಕಾರಿನಲ್ಲಿ 4 ಗಂಟೆ ಕಾಲ ಅಥವಾ 40 ಕಿ.ಮೀ. ಪ್ರಯಾಣಕ್ಕೆ 1000 ರೂ, 8 ಗಂಟೆ ಅಥವಾ 80 ಕಿ.ಮೀ. ಪ್ರಯಾಣಿಸಿದರೆ 1,600 ರೂ. ಪ್ಯಾಕೇಜ್ ನಿಗದಿಪಡಿಸಲಾಗಿದೆ. ನಿಗದಿತ ಸಮಯ ಅಥವಾ ದೂರಕ್ಕಿಂತ ಹೆಚ್ಚಾಗಿ ಪ್ರಯಾಣಿಸಿದರೆ ಹೆಚ್ಚುವರಿಯಾಗಿ ಕಿ.ಮೀ.ಗೆ 11 ರೂ.ನಂತೆ ಪಾವತಿಸಬೇಕಾಗುತ್ತದೆ ಎಂದು ಅವರು ಹೇಳಿದರು.

ಮೈಸೂರಿನಿಂದ ಹೊರಗೆ ಪ್ರಯಾಣಿಸಿದರೆ ಕನಿಷ್ಠ ಅಂತರ 300 ಕಿ.ಮೀ ನಿಗದಿಪಡಿಸಿದ್ದು, ಹವಾನಿಯಂತ್ರಿತವಲ್ಲದ ಕಾರ್‌ಗೆ ಕಿ.ಮೀಗೆ 10ರೂ, ಹವಾನಿಯಂತ್ರಿತ ಕಾರಿಗೆ 11 ರೂ, ಇತರ ಸೇಡನ್ಸ್ ಮತ್ತು ಎಸ್‌ಯುವಿಗಳಿಗೆ ಕಿ.ಮೀ 13 ರಿಂದ 18.50 ರೂ ಪ್ರಯಾಣ ದರ ನಿಗದಿಪಡಿಸಲಾಗಿದೆ. ನಾನ್ ಎಸಿ 35 ಆಸನ ಸಾಮರ್ಥ್ಯದ ಬಸ್‌ಗೆ ಕಿ.ಮೀ.ಗೆ 45 ರೂ. ಎಸಿ ಬಸ್‌ಗೆ ಕಿ.ಮೀ ಗೆ 50ರೂ, 50 ಆಸನದ ನಾನ್ ಎಸಿ ಬಸ್‌ಗೆ 57 ರೂ ನಿಗದಿಪಡಿಸಲಾಗಿದೆ. ದೂರದ ಪ್ರಯಾಣಕ್ಕೆ ಡ್ರೈವರ್ ಬಾಟ ದಿನಕ್ಕೆ 300ರಿಂದ 800ರೂ ಪಾವತಿಸಬೇಕಾಗುತ್ತದೆ.

ಈಗಾಗಲೇ ರಾಜ್ಯದ ಬೇರೆ ನಗರಗಳಲ್ಲಿ ದಿನದ ಕನಿಷ್ಠ ಕಿ.ಮೀ ಮಿತಿ ಮತ್ತು ಪ್ರಯಾಣದ ಬಾಡಿಗೆ ದರ ಹೆಚ್ಚಿಸಲಾಗಿದ್ದರೂ ಈವರೆಗೆ ಮೈಸೂರಲ್ಲಿ ಹಳೇ ದರವನ್ನೇ ಮುಂದುವರೆಸಲಾಗಿತ್ತು. ಆದರೆ ಈಗ ವಾಹನ ಚಾಲಕರ ಕೊರತೆ ಹಾಗೂ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ವಾಹನಗಳ ನಿರ್ವಹಣೆ ವೆಚ್ಚ ಭರಿಸಲು ಅನಿವಾರ್ಯವಾಗಿ ಟ್ಯಾಕ್ಸಿಗಳ ಬಾಡಿಗೆ ದರವನ್ನು ಪರಿಷ್ಕರಣೆ ಮಾಡಬೇಕಾಯಿತೆಂದು ಮೈಸೂರು ಟ್ರಾವೆಲ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಸಿ.ಎ. ಜಯಕುಮಾರ್, ಉಪಾಧ್ಯಕ್ಷ ಡೇವಿಡ್ ರಾಜ್, ಕಾರ್ಯದರ್ಶಿ ಎ.ಸಿ.ರವಿ ಅವರು ತಿಳಿಸಿದ್ದಾರೆ.



ಟಿ.ಆರ್.ಕಿರಣ್‌ಕುಮಾರ್‌ಗೆ ಪಿಎಚ್.ಡಿ

ಮೈಸೂರು,ಏ.6– ಡಾ. ವಿಡತಲ ರಾಣಿ ಅವರ ಮಾರ್ಗದರ್ಶನದಲ್ಲಿ ಟಿ.ಆರ್. ಕಿರಣ್ ಕುಮಾರ್ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಫೋರ್ಬ್ಸ್ ಬಿಲಿಯನೇರ್ ಪಟ್ಟಿಯಲ್ಲಿ ಮೈಸೂರು ಉದ್ಯಮಿ ರಮೇಶ್ ಕುಂಞಿಕಣ್ಣನ್


ಮೈಸೂರು,ಏ.6(ಪಿಎಂ)– ಮೈಸೂರಿನ ಕೇನ್ಸ್ ಟೆಕ್ನಾಲಜಿ ಕಂಪನಿಯ ಸಂಸ್ಥಾಪಕರೂ ಆದ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಕುಂಞಿಕಣ್ಣನ್, ಫೋರ್ಬ್ಸ್ ಬಿಲಿಯನೇರ್ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ.

ವಿಶ್ವದ ಅತ್ಯಂತ ಶ್ರೀಮಂತರ ಪಟ್ಟಿಗೆ ಮೈಸೂರಿನ ರಮೇಶ್ ಕುಂಞಿಕಣ್ಣನ್ ಸೇರ್ಪಡೆಯಾಗಿದ್ದು, ಆ ಮೂಲಕ ಮೈಸೂರಿನ ಉದ್ಯಮಿಯೊಬ್ಬರು ಜಾಗತಿಕ ಮಟ್ಟದಲ್ಲಿ ಹೆಸರುವಾಸಿ ಆಗಿದ್ದಾರೆ. ಇವರ ಕೇನ್ಸ್ ಕಂಪನಿಯು ಇಸ್ರೋದ ಮಹತ್ವಾಕಾಂಕ್ಷೆಯ ಚಂದ್ರಯಾನ–3ಕ್ಕೆ ರೋವರ್ ಮತ್ತು ಲ್ಯಾಂಡರ್ ಎರಡಕ್ಕೂ ಶಕ್ತಿ ನೀಡಲು ಬಳಸುವ ಎಲೆಕ್ಟ್ರಾನಿಕ್ ಸಿಸ್ಟಮ್‌ಗಳನ್ನು ಪೂರೈಸಿದ್ದ ಹೆಗ್ಗಳಿಕೆ ಹೊಂದಿದೆ. ಜೊತೆಗೆ ಚಂದ್ರಯಾನ–3ರ ಯಶಸ್ಸಿನ ಬೆನ್ನಲ್ಲೇ 60 ವಯಸ್ಸಿನ ರಮೇಶ್ ಕೋಟ್ಯಧೀಶರಾಗಿ ಹೊರಹೊಮ್ಮಿದ್ದಾರೆ.

ಕೇನ್ಸ್ ಕಂಪನಿಯು 1.2 ಬಿಲಿಯನ್ ಡಾಲರ್ (10,011 ಕೋಟಿ ರೂ.) ಮೌಲ್ಯದ ನಿವ್ವಳ ಆಸ್ತಿ ಗಳಿಸಿದ್ದು, ಆ ಮೂಲಕ ರಮೇಶ್ ಕುಂಞಿಕಣ್ಣನ್ ಅವರು ಫೋರ್ಬ್ಸ್ ಬಿಲಿಯನೇರ್ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ. ಫೋರ್ಬ್ಸ್‌ನ 2024ರ ಪಟ್ಟಿಯಲ್ಲಿ ಅವರು ಸ್ಥಾನ ಪಡೆದಿದ್ದಾರೆ. ಕೇನ್ಸ್ ಟೆಕ್ನಾಲಜಿಯು ಮೈಸೂರಿನಲ್ಲಿ ಪ್ರಧಾನ ಕಚೇರಿ ಹೊಂದಿದ್ದು, ಮುದ್ರಿತ ಸರ್ಕ್ಯೂಟ್ ಬೋರ್ಡ್‌ಗಳನ್ನು ಜೋಡಿಸುವಲ್ಲಿ ಪರಿಣತಿ ಹೊಂದಿದೆ. ಜೊತೆಗೆ ಭಾರತದಲ್ಲಿ 8 ಘಟಕಗಳನ್ನು ಹೊಂದಿದೆ. ಆಟೋ, ಏರೋ ಸ್ಪೇಸ್ ಮತ್ತು ವೈದ್ಯಕೀಯ ಉದ್ಯಮಗಳಿಗೆ ಜಗತ್ತಿನಾದ್ಯಂತ 350 ಗ್ರಾಹಕ ಸಂಸ್ಥೆಗಳನ್ನು ಈ ಕಂಪನಿಯು ಹೊಂದಿದೆ.

ಎಲೆಕ್ಟ್ರಿಕಲ್ ಇಂಜಿನಿಯರ್ ಆದ ರಮೇಶ್ ಕಣ್ಣನ್ 1989ರಲ್ಲಿ ಕೇನ್ಸ್ ಅನ್ನು ಸ್ಥಾಪಿಸಿದರು. ರಮೇಶ್ ಕಣ್ಣನ್ ಅವರ ಪತ್ನಿ ಸವಿತಾರಮೇಶ್ ಪ್ರಸ್ತುತ ಕಂಪನಿಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದಾರೆ. ರಮೇಶ್ ಕುಂಞಿಕಣ್ಣನ್ ಅವರು ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನಿಂದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದುಕೊಂಡಿದ್ದಾರೆ.

> ದೇಶದಲ್ಲಿ ಸಂಪನ್ಮೂಲಕ್ಕೆ ಕೊರತೆ ಇಲ್ಲ. ಇದರ ಸದ್ಬಳಕೆ ಮೂಲಕ ಬೆಳೆಯಲು ಸಾಕಷ್ಟು ಅವಕಾಶಗಳಿವೆ. ಪ್ರತಿಭೆ, ಪರಿಶ್ರಮ ಹಾಗೂ ಪ್ರಾಮಾಣಿಕತೆ ಮೂಲಕ ಮುನ್ನಡೆದರೆ ಯಾರು ಬೇಕಾದರೂ ಆರ್ಥಿಕಾಭಿವೃದ್ಧಿ ಹೊಂದಲು ಸಾಧ್ಯವಿದೆ. ಇದೇ ನಿಟ್ಟಿನಲ್ಲಿ ನಮ್ಮ ಕಂಪನಿ ಮುನ್ನಡೆಸಿದ ಕಾರಣ ಈ ಒಂದು ಹುತ್ಕೆ ಬಂದಿದ್ದು, ಚಂದ್ರಯಾನದ ಯಶಸ್ಸಿನಿಂದ ನಮ್ಮ ಕಂಪನಿಯ ಉದ್ಯೋಗಿಗಳಿಗೆ ನೈತಿಕ ಸ್ಥೈರ್ಯ ಬಂದಿದೆ.
> –ರಮೇಶ್ ಕುಂಞಿಕಣ್ಣನ್,
> ವ್ಯವಸ್ಥಾಪಕ ನಿರ್ದೇಶಕರು, ಕೇನ್ಸ್ ಟೆಕ್ನಾಲಜಿ, ಮೈಸೂರು.



ಶಾರದಾದೇವಿನಗರದಲ್ಲಿ ಬಿಜೆಪಿ ಸಂಸ್ಥಾಪನಾ ದಿನಾಚರಣೆ



ಮೈಸೂರಿನ ಶಾರದಾದೇವಿನಗರದಲ್ಲಿ ಚಾಮುಂಡೇಶ್ವರಿ ನಗರ ಮಂಡಲದಿಂದ ಬಿಜೆಪಿ ಸ್ಥಾಪನಾ ದಿನವನ್ನು ಆಚರಿಸಲಾಯಿತು. ಈ ವೇಳೆ ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ರಾಕೇಶ್ ಭಟ್, ಕಾರ್ಯದರ್ಶಿಗಳಾದ ವಿನುತಾ, ರಾಕೇಶ್ ನಾಯ್ಡು, ಕಲಾವತಿ ಇತರರು ಉಪಸ್ಥಿತರಿದ್ದರು.

ಮೈಸೂರು, ಏ.6– ಮೈಸೂರಿನ ಶಾರದಾದೇವಿನಗರದಲ್ಲಿ ಚಾಮುಂಡೇಶ್ವರಿ ನಗರ ಮಂಡಲದಿಂದ ಬಿಜೆಪಿ ಸಂಸ್ಥಾಪನಾ ದಿನವನ್ನು ಆಚರಿಸಲಾಯಿತು.

ಭಾರತ ಮಾತೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಹಾಗೂ ಡಾ। ಶ್ಯಾಮ ಪ್ರಸಾದ್ ಮುಖರ್ಜಿರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಸಿಹಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು ಮಾತನಾಡಿ, ಬಿಜೆಪಿ ಸ್ಥಾಪನೆಯಲ್ಲಿ ದೀನ್ ದಯಾಳ್ ಉಪಾಧ್ಯಾಯ ಹಾಗೂ ಶ್ಯಾಮ ಪ್ರಸಾದ್ ಮುಖರ್ಜಿ ಅವರ ಸೈದ್ಧಾಂತಿಕ ಬದ್ಧತೆ ಬಗ್ಗೆ ಶ್ಲಾಘಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ನಗರ ಮಂಡಲದ ಅಧ್ಯಕ್ಷ ರಾಕೇಶ್ ಭಟ್ ಮಾತನಾಡಿ, ಭಾರತೀಯ ಜನತಾ ಪಾರ್ಟಿ 370ನೇ ವಿಧಿ ರದ್ದು, ಅಯೋಧ್ಯಾ ರಾಮ ಮಂದಿರ ಸ್ಥಾಪನೆ ಹೀಗೆ ಹಲವು ಮಹತ್ಕಾರ್ಯ ಮಾಡಿದೆ ಎಂದರು.

ಮಂಡಲದ ಪ್ರಧಾನ ಕಾರ್ಯದರ್ಶಿ ಆರ್.ಸೋಮಶೇಖರ್, ಉಪಾಧ್ಯಕ್ಷರಾದ ಹೆಚ್.ಜಿ. ರಾಜಮಣಿ, ಬಿ.ಸಿ. ಶಶಿಕಾಂತ್, ಶಿವಕುಮಾರ್, ವಿಜಯಕುಮಾರ್, ಹಿರಿಯಣ್ಣ, ಲಲಿತಾ, ಮಂಡಲದ ಕಾರ್ಯದರ್ಶಿಗಳಾದ ವಿನುತಾ, ರಾಕೇಶ್ ನಾಯ್ಡು, ಕಲಾವತಿ, ಶಾರದಾದೇವಿನಗರದ ವಾರ್ಡ್ ಅಧ್ಯಕ್ಷ ರವಿ ನಾಯಕಂಡ, ಮುಖಂಡರಾದ ರಮಾಬಾಯಿ, ಮಂಜುಳಾ ನಾಯಕ್, ಹೇಮಲತಾ, ಅನಿತಾ, ಸುಮಾ, ಸುಮಿತ್ರಾ, ಆಂಡಾಲ್ ಭಗವಾನ್ ಭಾಗವಹಿಸಿದ್ದರು.

ಮೈಸೂರಲ್ಲಿ ಖಾಸಗಿ ಬೋರ್‌ವೆಲ್ ಕೊರೆಯಲು ಪಾಲಿಕೆ ಅನುಮತಿ ಕಡ್ಡಾಯ

ಮೈಸೂರು, ಏ.6(ಎಸ್‌ಪಿಎನ್)– ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಖಾಸಗಿ ಬೋರ್‌ವೆಲ್ ಕೊರೆಯಲು ನಗರಪಾಲಿಕೆಯಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು ಎಂದು ಪಾಲಿಕೆ ಆಯುಕ್ತೆ ಡಾ.ಎನ್.ಎನ್. ಮಧು ತಿಳಿಸಿದ್ದಾರೆ.

ಬೋರ್‌ವೆಲ್ ಕೊರೆಯುವ ಕನಿಷ್ಠ 20 ದಿನ ಮುಂಚಿತವಾಗಿ ಭೂ ಮಾಲೀಕರು ಅರ್ಜಿ ಸಲ್ಲಿಸಿ, ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರದಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು ಕಡ್ಡಾಯ. ಒಂದು ವೇಳೆ ಸಾರ್ವಜನಿಕರು ಪಾಲಿಕೆಯ ಅನುಮತಿ ಪಡೆಯದೇ ಅನಧಿಕೃತವಾಗಿ ಬೋರ್‌ವೆಲ್ ಕೊರೆಯುವುದು ಕಂಡು ಬಂದಲ್ಲಿ ಭೂ ಮಾಲೀಕರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಕೊಳವೆ ಬಾವಿ ವಿಫಲಗೊಂಡಲ್ಲಿ ಅಥವಾ ಕೊರೆಯುವುದು ಪೂರ್ಣಗೊಂಡ ನಂತರ ಅದನ್ನು ವೈಜ್ಞಾನಿಕವಾಗಿ ಮುಚ್ಚಲು ಕ್ರಮಕೈಗೊಳ್ಳಬೇಕು. ಒಂದು ವೇಳೆ ಕೊಳವೆಬಾವಿ ಮುಚ್ಚದೆ ಹೋಗಿ ಪ್ರಾಣಹಾನಿ ಅಥವಾ ಯಾವುದೇ ಅನಾಹುತ ಸಂಭವಿಸಿದ್ದಲ್ಲಿ ಭೂ ಮಾಲೀಕರನ್ನು ನೇರ ಹೊಣೆಗಾರನ್ನಾಗಿಸಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಏ.15 ರಿಂದ ಆಯುರ್ವೇದ, ವಾಕ್–ಶ್ರವಣ ಸಂಸ್ಥೆ, ನರ್ಸಿಂಗ್ ವಿದ್ಯಾರ್ಥಿಗಳ ಶಿಬಿರ

ಮೈಸೂರು, ಏ. 6– ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 15 ರಿಂದ 17 ರವರೆಗೆ ಶ್ರೀ ಸುತ್ತೂರು ಕ್ಷೇತ್ರದಲ್ಲಿ ಆಯುರ್ವೇದ, ವಾಕ್–ಶ್ರವಣ ಸಂಸ್ಥೆ ಹಾಗೂ ನರ್ಸಿಂಗ್ ವಿದ್ಯಾರ್ಥಿಗಳ ಶಿಬಿರವನ್ನು ಏರ್ಪಡಿಸಲಾಗಿದೆ.

ಪ್ರತಿನಿತ್ಯ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸಗಳು, ಚಿಂತನ–ಮಂಥನ, ದೇಸಿ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಇರುತ್ತವೆ. ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಬಿ. ರಾಜೇಶ್ ಅವರನ್ನು ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದಲ್ಲಿ ನೇರವಾಗಿ ಅಥವಾ 0821–2548212, ಮೊ: 9964141560 ಹಾಗೂ ಶಿಬಿರದ ಸಂಚಾಲಕರಾದ ಡಾ.ಎಂ.ಎಲ್. ರಾಜೇಂದ್ರ ಪ್ರಸಾದ್, ಡಾ. ಹೆಚ್.ಎಸ್. ಹರ್ಷನ್ ಕುಮಾರ್ ಮತ್ತು ಸಿ.ಎನ್. ಸುನಿಲ್ ಕುಮಾರ್ ಅವರನ್ನು ಕ್ರಮವಾಗಿ 98458 17721, 9036068143 ಮತ್ತು 96323 21210 ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಅಮೆರಿಕದಲ್ಲಿ ಭಾರತೀಯ ಮೂಲದ ಮತ್ತೊಬ್ಬ ವಿದ್ಯಾರ್ಥಿ ಸಾವು

2024ರಲ್ಲಿ 7ನೇ ದುರ್ಘಟನೆ!


ನ್ಯೂಯಾರ್ಕ್, ಏ.6– ಅಮೆರಿಕದ ಓಹಿಯೋ ರಾಜ್ಯದಲ್ಲಿ ಭಾರತೀಯ ಮೂಲದ ವಿದ್ಯಾರ್ಥಿ ಮೃತಪಟ್ಟಿದ್ದು, ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ ಎಂದು ಇಲ್ಲಿನ ಭಾರತದ ರಾಯಭಾರ ಕಚೇರಿ ತಿಳಿಸಿದೆ.

ಓಹಿಯೋದ ಕ್ಲೀವ್‌ಲ್ಯಾಂಡ್‌ನಲ್ಲಿ ಉಮಾ ಸತ್ಯ ಸಾಯಿಗಡ್ಡೆ ಅವರ ನಿಧನದಿಂದ ತೀವ್ರ ದುಃಖವಾಗಿದೆ ಎಂದು ನ್ಯೂಯಾರ್ಕ್‌ನಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಹೇಳಿದ್ದಾರೆ.

ಸಾವಿನ ಕುರಿತು ಪೊಲೀಸ್ ತನಿಖೆ ನಡೆಯುತ್ತಿದೆ. ಇದು ಭಾರತದಲ್ಲಿನ ಕುಟುಂಬದೊಂದಿಗೆ ಸಂಪರ್ಕವನ್ನು ಮುಂದುವರೆಸಿದೆ ಎಂದು ಕಾನ್ಸುಲೇಟ್ ತಿಳಿಸಿದೆ.

ಉಮಾಗಡ್ಡೆ ಅವರ ಪಾರ್ಥಿವ ಶರೀರವನ್ನು ಭಾರತಕ್ಕೆ ಶೀಘ್ರವಾಗಿ ಸಾಗಿಸುವುದು ಸೇರಿದಂತೆ ಸಾಧ್ಯವಿರುವ ಎಲ್ಲ ಸಹಾಯವನ್ನು ಮಾಡಲಾಗುತ್ತಿದೆ ಎಂದು ಕಾನ್ಸುಲೇಟ್ ಟ್ವೀಟ್ ಮೂಲಕ ತಿಳಿಸಿದೆ.

2024ರ ಆರಂಭದಿಂದ, ಅಮೆರಿಕದಲ್ಲಿ ಭಾರತೀಯ ಮೂಲದ ವಿದ್ಯಾರ್ಥಿಗಳು ಕನಿಷ್ಠ ಅರ್ಧ ಡಜನ್ ಸಾವುಗಳು ಸಂಭವಿಸಿವೆ. ದಾಳಿಗಳ ಸಂಖ್ಯೆಯಲ್ಲಿ ಆತಂಕಕಾರಿ ಹೆಚ್ಚಳವು ಸಮುದಾಯದಲ್ಲಿ ಆತಂಕಕ್ಕೆ ಕಾರಣವಾಗಿದೆ.



ವಿಂಟೇಜ್ ಕಾರ್, ಟಾಂಗಾ ರ್‍ಯಾಲಿ ಮೂಲಕ ಮತದಾನ ಜಾಗೃತಿ







ಮೈಸೂರು ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಕಮಿಟಿ ವತಿಯಿಂದ ಪುರಭವನದ ಆವರಣದಲ್ಲಿ ಶನಿವಾರ ಬೆಳಿಗ್ಗೆ ಏರ್ಪಡಿಸಿದ್ದ ವಿಂಟೇಜ್ ಕಾರ್ ರ್‍ಯಾಲಿಗೆ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಸಿರು ನಿಶಾನೆ ತೋರಿಸಿದರು. ವಿಂಟೇಜ್ ಕಾರುಗಳ ಮಾಲೀಕ ಗೋಪಿನಾಥ ಶೆಣೈ, ಕೆ.ಎಂ.ಗಾಯತ್ರಿ, ಎಸ್ಪಿ ಸೀಮಾ ಲಾಟ್ಕರ್ ಇತರರಿದ್ದಾರೆ.

ಮೈಸೂರು,ಏ.6(ಆರ್‌ಕೆ)– ಮತದಾನದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿಯು ಇಂದು ಮೈಸೂರಲ್ಲಿ ವಿಂಟೇಜ್ ಕಾರ್ ಮತ್ತು ಟಾಂಗಾ ರ್‍ಯಾಲಿ ನಡೆಸಿತು. ಮೈಸೂರಿನ ಪುರಭವನದ ಆವರಣದಿಂದ ಆರಂಭವಾದ ರ್‍ಯಾಲಿಗೆ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರು ಇಂದು ಬೆಳಿಗ್ಗೆ ಚಾಲನೆ ನೀಡಿದರು. ಈ ಸಂದರ್ಭ ಮಾತನಾಡಿದ ಅವರು, 75 ವರ್ಷಗಳ ಇತಿಹಾಸವಿರುವ ಭಾರತದ ಈ ಲೋಕಸಭಾ ಚುನಾವಣೆಗೆ ಮೆರುಗು ಬಂದಿದೆ ಹಾಗೆಯೇ ವಿಂಟೇಜ್ ಕಾರುಗಳು ವರ್ಷ ಕಳೆದಂತೆ ತಮ್ಮ ಛಾಪು ಹೆಚ್ಚಿಸಿಕೊಳ್ಳುತ್ತಿವೆ ಎಂದರು.

ದೇಶದ ಪ್ರತಿಯೊಬ್ಬ ಪ್ರಜೆಯೂ ಪ್ರಜಾಪ್ರಭುತ್ವ ಮತ್ತು ಚುನಾವಣೆಯ ಯಜಮಾನರಾಗಿದ್ದು, ಅದನ್ನು ಜಾಗರೂಕತೆಯಿಂದ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ಆದ್ದರಿಂದ ಪ್ರತಿಯೊಬ್ಬರೂ ಜವಾಬ್ದಾರಿಯಿಂದ ನಡೆದುಕೊಂಡು ಪ್ರತಿಯೊಬ್ಬರೂ ಮತಗಟ್ಟೆಗೆ ತೆರಳಿ ಏಪ್ರಿಲ್ 26ರಂದು ತಪ್ಪದೇ ಮತ ಚಲಾಯಿಸುವುದಲ್ಲದೆ, ಇತರರಿಗೂ ಪ್ರೇರಣೆ ನೀಡಬೇಕೆಂದು ತಿಳಿಸಿದರು.

ಪ್ರತಿಯೊಬ್ಬ ಮತದಾರ ಈ ದೇಶದ ಆಸ್ತಿ. ಎಲ್ಲರೂ ನೈತಿಕ ಮತದಾನ ಮಾಡಿ ಬೇರೆಯವರಿಗೂ ಜಾಗೃತಿ ಮೂಡಿಸುವ ಅಗತ್ಯವಿದೆ. ಕಳೆದ 2018ರ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಶೇ.70ರಷ್ಟು ಮತದಾನವಾಗಿದ್ದು, ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಸ್ವೀಪ್ ಸಮಿತಿಯು ಹಲವು ವಿಶಿಷ್ಟ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಪ್ರಜಾಪ್ರಭುತ್ವದ ಹಬ್ಬದಲ್ಲಿ ಪ್ರತಿಯೊಬ್ಬರೂ ಪಾಲ್ಗೊಂಡು ಭವ್ಯ ಭಾರತದ ಕನಸನ್ನು ನನಸು ಮಾಡುವಂತೆ ಸಲಹೆ ನೀಡಿದರು.

ವಿಂಟೇಜ್ ಕಾರುಗಳ ಮಾಲೀಕ ಗೋಪಿನಾಥ ಶೆಣೈ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ, ಮೈಸೂರು ಮಹಾನಗರ ಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು, ಡಿಸಿಪಿಗಳಾದ ಎಂ.ಮುತ್ತುರಾಜ್, ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ, ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧು, ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜ್, ಪರಿಸರ ಇಂಜಿನಿಯರ್‌ಗಳಾದ ಮೈತ್ರಿ, ಮೃತ್ಯುಂಜಯ, ಶ್ರೀದೇವಿ, ಚಿನ್ಮಯಿ, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ಸೇರಿದಂತೆ ಇತರ ಅಧಿಕಾರಿಗಳು ಈ ಸಂದರ್ಭ ಜಾಗೃತಿ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು.

ಪುರಭವನದ ಆವರಣದಿಂದ ಹೊರಟ ವಿಂಟೇಜ್ ಕಾರು ಮತ್ತು ಸಾರೋಟು ರ್‍ಯಾಲಿಯು, ಚಾಮರಾಜ ಸರ್ಕಲ್, ಕೆ.ಆರ್.ಸರ್ಕಲ್, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರೋಡ್, ರೈಲ್ವೇ ಸ್ಟೇಷನ್ ಸರ್ಕಲ್, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಸಯ್ಯಾಜಿ ರಾವ್ ಸರ್ಕಲ್ ಮಾರ್ಗವಾಗಿ ಸಾಗಿ ಪುರಭವನದಲ್ಲಿ ಅಂತ್ಯಗೊಂಡಿತು.

ಯದುವೀರ್ ಗೆಲುವಿಗೆ ಬಿಜೆಪಿ ಮುಖಂಡರ ಒಗ್ಗಟ್ಟಿನ ಹೋರಾಟ ಮಂತ್ರ



ಮೈಸೂರು, ಏ.6(ಆರ್‌ಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಗೆಲುವಿಗೆ ಶ್ರಮಿಸಲು ಬಿಜೆಪಿ ಮುಖಂಡರು ನಿರ್ಧರಿಸಿದ್ದಾರೆ.


ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸಭೆ ನಡೆಸಿದ ಪಕ್ಷದ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಎಲ್ಲಾ ಸಮುದಾಯದ ಮುಖಂಡರು, ಕೈಗಾರಿಕೋದ್ಯಮಿಗಳು, ಕಾರ್ಯಕರ್ತರು, ಶಿಕ್ಷಕರು, ವಕೀಲರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಸಾಧನೆ, ಮೈಸೂರು ಭಾಗದಲ್ಲಿ ಸಂಸದ ಪ್ರತಾಪ್ ಸಿಂಹ ಮಾಡಿರುವ ಅಭಿವೃದ್ಧಿ ಯೋಜನೆಗಳು, ರಾಜಮನೆತನದವರ ಶಾಶ್ವತ ಕೊಡುಗೆಗಳ ಬಗ್ಗೆ ಮನವರಿಕೆ ಮಾಡಿಕೊಟ್ಟು ಮೈತ್ರಿ ಅಭ್ಯರ್ಥಿ ಯದುವೀರ ಗೆಲುವಿಗೆ ಪಣ ತೊಟ್ಟು, ಶ್ರಮಿಸುವಂತೆ ಕರೆ ನೀಡಿದರು.

ಮಾಜಿ ಸಚಿವ ಎಸ್.ಎ.ರಾಮದಾಸ್

> “ಬೂತ್ ಮಟ್ಟದಲ್ಲಿ ವ್ಯಾಪಕ ಪ್ರಚಾರ ನಡೆಸಿ ಮತದಾರರಿಗೆ ಅಭ್ಯರ್ಥಿ ಮತ್ತು ಪಕ್ಷದ ಸದುದ್ದೇಶಗಳು, ಭವಿಷ್ಯದಲ್ಲಿ ರಾಜ್ಯ ಮತ್ತು ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿ ಸಂಕಲ್ಪಗಳನ್ನು ವಿವರಿಸಿ ಮನದಟ್ಟು ಮಾಡಲು ಎಲ್ಲರೂ ಕಟಿಬದ್ಧರಾಗಿರಬೇಕು.–ಎಲ್.ನಾಗೇಂದ್ರ

ಮಾತನಾಡಿ, ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಿ ಪ್ರತೀ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ನಡೆಸುವ ಮೂಲಕ ಯದುವೀರ ಅವರನ್ನು ಭಾರೀ ಮತಗಳ ಅಂತರದಿಂದ ಲೋಕಸಭೆಗೆ ಆರಿಸಿ ಕಳುಹಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸುವಂತೆ ಸಲಹೆ ನೀಡಿದರು. ವಿವಿಧ ಸಮುದಾಯಗಳ ಮುಖಂಡರೊಂದಿಗೆ ನಡೆಸಿದ ಸಭೆಯಲ್ಲೂ ಜೆಡಿಎಸ್ ಮುಖಂಡರೊಂದಿಗೆ ಸಮನ್ವಯ ಕಾಯ್ದುಕೊಂಡು ಪ್ರಚಾರ ಮಾಡಬೇಕೆಂದು ತೀರ್ಮಾನಿಸಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮುಖಂಡರಾದ ಮೈವಿರವಿಶಂಕರ್, ಬಿ.ಎಂ.ರಘು, ಗಿರಿಧರ್, ಕಿರಣ್‌ಗೌಡ, ಸುರೇಶ ಬಾಬು ಸೇರಿದಂತೆ ಹಲವರು ಸಭೆಯಲ್ಲಿದ್ದರು.



ಟಿ.ನರಸೀಪುರ ತಾಲೂಕಿನ ರಂಗಸಮುದ್ರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ತಮಗೆ ಮತದಾನ ಮಾಡುವಂತೆ ಕೋರಿದರು. ಸಭೆಯಲ್ಲಿ ಮಾಜಿ ಸಚಿವ ಎನ್.ಮಹೇಶ್, ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ (ಜೆಪಿ) ಮತ್ತಿತರರು ಪಾಲ್ಗೊಂಡಿದ್ದರು.

ಬೆಂಗಳೂರಲ್ಲಿ ಇಬ್ಬರು ವೈದ್ಯಕೀಯ ವಿದ್ಯಾರ್ಥಿನಿಯರಲ್ಲಿ ಕಾಲರಾ ಪತ್ತೆ

ಹೆಚ್ಚಿದ ಆತಂಕ, ಆರೋಗ್ಯ ಇಲಾಖೆ ಕಟ್ಟೆಚ್ಚರ

ಬೆಂಗಳೂರು, ಏ.6– ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನೆ ಸಂಸ್ಥೆಯ (BMCRI) ಮಹಿಳಾ ಹಾಸ್ಟೆಲ್‌ನ 47 ವಿದ್ಯಾರ್ಥಿನಿಯರು ಏಕಾಏಕಿ ಅಸ್ವಸ್ಥರಾಗಿದ್ದು, ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈ ಪೈಕಿ ಇಬ್ಬರು ವಿದ್ಯಾರ್ಥಿನಿಯರಲ್ಲಿ ಕಾಲರಾ ಅಂಶ ಪತ್ತೆಯಾಗಿದೆ.

ವಾಂತಿ–ಭೇದಿಯಿಂದ ತೀವ್ರ ಅಸ್ವಸ್ಥಗೊಂಡಿದ್ದ 47 ವೈದ್ಯಕೀಯ ವಿದ್ಯಾರ್ಥಿನಿಯರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕಾಲರಾದ ಶಂಕೆ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿಯರ ಮಾದರಿಯನ್ನು ವೈದ್ಯರು ಪರೀಕ್ಷೆಗೆ ಕಳುಹಿಸಿದ್ದು, ಈ ಪೈಕಿ ಇಬ್ಬರಲ್ಲಿ ಕಾಲರಾ ಅಂಶ ಪತ್ತೆಯಾಗಿದೆ. ಇನ್ನು ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಭೇಟಿ ನೀಡಿ, ವಿದ್ಯಾರ್ಥಿನಿಯರ ಆರೋಗ್ಯ ವಿಚಾರಿಸಿದರು. ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಜ್ಯದಲ್ಲಿ ಈ ವರ್ಷ ಇದುವರೆಗೆ ಆರು ಕಾಲರಾ ಪ್ರಕರಣಗಳು ವರದಿಯಾಗಿವೆ. ಅದರಲ್ಲಿ ಐದು ಮಾರ್ಚ್‌ನಲ್ಲಿ ವರದಿಯಾಗಿದೆ. ನೀರಿನ ಬಿಕ್ಕಟ್ಟಿನೊಂದಿಗೆ ತೀವ್ರವಾದ ಶಾಖವು ಕಾಲರಾ ಏಕಾಏಕಿ ಭೀತಿಗೆ ಕಾರಣವಾಗಿದೆ. ಸದ್ಯ ಚಿಕಿತ್ಸೆ ಪಡೆಯುತ್ತಿರುವ ಎಲ್ಲ ವಿದ್ಯಾರ್ಥಿನಿಯರ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ತಿಳಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಯದುವೀರರಿಗೆ ಅತ್ಯಧಿಕ ಮತಗಳ ಅಂತರದ ಗೆಲುವು

ಮಾಜಿ ಮೇಯರ್ ಸಂದೇಶ್ ಸ್ವಾಮಿ ವಿಶ್ವಾಸ

ಮೈಸೂರು,ಏ.6(ಎಸ್‌ಬಿಡಿ)– ಲೋಕಸಭಾ ಚುನಾವಣೆಯಲ್ಲಿ ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಿಂದ ಮೈತ್ರಿ ಅಭ್ಯರ್ಥಿ ಯದುವೀರ್ ಅವರಿಗೆ ಅತೀ ಹೆಚ್ಚು ಮತಗಳು ಸಿಗಲಿವೆ ಎಂದು ಬಿಜೆಪಿ ಮುಖಂಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಅತೀವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವಿವಿಧೆಡೆ ಯದುವೀರ್ ಪರ ಮತಯಾಚನೆ ನಡೆಸಿದ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಅಲ್ಪಸಂಖ್ಯಾತರು ಸೇರಿದಂತೆ ಹಿಂದುಳಿದ ವರ್ಗದವರೇ ಹೆಚ್ಚು ಸಂಖ್ಯೆಯಲ್ಲಿರುವ ಈ ಕ್ಷೇತ್ರದಲ್ಲಿ ಈ ಬಾರಿ ಅತೀ ಹೆಚ್ಚು ಮತಗಳು ಬಿಜೆಪಿಗೆ ದೊರಕುವ ಮೂಲಕ ವಿಸ್ಮಯ ಸೃಷ್ಟಿಯಾಗಲಿದೆ. ಯದುವೀರ್ ಅವರು ಅತ್ಯಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಗರಪಾಲಿಕೆ, ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆ ಪರಿಸ್ಥಿತಿ ವಿಭಿನ್ನವಾಗಿರುತ್ತದೆ. ಮತದಾರರು ಪ್ರತಿ ಚುನಾವಣೆಯನ್ನೂ ಅವಲೋಕಿಸಿ, ಹಕ್ಕು ಚಲಾಯಿಸುತ್ತಾರೆ. ಅದರಲ್ಲೂ ಮೈಸೂರು ರಾಜವಂಶದ ಉತ್ತರಾಧಿಕಾರಿ ಯದುವೀರ್ ಸ್ಪರ್ಧಿಸಿರುವುದರಿಂದ ಎಲ್ಲಾ ಧರ್ಮ, ಜಾತಿಯವರೂ ಬೆಂಬಲ ವ್ಯಕ್ತಪಡಿಸಿದ್ದಾರೆ. ಮತಯಾಚನೆಗೆ ಬಂದಾಗ ಸ್ವಯಂಪ್ರೇರಣೆಯಿಂದ ಬಂದು ಯದುವೀರ್ ಅವರನ್ನು ಸಂಭ್ರಮದಿಂದ ಸ್ವಾಗತಿಸಿದ್ದಾರೆ ಎಂದರು.

ಸುಂದರ ಮೈಸೂರು ನಗರ ಕಟ್ಟಿಕೊಟ್ಟು, ಕುಡಿಯಲು ಹಾಗೂ ಕೃಷಿಗೆ ನೀರು ಕಲ್ಪಿಸಿಕೊಟ್ಟ ಹಾಗೂ ಎಲ್ಲಾ ವರ್ಗದ ಜನರ ಶ್ರೇಯೋಭಿವೃದ್ಧಿಗಾಗಿ ಅವಿಸ್ಮರಣೀಯ ಕೊಡುಗೆ ನೀಡಿರುವ ಮಹಾರಾಜರ ಋಣ ತೀರಿಸಲು ಇದೊಂದು ಅವಕಾಶ ಲಭ್ಯವಾಗಿದೆ. ರಾಜಮನೆತನದ ಯದುವೀರ್ ಅವರಿಗೆ ಮತ ಹಾಕುವ ಮೂಲಕ ಗೌರವ ಸಲ್ಲಿಸಬೇಕು ಎಂಬ ಭಾವನೆ ಹಲವರಲ್ಲಿದೆ ಎಂದು ಹೇಳಿದರು.



ಸಂದೇಶ್‌ಸ್ವಾಮಿ

ಪ್ರಧಾನಿ ಮೋದಿ ಅವರ ಹತ್ತು ವರ್ಷಗಳ ಆಡಳಿತ ಜನರಲ್ಲಿ ವಿಶ್ವಾಸ ಮೂಡಿಸಿದೆ. ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳು ನರಸಿಂಹರಾಜ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕಾಂಗ್ರೆಸ್ ಗ್ಯಾರಂಟಿಗಳು ಹಾಗೂ ಭರವಸೆಗಳಿಂದ ಜನರ ನಿರ್ಧಾರ ಬದಲಾಗುವುದಿಲ್ಲ. ಮತ್ತೊಮ್ಮೆ ನರೇಂದ್ರ ಮೋದಿ ಅವರು ಪ್ರಧಾನಿಯಾದರೆ ದೇಶದ ಭದ್ರತೆ ಜೊತೆಗೆ ಅಭಿವೃದ್ಧಿ ಮತ್ತಷ್ಟು ವೇಗ ಪಡೆಯಲಿದೆ. ಹಾಗಾಗಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಗೆ ಮತ ನೀಡುವ ಮೂಲಕ ಮೋದಿ ಅವರ ಕೈ ಬಲಪಡಿಸಬೇಕೆಂದು ಜನ ತೀರ್ಮಾನಿಸಿದ್ದಾರೆ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ತಿಳಿಸಿದರು.

ಕುಡಿಯುವ ನೀರಿನ ಸಮಸ್ಯೆ: ಕಂಟ್ರೋಲ್ ರೂಂ ಸ್ಥಾಪನೆ

ಮೈಸೂರು,ಏ.6– ತಿ.ನರಸೀಪುರ ತಾಲೂಕು ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾದರೆ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು 24x7 ಸೇವೆಯಲ್ಲಿರುವ ಕಂಟ್ರೋಲ್ ರೂಂ ನಂ:08227–261223 ಅಥವಾ ದೂ.ಸಂ:8660826823 ಅನ್ನು ಸಂಪರ್ಕಿಸಿ ದೂರು ಸಲ್ಲಿಸಬಹುದು ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುನಾವಣಾ ಅಭ್ಯರ್ಥಿಗಳ ವೆಚ್ಚದ ಮೇಲೆ ನಿಗಾ ಇಡಿ

ವಿಶೇಷ ವೆಚ್ಚ ವೀಕ್ಷಕ ಬಿ.ಮುರುಳಿಕುಮಾರ್ ಸಲಹೆ



ಮೈಸೂರು,ಏ.6– ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಸಬೇಕು. ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸದಂತೆ ಪ್ರತಿಯೊಂದು ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಅಭ್ಯರ್ಥಿಗಳ ವೆಚ್ಚದ ಬಗ್ಗೆ ನಿಗಾ ವಹಿಸಬೇಕು ಎಂದು ಕರ್ನಾಟಕ ರಾಜ್ಯಕ್ಕೆ ನೇಮಕವಾಗಿರುವ ವಿಶೇಷ ವೆಚ್ಚ ವೀಕ್ಷಕ ಬಿ.ಮುರುಳಿ ಕುಮಾರ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾ ಅಧಿಕಾರಿಗಳು, ಸಹಾಯಕ ಚುನಾವಣಾ ವೆಚ್ಚ ಸಮಿತಿಯ ಅಧಿಕಾರಿಗಳು ಹಾಗೂ ಸಮಿತಿಗಳ ನೋಡಲ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಯಬೇಕು. ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆಯನ್ನು ತೀವ್ರಗೊಳಿಸಿ ದಾಖಲೆರಹಿತ ಹಣ ಅಥವಾ ಇನ್ನಿತರೆ ವಸ್ತುಗಳು ಸಾಗಾಣೆಯಾಗದಂತೆ ನೋಡಿಕೊಳ್ಳಿ ಎಂದರು.

ಅಧಿಕಾರಿಗಳು ಉಲ್ಲಂಘನೆಯ ದೂರುಗಳನ್ನು ಸ್ವೀಕರಿಸಿದಾಗ ಮತ್ತು ದೂರುಗಳ ನೋಂದಣಿ ಹಾಗೂ ಅವುಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ನಿರ್ವಹಿಸುವಂತೆ ತಿಳಿಸಿದರು.

ಚುನಾವಣಾ ಕೆಲಸಕ್ಕಾಗಿ ನೇಮಕವಾಗಿರುವ ಎಫ್.ಎಸ್.ಟಿ, ಎಸ್.ಎಸ್.ಟಿ, ವಿ.ವಿ.ಟಿ ಹಾಗೂ ಇನ್ನಿತರೆ ತಂಡಗಳು ಜವಾಬ್ದಾರಿಯುತವಾಗಿ ಕೆಲಸ ನಡೆಸಿ ಅಭ್ಯರ್ಥಿಯು ಚುನಾವಣಾ ಆಯೋಗ ನೀಡಿರುವ ನಿರ್ದೇಶನಗಳನ್ನು ಪಾಲಿಸುತ್ತಿರುವ ಬಗ್ಗೆ ನಿಗಾ ವಹಿಸಬೇಕು. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಅಭ್ಯರ್ಥಿಗಳ ಚುನಾವಣಾ ವೆಚ್ಚ ನಿರ್ವಹಿಸಲು ನೇಮಕವಾಗಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು. ಚುನಾವಣಾ ಅವಧಿಯಲ್ಲಿ ಎಲ್ಲ ಬ್ಯಾಂಕುಗಳ ಮೂಲಕ ನಡೆಯಬಹುದಾದ ಅನುಮಾನಾಸ್ಪದ ವ್ಯವಹಾರಗಳು, ಹಣ ಪಡೆಯುವ ಬಗ್ಗೆ ಬ್ಯಾಂಕುಗಳು ಪ್ರತಿನಿತ್ಯ ಮಾಹಿತಿ ಒದಗಿಸಬೇಕು ಎಂದರು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಜಿಲ್ಲೆಯಲ್ಲಿ ಚುನಾವಣಾ ಕೆಲಸಕ್ಕಾಗಿ ನೇಮಕವಾಗಿರುವ ವಿವಿಧ ತಂಡಗಳು, ಅಧಿಕಾರಿಗಳು, ಸ್ಥಾಪನೆಯಾಗಿರುವ ಚೆಕ್‌ಪೋಸ್ಟ್‌ಗಳು ಹಾಗೂ ಇನ್ನಿತರೆ ಮಾಹಿತಿಗಳನ್ನು ವಿವರಿಸಿದರು.

ನಂತರ ಚುನಾವಣಾ ನಿಯಂತ್ರಣ ಕೊಠಡಿ ಮತ್ತು ಮಾಧ್ಯಮ ಪ್ರಮಾಣೀಕರಣ ಮತ್ತು ನಿಗಾ ಕೇಂದ್ರವನ್ನು ವೀಕ್ಷಕರು ಪರಿಶೀಲಿಸಿದರು.

ಸಭೆಯಲ್ಲಿ ಹುಣಸೂರು, ಪಿರಿಯಾಪಟ್ಟಣ ಕ್ಷೇತ್ರದ ವೆಚ್ಚ ವೀಕ್ಷಕ ಎ.ಸುರೇಶ್, ನಗರ ಪೊಲೀಸ್ ಆಯುಕ್ತ ರಮೇಶ್.ಬಿ, ಜಿಪಂ ಸಿಇಓ ಕೆ.ಎಂ. ಗಾಯಿತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಚಾಮುಂಡೇಶ್ವರಿ, ಚಾಮರಾಜ, ಕೃಷ್ಣರಾಜ ಹಾಗೂ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವೆಚ್ಚ ವೀಕ್ಷಕ ಯೋಗೇಶ್ ಮಿಶ್ರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಚಾ.ನಗರ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಉಸ್ತುವಾರಿಯಾಗಿ ರೇಖಾ ಶ್ರೀನಿವಾಸ್ ನೇಮಕ



ಮೈಸೂರು, ಏ.6– ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ಸಾಮಾಜಿಕ ಜಾಲತಾಣದ ರಾಜ್ಯ ಸಂಯೋಜಕರಾದ ರೇಖಾ ಶ್ರೀನಿವಾಸ್ ಅವರನ್ನು ಚಾಮರಾಜನಗರ ಲೋಕಸಭೆಗೆ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಉಸ್ತುವಾರಿಯಾಗಿ ನೇಮಕ ಮಾಡಿ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಹಾಗೂ ಸಾಮಾಜಿಕ ಜಾಲತಾಣ ರಾಜ್ಯ ಅಧ್ಯಕ್ಷ ಪ್ರಿಯಾಂಕ ಖರ್ಗೆ ಆದೇಶ ಹೊರಡಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಪರ ಡಾ.ಯತೀಂದ್ರ ಮತಯಾಚನೆ

● ಸಿದ್ದಲಿಂಗಪುರ, ಕೆ.ಆರ್.ಮಿಲ್ ಕಾಲೋನಿ, ನಾಗನಹಳ್ಳಿ, ರಮ್ಮನಹಳ್ಳಿ, ಹಂಚ್ಯಾದಲ್ಲಿ ಬಿರುಸಿನ ಪ್ರಚಾರ ● ಜನರ ಕಷ್ಟಕ್ಕೆ ನೆರವಾಗುವ ಪಕ್ಷಕ್ಕೆ ಮತ ನೀಡಿ



ಮೈಸೂರಿನ ಕೆ.ಆರ್.ಮಿಲ್ ಕಾಲೋನಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮಾಜಿ ಶಾಸಕ ಡಾ.ಯತೀಂದ್ರ ಮತಯಾಚಿಸಿದರು.

ಮೈಸೂರು, ಏ.6(ಎಂಟಿವೈ)– ಬಡವರಿಗೆ ನೆರವಾಗುವ ಯೋಜನೆಗಳನ್ನು ಅನುಷ್ಠಾನಗೊಳಿಸಿರುವ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಗೆಲ್ಲಿಸುವಂತೆ ಮಾಜಿ ಶಾಸಕ ಡಾ.ಯತೀಂದ್ರ ಮನವಿ ಮಾಡಿದ್ದಾರೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮೈಸೂರು ತಾಲೂಕಿನ ಸಿದ್ದಲಿಂಗಪುರ, ಕೆ.ಆರ್.ಮಿಲ್ ಕಾಲೋನಿ, ನಾಗನಹಳ್ಳಿ, ಕಾಳಿಸಿದ್ದನಹುಂಡಿ, ರಮ್ಮನಹಳ್ಳಿ ಹಾಗೂ ಹಂಚ್ಯಾ ಗ್ರಾಮದಲ್ಲಿ ಬಿರುಸಿನ ಪ್ರಚಾರ ನಡೆಸಿದ ಅವರು, ಕಾಂಗ್ರೆಸ್ ಪಕ್ಷ ಸದಾ ಬಡವರು, ರೈತರು, ಶೋಷಿತ ಸಮುದಾಯ ಪರ ಚಿಂತನೆ ಮಾಡುವ ಪಕ್ಷ. ದೇಶದಲ್ಲಿ ಈ ಹಿಂದೆ ಅಧಿಕಾರ ನಡೆಸಿರುವ ಕಾಂಗ್ರೆಸ್ ಹಲವು ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ದೇಶದ ಪ್ರಧಾನಿಯಾಗಿ ಇಂದಿರಾಗಾಂಧಿ, ರಾಜೀವ್‌ಗಾಂಧಿಯವರು ದೇಶವನ್ನು ಸಮರ್ಥವಾಗಿ ಮುನ್ನಡೆಸಿದ್ದಲ್ಲದೆ, ಸಮಗ್ರವಾಗಿ ಅಭಿವೃದ್ಧಿ ಮಾಡಲು ಶ್ರಮಿಸಿದರು.

ಆದರೆ, ಕಳೆದ 10 ವರ್ಷದಿಂದ ಪ್ರಧಾನಿ ಮೋದಿ ಬಡವರ ಹಿತವನ್ನು ಬಲಿ ಕೊಟ್ಟು, ಶ್ರೀಮಂತ ಉದ್ಯಮಿಗಳ ಹಿತಕಾಯಲು ಮುಂದಾಗಿದ್ದಾರೆ. ಉದ್ಯಮಿಗಳಾದ ಅದಾನಿ, ಅಂಬಾನಿ ಸೇರಿದಂತೆ ಕೆಲವೇ ಕೆಲವು ಮಂದಿಯ ಹಿತ ಕಾಯುವಲ್ಲಿ ಕೇಂದ್ರ ಸರ್ಕಾರ ಸೀಮಿತವಾಗಿರುವುದರಿಂದ ಜನರ ಸಂಕಷ್ಟದ ಬಗ್ಗೆ ಗಮನಹರಿಸುತ್ತಿಲ್ಲ. ಇದರಿಂದ ದೇಶದಲ್ಲಿ ಬಡವರ ಸ್ಥಿತಿ ಶೋಚನೀಯ ಹಂತ ತಲುಪಿದೆ ಎಂದು ಆರೋಪಿಸಿದರು.

2014ರಲ್ಲಿ ನಡೆದ ಚುನಾವಣೆ ವೇಳೆ ಮೋದಿ ಅವರು ಬಿಜೆಪಿ ಪ್ರಣಾಳಿಕೆಯಲ್ಲಿ 600 ಭರವಸೆ ನೀಡಿದ್ದರು. ಅವುಗಳಲ್ಲಿ ವಿದೇಶಿ ಬ್ಯಾಂಕ್‌ಗಳಲ್ಲಿರುವ ಕಪ್ಪು ಹಣ ತಂದು ಪ್ರತಿ ಕುಟುಂಬಕ್ಕೂ ತಲಾ 15 ಲಕ್ಷ ರೂ. ನೀಡುವುದಾಗಿ ವಾಗ್ದಾನ ಮಾಡಿದ್ದರು. ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಭರವಸೆ ನೀಡಿದ್ದರು. ಅಗತ್ಯ ವಸ್ತುಗಳ ಬೆಲೆ ನಿಯಂತ್ರಣ, ಇಂಧನ ಬೆಲೆ ನಿಯಂತ್ರಣ ಸೇರಿದಂತೆ ನೀಡಿದ್ದ ಮಹತ್ತರವಾದ ಭರವಸೆಗಳಲ್ಲಿ ಯಾವುದನ್ನೂ ಈಡೇರಿಸಿಲ್ಲ. ಇದನ್ನು ಜನ ಅರ್ಥ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 2013ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ವೇಳೆ ನೀಡಿದ್ದ ಭರವಸೆಯನ್ನೆಲ್ಲಾ ಈಡೇರಿಸಿದ್ದಾರೆ. ಅನ್ನಭಾಗ್ಯ, ಇಂದಿರಾ ಕ್ಯಾಂಟೀನ್, ರೈತರ ಸಾಲ ಸೇರಿದಂತೆ ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಮೈಸೂರಿನ ಜನರಿಗೆ ಮಾತ್ರವಲ್ಲದೆ, ನೆರೆ ಜಿಲ್ಲೆಗಳ ಜನರಿಗೂ ಉಪಯೋಗವಾಗುವಂತೆ ಮೈಸೂರಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಟ್ರಾಮಾಕೇರ್ ಸೆಂಟರ್, ಪಂಚಕರ್ಮ ಆಸ್ಪತ್ರೆ ನಿರ್ಮಿಸಿದ್ದಾರೆ. ಪ್ರಸ್ತುತ ಅವಧಿಯಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಾರೆ. ಈ ಯೋಜನೆಯ ಸೌಲಭ್ಯ ಎಲ್ಲಾ ವರ್ಗ, ಎಲ್ಲಾ ಜಾತಿ, ಧರ್ಮ ಹಾಗೂ ಎಲ್ಲಾ ಪಕ್ಷಗಳ ಬೆಂಬಲಿಗರಿಗೂ ತಲುಪುತ್ತಿದೆ. ಈ ಹಿನ್ನೆಲೆಯಲ್ಲಿ ಜನರೇ ಯಾವ ಪಕ್ಷ ಜನರ ಹಿತ ಕಾಯುತ್ತಿದೆ ಎಂದು ಅವಲೋಕನ ಮಾಡಬೇಕು. ನುಡಿದಂತೆ ನಡೆಯುವ ಕಾಂಗ್ರೆಸ್ ಪಕ್ಷಕ್ಕೆ ಜನ ಬೆಂಬಲ ನೀಡಬೇಕು ಎಂದು ಕೋರಿದರು. ಈ ವೇಳೆ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ಜಿ.ಪಂ ಮಾಜಿ ಸದಸ್ಯರಾದ ರಾಕೇಶ್ ಪಾಪಣ್ಣ, ಬೀರಿಹುಂಡಿ ಬಸವಣ್ಣ, ಮುಖಂಡರಾದ ಅರುಣ್‌ಕುಮಾರ್, ಉಮಾಶಂಕರ್, ಕೃಷ್ಣಕುಮಾರ್ ಸಾಗರ್, ಕೆಂಪನಾಯಕ, ರೇಖಾ ವೆಂಕಟೇಶ್, ಸತೀಶ್, ಮಲ್ಲೇಶ್, ಮುತ್ತುರಾಜ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಭಾನುವಾರ 7 ಏಪ್ರಿಲ್ 2024

ಈಜಲು ನೀರಿಗಿಳಿದ ವ್ಯಕ್ತಿ ಮೀನಿನ ಬಲೆಗೆ ಸಿಲುಕಿ ಸಾವು

ಸುಂಟಿಕೊಪ್ಪ ಬಳಿ ಹಾರಂಗಿ ಹಿನ್ನೀರಿನಲ್ಲಿ ದುರಂತ



ಮೀನಿನ ಬಲೆಗೆ ಕಾಲು ಸಿಲುಕಿ ವ್ಯಕ್ತಿ ಸಾವನ್ನಪ್ಪಿರುವ ಸ್ಥಳಕ್ಕೆ ಪೊಲೀಸರ ಭೇಟಿ.

ಸುಂಟಿಕೊಪ್ಪ: ಜಾನುವಾರುಗಳಿಗೆ ನೀರು ಕುಡಿಸಿ ಹಾರಂಗಿ ಹಿನ್ನೀರಿನಲ್ಲಿ ಈಜಲು ತೆರಳಿದ್ದ ಯುವಕ ಮೀನಿನ ಬಲೆಗೆ ಕಾಲು ಸಿಲುಕಿ ಸಾವನ್ನಪ್ಪಿರುವ ಘಟನೆ ವರದಿಯಾಗಿದೆ ಕುಶಾಲನಗರ ತಾಲೂಕಿನ ಬಾಳುಗೋಡು ನಿವಾಸಿ ಬಾಲಕೃಷ್ಣ(42) ಮೃತ ವ್ಯಕ್ತಿ.

ಬಾಲಕೃಷ್ಣ ಅವರು ನಾಕೂರು ಶಿರಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾದ್ರೆ ಹೆರೂರು ಗ್ರಾಮದ ನಿವಾಸಿ ಮಾದಪ್ಪ ಅವರ ಮನೆಗೆ ಶುಕ್ರವಾರ ತೆರಳಿದ್ದರು. ಎನ್ನಲಾಗಿದೆ. ಶನಿವಾರ ಅವರ ಮನೆಯ ಜಾನುವಾರುಗಳಿಗೆ ನೀರು ಕುಡಿಸಿ ನದಿಯತ್ತ ತೆರಳಿದ ಬಾಲ ಕೃಷ್ಣ ಹಾರಂಗಿ ಹಿನ್ನೀರಿನಲ್ಲಿ ಮೀನು ಹಿಡಿಯಲು ಬಲೆಗಳನ್ನು ಹಾಕಿರುವ ಮಾಹಿತಿ ಇಲ್ಲದೇ, ಬಿಸಿಲ ಬೇಗೆ ತಾಳಲಾರದೆ ಈಜಲು ನೀರಿಗಿಳಿದಿದ್ದಾರೆ. ಈ ಸಂದರ್ಭ ಕಾಲಿಗೆ ಬಲೆ ಸಿಲುಕಿ ನೀರಿನಿಂದ ಹೊರ ಬರಲಾರದೇ ಮುಳುಗಿ ಮೃತಪಟ್ಟಿದ್ದಾರೆ. ಮೃತದೇಹವನ್ನು ಸ್ಥಳೀಯ ಈಜುಗಾರರು ಹೊರ ತೆಗೆದಿದ್ದಾರೆ. ಘಟನಾ ಸ್ಥಳಕ್ಕೆ ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಎಂ.ಸಿ. ಶ್ರೀಧರ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸುಂಟಿಕೊಪ್ಪ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಿಸಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಶ್ರದ್ಧಾಭಕ್ತಿಯಿಂದ ನಡೆದ ಮುತ್ತಪ್ಪ ಜಾತ್ರೆ

ಮಡಿಕೇರಿ,ಏ.6– ಕೊಡಗಿನ ಪುರಾತನ ದೇವಾಲಯಗಳಲ್ಲೊಂದಾದ ಶ್ರೀ ಮುತ್ತಪ್ಪ ದೇವಾಲಯದ ಆವರಣದಲ್ಲಿರುವ 14 ದೇವಾನು ದೇವತೆಗಳ ಪುನರ್ ಪ್ರತಿಷ್ಠಾಪನಾ ವಾರ್ಷಿಕೋತ್ಸವ ಹಾಗೂ ಶ್ರೀ ಮುತ್ತಪ್ಪ ಜಾತ್ರಾ ಮಹೋತ್ಸವವು ಶ್ರದ್ಧಾಭಕ್ತಿಯಿಂದ ಜರುಗಿತು.

ದೇವಾಲಯದ ತಂತ್ರಿಗಳಾದ ಕೇರಳದ ಪಯ್ಯನ್ನೂರಿನ ಬ್ರಹ್ಮಶ್ರೀ ಕುನ್ನತ್ತಿಲ್ಲತ್ ಮುರಳಿ ಕೃಷ್ಣನ್ ನಂಬೂದರಿ ಹಾಗೂ ಪರಿಶಿನಿಕಡವು ಶ್ರೀ ಮುತ್ತಪ್ಪ ಕ್ಷೇತ್ರದ ಆಚಾರಪಟ್ಟ ಮಡೆಯಚ್ಚನ್ ಬ್ಲಾತೂರ್ ಚಂದ್ರನ್ ಮಡೆಯಚ್ಚನ್ ನೇತೃತ್ವದಲ್ಲಿ 4 ದಿನಗಳ ಕಾಲ ವಿವಿಧ ಪೂಜಾ ವಿಧಿವಿಧಾನಗಳು ನೆರವೇರಿತು.

ಪುನರ್ ಪ್ರತಿಷ್ಠಾಪನಾ ವಾರ್ಷಿಕೋತ್ಸವ ಕಾರ್ಯಕ್ರಮದ ಪ್ರಯುಕ್ತ ಗಣಪತಿ ಹೋಮ, ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ಅಷ್ಟಾಭಿಷೇಕ, ಶ್ರೀ ಅಯ್ಯಪ್ಪ ಸ್ವಾಮಿಗೆ ತುಪ್ಪಾಭಿಷೇಕ, ಶ್ರೀ ನಾಗ ದೇವರಿಗೆ ತಂಬಿಲ ಸಮರ್ಪಣೆ, ಕಲಶಾಭಿಷೇಕ, ಮಹಾಮಂಗಳಾರತಿ ಹಾಗೂ ಪ್ರಸಾದ ವಿತರಣೆ ಮಾಡಲಾಯಿತು. ಸಂಜೆ ಶ್ರೀ ಮುತ್ತಪ್ಪ ದೇವರ ಜಾತ್ರಾ ಮಹೋತ್ಸವಕ್ಕೆ ಧ್ವಜಾರೋಹಣದ ಮೂಲಕ ಚಾಲನೆ ದೊರೆಯಿತು. ನಂತರ ಶ್ರೀ ಮುತ್ತಪ್ಪ ದೇವರ ಮಲೆ ಇಳಿಸುವುದು. ಶ್ರೀ ಮುತ್ತಪ್ಪ ದೇವರ ವೆಳ್ಳಾಟಂ, ಶ್ರೀ ಭಗವತಿ ದೇವಿಗೆ ದೀಪಾರಾಧನೆ ಮತ್ತು ಪುಷ್ಪಾರ್ಚನೆ, ಹಾಗೂ ಹರಕೆ ಕೋಲಗಳು ನಡೆಯಿತು.

ಶ್ರೀಶಾಸ್ತಪ್ಪ ದೇವರ ವೆಳ್ಳಾಟಂ, ಶ್ರೀ ಮುತ್ತಪ್ಪ ದೇವರ ವೆಳ್ಳಾಟಂ, ಶ್ರೀವಿಷ್ಣು ಮೂರ್ತಿ ಮೇಲೇರಿಗೆ ಅಗ್ನಿ ಸ್ಪರ್ಶ ಹಾಗೂ ಅನ್ನ ಸಂತರ್ಪಣೆ ನೆರವೇರಿತು. ರಾತ್ರಿ ಶ್ರೀ ಪೋದಿ ವೆಳ್ಳಾಟಂ, ಶ್ರೀ ವಿಷ್ಣುಮೂರ್ತಿ ವೆಳ್ಳಾಟಂ, ಶ್ರೀಶಿವಭೂತ ತೆರೆ, ಶ್ರೀಗುಳಿಗ ದೇವರ ತೆರೆ, ಕಳಗ ಪಾಟ್, ಸಂದ್ಯಾವೇಲೆ, ಶ್ರೀ ಕುಟ್ಟಿಚಾತನ್ ದೇವರ ತೆರೆ, ಶ್ರೀಮುತ್ತಪ್ಪ ಮತ್ತು ಶ್ರೀತಿರುವಪ್ಪ ದೇವರ ತೆರೆ, ಶ್ರೀವಿಷ್ಣು ಮೂರ್ತಿ ದೇವರ ಮೇಲೇರಿ, ಶ್ರೀಪೋದಿ ತೆರೆ, ಶ್ರೀವಿಷ್ಣುಮೂರ್ತಿ ದೇವರ ಬಾರಣೆ, ಧ್ವಜ ಅವರೋಹಣ ನಡೆಯಿತು. ಉತ್ಸವದ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ನಗರದ ವಿವಿಧೆಡೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಂಡು ದೇವರಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿದರು.



ಶ್ರೀ ಮುತ್ತಪ್ಪ ಜಾತ್ರಾ ಮಹೋತ್ಸವವು ಅತ್ಯಂತ ವೈಭವದಿಂದ ಜರುಗಿತು.

ನಾಳೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಏ.6– ವಿರಾಜಪೇಟೆ 66/11 ಕೆವಿ ವಿದ್ಯುತ್ ಉಪ-ಕೇಂದ್ರದಿಂದ ಹೊರ ಹೋಗುವ ಎಫ್1 ಅಮ್ಮತ್ತಿ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಏ.8 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಅಮ್ಮತ್ತಿ, ಕಾರ್ಮಾಡು, ಬಿಳುಗುಂದ, ಕಾವಾಡಿ, ನಲ್ವತ್ತೋಕ್ಲು ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹಾಗೆಯೇ 66/11ಕೆವಿ ಮಡಿಕೇರಿ, ವಿದ್ಯುತ್ ಉಪ-ಕೇಂದ್ರದಿಂದ ಹೊರಹೋಗುವ ಓಂಕಾರೇಶ್ವರ ಫೀಡರ್‌ನ ವಿದ್ಯುತ್ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಏ.8 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ಓಂಕಾರೇಶ್ವರ ದೇವಸ್ಥಾನ ರಸ್ತೆ ಕನ್ನಂಡ ಬಾಣೆ, ಗೌಡ ಸಮಾಜ, ಜೂನಿಯರ್ ಕಾಲೇಜು ರಸ್ತೆ, ದಾಸವಾಳ ರಸ್ತೆ, ಗಣಪತಿ ಬೀದಿ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಮಡಿಕೇರಿ ವಿಭಾಗದ ಸೆಸ್ಕ್ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನ, ಬಿಸಿಗಾಳಿ ಆತಂಕ

'ಹೀಟ್‌ವೇವ್ ಸ್ಟ್ರೋಕ್'ನಿಂದ ಪಾರಾಗಲು ಮಾರ್ಗಸೂಚಿ

ಮಡಿಕೇರಿ ಏ.6– ಭಾರತೀಯ ಹವಾಮಾನ ಇಲಾಖೆಯು ಮೇ ಅಂತ್ಯ ದವರೆಗೆ ಸೂರ್ಯನ ಬಿಸಿಲು ಮತ್ತು ಬಿಸಿಗಾಳಿ ಹೆಚ್ಚಾಗುವ ಬಗ್ಗೆ ಮುನ್ನೆಚ್ಚರಿಕೆ ನೀಡಿದೆ.

ಜಿಲ್ಲೆಯಲ್ಲಿ ಸೂರ್ಯನ ಶಾಖವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಹೀಟ್‌ವೇವ್ (ಶಾಖದ ಹೊಡೆತ) ಸ್ಟ್ರೋಕ್‌ನಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿರುವುದರಿಂದ ಎಲ್ಲಾ ಸಾರ್ವಜನಿಕರಿಗೆ ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮುಂಜಾಗ್ರತಾ ಕ್ರಮವಾಗಿ ಸಲಹೆಗಳನ್ನು ನೀಡಿದೆ.

ಬೇಸಿಗೆಯಲ್ಲಿನ ಅತೀ ಹೆಚ್ಚು ತಾಪಮಾನದಿಂದ ಉಂಟಾಗುವ ಅನಾರೋಗ್ಯವನ್ನು ತಡೆಗಟ್ಟಲು ವಹಿಸಬೇಕಾದ ಸೂಚನೆಗಳು: ಸಾಧ್ಯವಾದಷ್ಟು ಮಟ್ಟಿಗೆ ವಿಶೇಷವಾಗಿ ಗರಿಷ್ಠ ತಾಪಮಾನದ ಅವಧಿಯಲ್ಲಿ ಬಿಸಿಲಿನಲ್ಲಿ ಹೋಗುವುದನ್ನು ತಪ್ಪಿಸುವುದು. (ಬೆಳಗ್ಗೆ 11 ರಿಂದ ಸಂಜೆ 4 ಗಂಟೆಯವರೆಗೆ), ಕಾಲಕಾಲಕ್ಕೆ ಸಾಕಷ್ಟು ನೀರು ಕುಡಿಯುವುದು. ಮಜ್ಜಿಗೆ, ಎಳನೀರು, ಹಣ್ಣಿನ ರಸ, ಗ್ಲೂಕೋಸ್, ಓಆರ್‌ಎಸ್ ನಂತಹ ದ್ರವ ಪದಾರ್ಥಗಳನ್ನು ಹೆಚ್ಚು ಉಪಯೋಗಿಸಬೇಕು. ಸಾರ್ವಜನಿಕರು ಬಿಸಿಲಿನ ದಿನಗಳಲ್ಲಿ ಕೊಡೆ/ಛತ್ರಿ ಹಾಗೂ ತಂಪು ಕನ್ನಡಕ, ಟವಲ್ ಹಾಗೂ ಸಾಧ್ಯವಾದಷ್ಟು ತಂಪಾದ ಸ್ಥಳಗಳಲ್ಲಿ ಉಳಿಯುವುದು, ತೆಳುವಾದ ಸಡಿಲವಾದ ಹತ್ತಿಯ ಬಟ್ಟೆಯನ್ನು ಧರಿಸಬೇಕು. ಆದಷ್ಟು ಬಿಳಿ ಬಣ್ಣದ ಬಟ್ಟೆಗಳ ಬಳಕೆ ಒಳ್ಳೆಯದು. ಗಾಳಿಯಾಡುವ ಪಾದರಕ್ಷೆ ಧರಿಸಬೇಕು.

ಹತ್ತಿಯ ಅಥವಾ ಟರ್ಬನ್ ಟೋಪಿ ಹಾಗೂ ಕೂಲಿಂಗ್ ಗ್ಲಾಸ್ ಧರಿಸಬೇಕು. ಹಿರಿಯ ನಾಗರಿಕರು ಹಾಗೂ ಮಕ್ಕಳು ಹೆಚ್ಚು ನೀರು ಕುಡಿಯಬೇಕು. ಕೊಠಡಿಯ ತಾಪಮಾನವನ್ನು ಕಡಿಮೆ ಮಾಡಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು, ಹೀಟ್ ಸ್ಟ್ರೋಕ್ ಲಕ್ಷಣಗಳನ್ನು ಹೊಂದಿರುವ ವ್ಯಕ್ತಿಯನ್ನು ತಂಪಾದ ಜಾಗಕ್ಕೆ ಸ್ಥಳಾಂತರಿಸಿ ಶಾಖದ ಹೊಡೆತದಿಂದ ಬಳಲುತ್ತಿರುವ ವ್ಯಕ್ತಿಯು ಕನಿಷ್ಠ ಬಟ್ಟೆಯನ್ನು ಹೊಂದಿರುವಂತೆ ನೋಡಿಕೊಂಡು ವ್ಯಕ್ತಿಗೆ ತಣ್ಣೀರಿನಿಂದ ಸ್ಪಾಂಜ್ ಬಾತ್ ಮಾಡಬೇಕು ಅಥವಾ ಐಸ್ ಪ್ಯಾಕ್‌ಗಳನ್ನು ಉಪಯೋಗಿಸಬಹುದು ಅಥವಾ ವ್ಯಕ್ತಿಯನ್ನು ಐಸ್‌ಪ್ಯಾಕ್‌ಗಳ ಮಧ್ಯ ಇಡಬಹುದು.

ಹೀಟ್‌ವೇವ್ ಸ್ಟ್ರೋಕ್‌ಗೆ ಒಳಗಾದ ವ್ಯಕ್ತಿಗೆ ಯಾವುದೇ ಸುಧಾರಣೆ ಕಂಡು ಬರದಿದ್ದರೆ ಅವರನ್ನು ಕೂಲಿಂಗ್ ವ್ಯವಸ್ಥೆಯೊಂದಿಗೆ ತಕ್ಷಣ ಆಸ್ಪತ್ರೆಗೆ ಸ್ಥಳಾಂತರಿಸಬೇಕು. ಹೊರಾಂಗಣದಲ್ಲಿ ಬಿಸಿಲಿನಲ್ಲಿ ಕೆಲಸ ಮಾಡುವವರಿಗೆ ಕಡ್ಡಾಯ ವಿರಾಮವನ್ನು ನಿಗದಿಪಡಿಸುವುದು, ಆಹಾರದಲ್ಲಿ ಮಸಾಲೆ ಪದಾರ್ಥಗಳನ್ನು ಹೆಚ್ಚು ಬಳಸಬಾರದು. ಬೇಸಿಗೆ ದಿನಗಳಲ್ಲಿ ತಣ್ಣೀರಿನ ಸ್ನಾನ ಒಳ್ಳೆಯದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ. ಸತೀಶ್ ಕುಮಾರ್ ಅವರು ತಿಳಿಸಿದ್ದಾರೆ.

ನೇಮಕ



ಮಡಿಕೇರಿ,ಏ.6– ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷೆಯಾಗಿ ಕರ್ತಂಡ ಶೈಲಾ ಕುಟ್ಟಪ್ಪ ಆಯ್ಕೆಯಾಗಿದ್ದಾರೆ. ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷೆ ಅಲ್ಕಾ ಲಂಬಾ ಅವರ ಆದೇಶದ ಮೇರೆಗೆ ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಡಾ.ಬಿ.ಪುಷ್ಪ ಅಮರನಾಥ್ ಅವರು ಶೈಲಾ ಕುಟ್ಟಪ್ಪ ಅವರನ್ನು ನೇಮಕ ಮಾಡಿ ಪಕ್ಷದ ಮಹಿಳಾ ಘಟಕವನ್ನು ಸಂಘಟಿಸಲು ಸೂಚನೆ ನೀಡಿದ್ದಾರೆ.

ತಾಳತ್‌ಮನೆ ಬಳಿ ಹೊತ್ತಿ ಉರಿದ ಕಾರು

ಹಣ್ಣು ಖರೀದಿಸಲು ಇಳಿದಿದ್ದರಿಂದ ಯುವಕರು ಪಾರು



ಮಡಿಕೇರಿ,ಏ.6– ತಾಂತ್ರಿಕ ದೋಷದಿಂದ ಕಾರೊಂದು ಹೊತ್ತಿ ಉರಿದ ಘಟನೆ ರಾಷ್ಟ್ರೀಯ ಹೆದ್ದಾರಿ 275ರ ಮಡಿಕೇರಿ ಬಳಿಯ ತಾಳತ್‌ಮನೆ ಬಳಿ ಸಂಭವಿಸಿದ್ದು, ಹಣ್ಣು ಖರೀದಿಸಲು ಇಳಿದಿದ್ದರಿಂದ ಯುವಕರಿಬ್ಬರು ಪಾರಾಗಿದ್ದಾರೆ.

ಮಂಗಳೂರಿನಿಂದ ಮಡಿಕೇರಿ ಕಡೆಗೆ ಬರುತ್ತಿದ್ದ ಡಸ್ಟರ್ ಕಾರ್(ಕೆಎ.19–ಎಂಬಿ. 3985) ಅನ್ನು ತಾಳತ್‌ಮನೆ ಬಳಿಯ ಹಣ್ಣಿನ ಅಂಗಡಿ ಬಳಿ ನಿಲ್ಲಿಸಿ ವಾಹನದಲ್ಲಿದ್ದವರು ಹಣ್ಣು ಖರೀದಿಸಲು ಇಳಿದಿದ್ದರು. ಈ ವೇಳೆ ಕಾರಿನ ಇಂಜಿನ್ ಭಾಗದಲ್ಲಿ ಹೊಗೆ ಕಾಣಿಸಿಕೊಂಡಿದ್ದು, ಬಳಿಕ ಏಕಾಏಕಿ ಬಾನೆಟ್‌ನಿಂದ ಬೆಂಕಿ ಹೊರಬಂದಿದೆ. ಈ ವೇಳೆ ಕಾರಿನ ಬಾಗಿಲು ಹಾಗೂ ಬಾನೆಟ್ ತೆರೆಯಲು ಪ್ರಯತ್ನಿಸಿದರೂ ಕಾರ್ ಆಟೋಮ್ಯಾಟಿಕ್ ಲಾಕ್ ಆಗಿದ್ದ ಹಿನ್ನೆಲೆಯಲ್ಲಿ ಎಲ್ಲರೂ ಅಸಹಾಯಕರಾಗಬೇಕಾಯಿತು. ಬಳಿಕ ನೋಡು ನೋಡುತ್ತಿದ್ದಂತೆ ಕಾರು ಹೊತ್ತಿ ಉರಿದಿದ್ದು, ಬೆಂಕಿಯ ಕೆನ್ನಾಲಿಗೆ ಪಕ್ಕದ ಕಾಡಿಗೂ ಹಬ್ಬಿದೆ.

ಮಾಹಿತಿ ತಿಳಿದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾದರು. ಬೆಂಕಿಯ ಕೆನ್ನಾಲಿಗೆಗೆ ಕಾರು ಸಂಪೂರ್ಣ ಕರಕಲಾಗಿದ್ದು, ಅದೃಷ್ಟವಶಾತ್ ಕಾರಿನಲ್ಲಿದ್ದ ಇಬ್ಬರು ಯುವಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಸಂದರ್ಭ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲಕಾಲ ವಾಹನಗಳ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಈ ಘಟನೆ ಕುರಿತು ಮಡಿಕೇರಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಂಚಾರಿ ಠಾಣಾ ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ಲೋಕಸಭಾ ಚುನಾವಣೆ

ನಾಳೆ ಅಧಿಕಾರಿಗಳಿಗೆ ತರಬೇತಿ



ತರಬೇತಿ ಕೇಂದ್ರಕ್ಕೆ ಜಿಲ್ಲಾಧಿಕಾರಿ ವೆಂಕಟರಾಜ್ ಭೇಟಿ ನೀಡಿ ಸಿದ್ಧತೆಗಳ ಬಗ್ಗೆ ಪರಿಶೀಲನೆ ನಡೆಸಿದರು.

ವಿರಾಜಪೇಟೆ, ಏ.6– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ಚುನಾವಣಾ ಸಿಬ್ಬಂದಿಗಳಿಗೆ ಮತ್ತು ಮತಗಟ್ಟೆ ಅಧಿಕಾರಿಗಳಿಗೆ ಸೋಮವಾರ(ಏ.8) ಪ್ರಥಮ ಹಂತದ ತರಬೇತಿ ನಡೆಯಲಿದೆ. ವಿರಾಜಪೇಟೆ ಸಂತ ಅನ್ನಮ್ಮ ವಿದ್ಯಾಸಂಸ್ಥೆ ಕಟ್ಟಡ ತರಬೇತಿ ಕೇಂದ್ರಕ್ಕೆ ಜಿಲ್ಲಾಧಿಕಾರಿ ವೆಂಕಟರಾಜ್ ಭೇಟಿ ನೀಡಿ ಸಿದ್ಧತೆಗಳ ಬಗ್ಗೆ ಪರಿಶೀಲನೆ ನಡೆಸಿದರು.

ಈ ಸಂದರ್ಭ ತಾಲೂಕು ತಹಶೀಲ್ದಾರ್ ಹೆಚ್. ರಾಮಚಂದ್ರ, ಸಹಾಯಕ ಚುನಾವಣಾಧಿಕಾರಿ ನಾರಾಯಣಸ್ವಾಮಿ, ಕಂದಾಯ ಪರಿವೀಕ್ಷಕ ಹರೀಶ್ ಅವರುಗಳೊಂದಿಗೆ ಚರ್ಚಿಸಿ ಸುರಕ್ಷತೆ ಹಾಗೂ ಅಗತ್ಯದ ಸಿದ್ಧತೆಗಳ ಬಗ್ಗೆ ಸೂಚಿಸಿದರು. ಏ.26 ರಂದು ನಡೆಯಲಿರುವ ಚುನಾವಣೆಗೆ ಏ.8 ರಂದು ಬೆಳಿಗ್ಗೆ 9 ಗಂಟೆಗೆ ಮತ ಯಂತ್ರಗಳ ನಿರ್ವಹಣೆ ಬಗ್ಗೆ ಮತ್ತು ಇತರ ಕಾರ್ಯಗಳ ಬಗ್ಗೆ ತರಬೇತಿ ನಡೆಯಲಿದೆ.

ಬೃಹತ್ ಬೈಕ್ ಜಾಥಾ ಮೂಲಕ ಮತದಾನ ಜಾಗೃತಿ



ಮತದಾನ ಜಾಗೃತಿ ಬೈಕ್ ಜಾಥಾಕ್ಕೆ ಜಿಲ್ಲಾಧಿಕಾರಿ ಶಿಲ್ಪನಾಗ್ ಚಾಲನೆ ನೀಡಿದರು.

ಚಾಮರಾಜನಗರ, ಏ.6– ಲೋಕಸಭಾ ಸಾರ್ವತ್ರಿಕ ಚುನಾವಣೆಯ ಅಂಗವಾಗಿ ಮತದಾನದ ಮಹತ್ವ ಕುರಿತು ನಾಗರಿಕರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಚಾಮರಾಜನಗರ ಪಟ್ಟಣದಲ್ಲಿಂದು ಹಮ್ಮಿಕೊಳ್ಳಲಾಗಿದ್ದ ಬೃಹತ್ ಬೈಕ್ (ರ್‍ಯಾಲಿ) ಜಾಥಾ ಎಲ್ಲರ ಗಮನ ಸೆಳೆಯಿತು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರು ಮತದಾನದ ಪ್ರತಿಜ್ಞಾ ವಿಧಿ ಬೋಧಿಸಿದರು.

ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಇತರೆ ಗಣ್ಯರು ಕೇಸರಿ, ಬಿಳಿ, ಹಸಿರು ಬಣ್ಣಗಳಿಂದ ಕೂಡಿದ ಮತದಾನ ಜಾಗೃತಿಯ ಬಲೂನ್‌ಗಳನ್ನು ಆಕಾಶಕ್ಕೆ ಹಾರಿ ಬಿಡುವ ಮೂಲಕ ಬೈಕ್ ಜಾಥಾಗೆ ಚಾಲನೆ ನೀಡಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳು, ಪ್ರತಿಯೊಬ್ಬರಲ್ಲೂ ಮತದಾನದ ಜಾಗೃತಿ ಮೂಡಿಸಲು ಬೈಕ್ ಜಾಥಾ ಹಮ್ಮಿಕೊಳ್ಳಲಾಗಿದೆ. ಚುನಾವಣೆಯು ಐದು ವರ್ಷಕ್ಕೊಮ್ಮೆ ಬರುವ ಹಬ್ಬವಾಗಿದೆ. ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿರುವ ಎಲ್ಲ ಅರ್ಹ ಮತದಾರರು ಮತಗಟ್ಟೆಗೆ ಬಂದು ಕಡ್ಡಾಯವಾಗಿ ಮತದಾನ ಮಾಡಬೇಕು ಎಂದರು.

ಲೋಕಸಭಾ ಚುನಾವಣೆಯ ಮತದಾನವು ಏ.26ರಂದು ನಡೆಯಲಿದ್ದು, ಈ ಬಾರಿ ಮೊದಲ ಸಲ ಮತದಾನ ಮಾಡುವ 18 ವರ್ಷ ತುಂಬಿದ ಯುವ ಮತದಾರರು ತಪ್ಪದೆ ಮತ ಚಲಾಯಿಸಬೇಕು. ಯಾವುದೇ ಆಮಿಷಗಳಿಗೆ ಒಳಗಾಗದೇ ಮತದಾನ ಮಾಡುವಂತೆ ಇತರರಿಗೂ ತಿಳಿಹೇಳಬೇಕು ಎಂದು ಹೇಳಿಸಿದರು.

ಬಳಿಕ ನೂರಾರು ಬೈಕ್‌ಗಳಲ್ಲಿ ಸಮಾವೇಶಗೊಂಡಿದ್ದ ಜಾಥಾಗೆ ಜಿಲ್ಲಾ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಪಿ. ಲಕ್ಷ್ಮೀ ಅವರು ಹಸಿರು ನಿಶಾನೆ ತೋರಿ ಜಾಥಾಗೆ ಶುಭ ಕೋರಿದರು.

ಜಿಲ್ಲಾ ಕ್ರೀಡಾಂಗಣದಿಂದ ಹೊರಟ ಬೈಕ್ ಜಾಥಾ ನಗರದ ಎಲ್‌ಐಸಿ ವೃತ್ತ, ಸಂತೇಮರಹಳ್ಳಿ ವೃತ್ತ, ಪಚ್ಚಪ್ಪ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ, ರಾಮಸಮುದ್ರ ಮೂಲಕ ಸಾಗಿ ಬಳಿಕ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಗುಂಡ್ಲುಪೇಟೆ ಸರ್ಕಲ್ ಮಾರ್ಗವಾಗಿ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ ತಲುಪಿತು. ಬೈಕ್ ಜಾಥಾದಲ್ಲಿ ಪಾಲ್ಗೊಂಡಿದ್ದ ನೂರಾರು ಅಧಿಕಾರಿಗಳು, ಇತರರು ಮತದಾನ ಅರಿವು ನಾಮಫಲಕಗಳನ್ನು ಹಿಡಿದು 'ಚುನಾವಣಾ ಪರ್ವ–ದೇಶದ ಗರ್ವ' ಘೋಷಣೆಗಳನ್ನು ಕೂಗಿ ಜನಜಾಗೃತಿ ಮೂಡಿಸಿದರು.

ಉಪವಿಭಾಗಾಧಿಕಾರಿ ಭರವಸೆಗೆ ಮತದಾನ ಬಹಿಷ್ಕಾರ ಕೈಬಿಟ್ಟ ಪುರಾಣಿ ಪೋಡು ಆದಿವಾಸಿಗಳು

ಯಳಂದೂರು,ಏ.6– ತಾಲೂಕಿನ ಪುರಾಣಿ ಪೋಡಿನಲ್ಲಿ ಮತದಾನ ಬಹಿಷ್ಕಾರ ಹಾಗೂ ಉಪವಾಸ ಸತ್ಯಾಗ್ರಹ ಸ್ಥಳಕ್ಕೆ ಶನಿವಾರ ಕೊಳ್ಳೇಗಾಲದ ಉಪ ವಿಭಾಗಾಧಿಕಾರಿ ಶಿವಮೂರ್ತಿ ಭೇಟಿ ನೀಡಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಅಲ್ಲಿನ ನಿವಾಸಿಗಳು ಮತದಾನ ಬಹಿಷ್ಕಾರದಿಂದ ಹಿಂದೆ ಸರಿದರು.

ಮೂಲ ಸೌಲಭ್ಯಗಳನ್ನು ಕಲ್ಪಿಸುವಂತೆ ಆಗ್ರಹಿಸಿ ಇಲ್ಲಿನ ನಿವಾಸಿಗಳು ಮತದಾನ ಬಹಿಷ್ಕಾರ ಮಾಡುವುದಾಗಿ ಘೋಷಿಸಿ, ಪ್ರತಿಭಟನೆ ನಡೆಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಪೋಡಿಗೆ ಭೇಟಿ ನೀಡಿದ ಉಪ ವಿಭಾಗಾಧಿಕಾರಿಗಳು, ಪ್ರತಿಭಟನಾಕಾರರ ಜೊತೆ ಮಾತನಾಡಿ, ಪುರಾಣಿ ಪೋಡಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಈಗಾಗಲೇ 1.70 ಕೋಟಿ ಅನುದಾನ ಬಿಡುಗಡೆಯಾಗಿ ಟೆಂಡರ್ ಪ್ರಕ್ರಿಯೆಯು ಮುಗಿದಿದೆ. ಅರಣ್ಯ ಇಲಾಖೆಯಿಂದ ಅನುಮತಿ ಪಡೆದು ರಸ್ತೆ ನಿರ್ಮಿಸಲಾಗುವುದು. ಜಲ ಜೀವನ ಮಿಷನ್ ಯೋಜನೆಯಡಿ ಈಗಾಗಲೇ ಟ್ಯಾಂಕ್ ನಿರ್ಮಾಣ ಮಾಡಲಾಗಿದ್ದು, ವಿದ್ಯುತ್ ಸಂಪರ್ಕ ನೀಡಿದರೆ ಕುಡಿಯುವ ನೀರಿನ ಸಮಸ್ಯೆ ದೂರವಾಗುತ್ತದೆ, ಈ ಕೆಲಸಗಳಿಗೆ ಸುಮಾರು 45 ದಿನಗಳ ಕಾಲಾವಕಾಶ ನೀಡಬೇಕೆಂದು ಮನವಿ ಮಾಡಿದರು. ಅಲ್ಲದೆ ಕಾಮಗಾರಿಗಳನ್ನು ಶೀಘ್ರ ಮುಗಿಸುವ ಭರವಸೆ ನೀಡಿದ ನಂತರ ಅಲ್ಲಿನ ನಿವಾಸಿಗಳು ಮತದಾನದ ಬಹಿಷ್ಕಾರ ವಾಪಸ್ ಪಡೆದಿರುವುದಾಗಿ ಘೋಷಿಸಿದರು.

ಈ ವೇಳೆ ಯಳಂದೂರು ತಹಸೀಲ್ದಾರ್ ನಿಸರ್ಗ ಪ್ರಿಯ, ಕೊಳ್ಳೇಗಾಲ ತಹಸೀಲ್ದಾರ್ ಮಂಜುಳ, ಗಿರಿಜನ ಕಲ್ಯಾಣಾಧಿಕಾರಿ ಮಂಜುಳ, ತಾಪಂ ಇಒ ಉಮೇಶ್, ಅರಣ್ಯ ಇಲಾಖೆ ಎಸಿಎಫ್ ನಂದಗೋಪಾಲ್, ಆರ್‌ಎಫ್‌ಒ ನಾಗೇಂದ್ರನಾಯಕ್, ಲೋಕೋಪಯೋಗಿ ಇಲಾಖೆ ಎಇಇ ಪುರುಷೋತ್ತಮ್, ಜೆಇ ಸುರೇಂದ್ರ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ರಾಜೇಶ್, ಸಿಡಿಪಿಒ ಸಕಲೇಶ್ವರ್, ಜಿಪಂ ಎಇಇ ಶ್ರೀನಿವಾಸ್, ಕೆಇಬಿ ಎಇಇ ನಿಂಗರಾಜು, ಸಬ್ ಇನ್ಸ್‌ಪೆಕ್ಟರ್ ನಂದೀಶ್, ಪಿಡಿಒ ಕಾವ್ಯ ಮುಖಂಡರಾದ ಕೇತಮ್ಮ, ವೆಂಕಟೇಶ್, ದಾಸ್, ನಾಗರಾಜು, ಬಸವೇಗೌಡ, ಮಹದೇವಯ್ಯ ಇತರರಿದ್ದರು.



ಬಿಳಿಗಿರಿರಂಗನಬೆಟ್ಟ ಪುರಾಣಿ ಪೋಡಿಗೆ ಕೊಳ್ಳೇಗಾಲ ಉಪ ವಿಭಾಗಾಧಿಕಾರಿ ಶಿವಮೂರ್ತಿ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಭೇಟಿ ನೀಡಿದ್ದರು.


ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯ

ಚಾಮರಾಜನಗರ, ಏ.6– ಚಾಮರಾಜನಗರ ನಗರಸಭೆಗೆ ಸೇರಿದ ಟಿ.ನರಸೀಪುರ ಕುಡಿಯುವ ನೀರು ಸರಬರಾಜು ಮಾಡುವ ಪಂಪ್ ಕೇಂದ್ರದಲ್ಲಿ ಮೋಟಾರ್ ಪಂಪ್ ದುರಸ್ತಿಗೊಳಗಾಗಿದ್ದು, ಈ ಸಂಬಂಧ ನಗರಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸರಬರಾಜಿನಲ್ಲಿ 3 ದಿನಗಳವರೆಗೆ ವ್ಯತ್ಯಯ ಉಂಟಾಗಲಿದೆ.

ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಪೌರಾಯುಕ್ತರಾದ ಎಸ್.ವಿ. ರಾಮದಾಸ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮತ್ತೊಮ್ಮೆ ಮೋದಿ ಪ್ರಧಾನಿ ಮಾಡಲು ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಶ್ರಮಿಸಿ

ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್ ಕುಮಾರ್ ಮನವಿ



ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಗ್ರಾಮದಲ್ಲಿ ಆಯೋಜಿಸಿದ್ದ ಬಿಜೆಪಿ ಮುಖಂಡರ ಸಭೆಯಲ್ಲಿ ಸಿ.ಎಸ್.ನಿರಂಜನಕುಮಾರ್ ಮಾತನಾಡಿದರು.

ಗುಂಡ್ಲುಪೇಟೆ: ಮತ್ತೊಮ್ಮೆ ನರೇಂದ್ರ ಮೋದಿಯವರನ್ನು ಪ್ರಧಾನಿ ಮಾಡಲು ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಕೆಲಸ ಮಾಡಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಹೇಳಿದರು.

ತಾಲೂಕಿನ ತೆರಕಣಾಂಬಿ ಮಹಾಶಕ್ತಿ ಕೇಂದ್ರ ವ್ಯಾಪ್ತಿಯ ವಿವಿಧ ಗ್ರಾಮ ಪಂಚಾಯತಿ ವ್ಯಾಪ್ತಿಯ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು. ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರದ ಸಾಧನೆಗಳನ್ನು ದೇಶದ ಜನತೆ ಮೆಚ್ಚಿಕೊಂಡಿದ್ದಾರೆ. ಈ ಬಾರಿಯೂ ಮತದಾರರ ಒಲವು ಬಿಜೆಪಿ ಕಡೆಗಿದೆ. ಆದರೆ ಪ್ರತಿ ಗ್ರಾಮಕ್ಕೂ ಅಭ್ಯರ್ಥಿಯು ಭೇಟಿ ನೀಡಲು ಸಮಯಾವಕಾಶ ಇಲ್ಲದ ಕಾರಣ ಆಯಾಯ ಗ್ರಾಮಗಳ ಕಾರ್ಯಕರ್ತರೇ ಅಭ್ಯರ್ಥಿಯಾಗಿ ತಮ್ಮ ಬೂತ್‌ಗಳಲ್ಲಿ ಕಾರ್ಯನಿರ್ವಹಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಉಪಾಧ್ಯಕ್ಷ ಹಿರೀಕಾಟಿ ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಮಾಜಿ ಮಂಡಲಾಧ್ಯಕ್ಷ ಎಲ್.ಸುರೇಶ್. ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್.ಎಂ. ಮಲ್ಲಿಕಾರ್ಜುನಸ್ವಾಮಿ, ಕನ್ನೇಗಾಲ ಮಾದಪ್ಪ, ತಾಲೂಕು ಪ್ರಧಾನ ಕಾರ್ಯದರ್ಶಿ ಸುನಿಲ್, ಮುಖಂಡರಾದ ನವೀನ್ ಮೌರ್ಯ, ಎಸ್‌ಸಿ ಮೋರ್ಚಾ ಅಧ್ಯಕ್ಷ ನಾಗುಸ್ವಾಮಿ, ಮಾಧ್ಯಮ ಸಂಚಾಲಕ ಎಸ್.ಸಿ. ಮಂಜುನಾಥ್ ಸೇರಿದಂತೆ ಹಲವರು ಇದ್ದರು.

ಮೇವಿನ ಕೊರತೆ ಕಂಡುಬಂದರೆ ಮಾಹಿತಿ ನೀಡುವಂತೆ ಸಾರ್ವಜನಿಕರಿಗೆ ಡಿಸಿ ಮನವಿ

ಚಾಮರಾಜನಗರ: ಚಾಮರಾಜನಗರ ಜಿಲ್ಲೆಯಾದ್ಯಂತ ಬರ ನಿರ್ವಹಣೆ ಹಿನ್ನೆಲೆಯಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಕಂಡು ಬಂದಲ್ಲಿ ಸಾರ್ವಜನಿಕರು ಜಿಲ್ಲಾಧಿಕಾರಿಗಳ ಕಚೇರಿಯ ವಿಪತ್ತು ನಿರ್ವಹಣಾ ಕೊಠಡಿಯ ದೂರವಾಣಿ ಸಂಖ್ಯೆಗಳಿಗೆ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾದ ಶಿಲ್ಪನಾಗ್ ಮನವಿ ಮಾಡಿದ್ದಾರೆ.

ಬರ ನಿರ್ವಹಣೆ ಹಿನ್ನೆಲೆಯಲ್ಲಿ ಗ್ರಾಮಾಂತರ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ನೀಗಿಸಲು ಈಗಾಗಲೇ ಅಗತ್ಯಕ್ಕೆ ಅನುಗುಣವಾಗಿ ಹನೂರು ತಾಲೂಕಿನ ಕೌದಳ್ಳಿ, ವಿ.ಎಸ್.ದೊಡ್ಡಿ, ಕೆಂಚಯ್ಯನದೊಡ್ಡಿ, ಶಾಗ್ಯ, ಕಳ್ಳಿದೊಡ್ಡಿ, ಗಾಣಿಗಮಂಗಲ, ರಾಮಾಪುರ, ಶೆಟ್ಟಿಹಳ್ಳಿ, ಅರಬಗೆರೆ–75, ಭದ್ರಯ್ಯನಹಳ್ಳಿ, ಮುನಿಶೆಟ್ಟಿದೊಡ್ಡಿ, ಹೊಸಹಳ್ಳಿ, ದಂಟಳ್ಳಿ, ಎಲ್‌ಪಿಎ ಕ್ಯಾಂಪ್ ಮತ್ತು ಕುರಟ್ಟಿ ಹೊಸೂರು ಗ್ರಾಮಗಳಲ್ಲಿ ಗೋಶಾಲೆಗಳನ್ನು ತೆರೆಯಲಾಗಿದೆ. ಅಗತ್ಯಕ್ಕೆ ಅನುಗುಣವಾಗಿ ಇನ್ನಿತರ ತಾಲೂಕಿನ ಗ್ರಾಮಗಳಲ್ಲಿ ಗೋಶಾಲೆಗಳನ್ನು ತೆರೆಯಬೇಕಾಗಿದೆ.

ಜಾನುವಾರುಗಳಿಗೆ ಮೇವಿನ ಕೊರತೆ ಇರುವ ಗ್ರಾಮಗಳ ಸಾರ್ವಜನಿಕರು ಜಿಲ್ಲಾಧಿಕಾರಿಗಳ ಕಚೇರಿ ವಿಪತ್ತು ನಿರ್ವಹಣಾ ಕೊಠಡಿ ಟೋಲ್ ಫ್ರೀ ದೂರವಾಣಿ ಸಂಖ್ಯೆ– 1077, ವಿಪತ್ತು ನಿರ್ವಹಣಾ ಕೊಠಡಿ ವಾಟ್ಸಾಪ್ ಸಂಖ್ಯೆ 9740942901 ಹಾಗೂ ಸ್ಥಿರ ದೂರವಾಣಿ ಸಂಖ್ಯೆ– 08226–223160, 223161, 223163 ಸಂಪರ್ಕಿಸಿ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾದ ಶಿಲ್ಪನಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್ ಪರ ಶಾಸಕ ಸಿ.ಪುಟ್ಟರಂಗಶೆಟ್ಟಿ ಮತಯಾಚನೆ



ಚಾಮರಾಜನಗರ: ತಾಲೂಕಿನ ವಿವಿಧ ಗ್ರಾಮಗಳಿಗೆ ತಮ್ಮ ಬೆಂಬಲಿಗರೊಂದಿಗೆ ಭೇಟಿ ನೀಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್ ಪರ ಮತಯಾಚನೆ ಮಾಡಿದರು.

ತಾಲೂಕಿನ ಕೂಡ್ಲೂರು, ಮಾದಾಪುರ ಸೇರಿದಂತೆ ಹಲವು ಗ್ರಾಮಗಳಿಗೆ ಭೇಟಿ ನೀಡಿ, ಗ್ರಾಮದೇವತೆಗೆ ಪೂಜೆ ಸಲ್ಲಿಸಿ ನಂತರ ಸುನಿಲ್ ಬೋಸ್ ಪರ ಮತಯಾಚನೆ ಮಾಡಿದರು.

ಈ ವೇಳೆ ಅವರು, ನುಡಿದಂತೆ ನಡೆದ ಪಕ್ಷ ಕಾಂಗ್ರೆಸ್ ಪಕ್ಷ ಐದು ಗ್ಯಾರಂಟಿಗಳನ್ನು ಸಮರ್ಪಕವಾಗಿ ಜಾರಿಮಾಡಿರುವಂತಹ ಏಕೈಕ ಪಕ್ಷ ಎಂದರೆ ಅದು ಕಾಂಗ್ರೆಸ್ ಮಾತ್ರವೇ. ಯಾವಾಗಲೂ ಕೂಡಾ ಜನಪರವಾಗಿ, ಬಡವರ ಪರವಾಗಿರುವ ಪಕ್ಷವಾಗಿದೆ. ದೇಶದಲ್ಲಿ ಈ ಹಿಂದೆ ಕಾಂಗ್ರೆಸ್ ಪಕ್ಷ ಅಧಿಕಾರಲ್ಲಿದ್ದ ಸಂದರ್ಭದಲ್ಲಿ ಜನಪರವಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತರಲಾಗಿತ್ತು. ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಉಸ್ತುವಾರಿ ಸಚಿವರಾಗಿದ್ದ ದಿವಂಗತ ಎಚ್.ಎಸ್. ಮಹದೇವಪ್ರಸಾದ್, ಸಂಸದರಾಗಿದ್ದ ಧ್ರುವನಾರಾಯಣ್ ಅವರು ಹಾಗೂ ನಾನೂ ಕೂಡಾ ಹೆಚ್ಚು ಅನುದಾನಗಳನ್ನು ತರುವ ಮೂಲಕ ಚಾಮರಾಜನಗರ ಜಿಲ್ಲೆಯನ್ನು ಸಾಕಷ್ಟು ಅಭಿವೃದ್ಧಿ ಮಾಡಿದ್ದು, ಜಿಲ್ಲೆಯ ಜನತೆಗೆ ಅನುಕೂಲ ಮಾಡಲಾಗಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ್, ಆರ್.ಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎ.ಎಸ್. ಗುರುಸ್ವಾಮಿ, ಮಹಮದ್ ಅಸ್ಗರ್, ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎ.ಮಹದೇವಶೆಟ್ಟಿ, ಮಾದಾಪುರ ಗ್ರಾಪಂ ಅಧ್ಯಕ್ಷ ರೂಪೇಶ್, ಎಪಿಎಂಸಿ ಸದಸ್ಯ ಆಲೂರು ಪ್ರತಾಪ್, ಕಾಗಲವಾಡಿ ಚಂದ್ರು, ನಾಗೇಂದ್ರ, ಶಿವಕುಮಾರ್, ಕೋಡಿಮೋಳೆ ಪ್ರಕಾಶ್ ಪಕ್ಷದ ಮುಖಂಡರಿದ್ದರು.

ಒಂದನೇ ಪುಟದಿಂದ

ನಕಲಿ ದಾಖಲೆ ಮೂಲಕ 84 ಲಕ್ಷ ಗುಳುಂ

ಪರಿಶೀಲನೆ ನಡೆಸಿ, ವಿದ್ಯಾರ್ಥಿಗಳ ಹೆಬ್ಬೆಟ್ಟಿನ ನಕಲಿ ಗುರುತು ದಾಖಲೆ ವಶಪಡಿಸಿಕೊಂಡಿದ್ದಾರೆ.

ವಿವರ: ಕಳೆದ ನಾಲ್ಕು ವರ್ಷದ ಹಿಂದೆ ಈ ಹಾಸ್ಟೆಲ್‌ನಲ್ಲಿ 120 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. ಈ ಸಂದರ್ಭದಲ್ಲಿ ಅಲ್ಲಿನ ವಾರ್ಡನ್ ಪ್ರತೀ ವಿದ್ಯಾರ್ಥಿಯ ಹೆಬ್ಬೆಟ್ಟು ಗುರುತನ್ನು ಮೇಣದಲ್ಲಿ ಹಾಕಿಸಿಕೊಂಡಿದ್ದರು ಎನ್ನಲಾಗಿದೆ. ಕೆಲ ದಿನಗಳ ನಂತರ ನಿಮ್ಮ ಪ್ರವೇಶ ರದ್ದಾಗಿದೆ ಎಂದು ತಿಳಿಸಿ 100 ವಿದ್ಯಾರ್ಥಿಗಳನ್ನು ಹಾಸ್ಟೆಲ್‌ನಿಂದ ಹೊರ ಹಾಕಲಾಗಿದೆ ಎಂದು ಆರೋಪಿಸಲಾಗಿದೆ.

ವಿದ್ಯಾರ್ಥಿಗಳನ್ನು ಹೊರ ಹಾಕಿದ್ದರೂ, ಅವರಿಂದ ಪಡೆದಿದ್ದ ಹೆಬ್ಬೆಟ್ಟು ಗುರುತನ್ನು ಪ್ರತೀ ದಿನ ಬಯೋಮೆಟ್ರಿಕ್‌ನಲ್ಲಿ ನಮೂದಿಸಿ ವಿದ್ಯಾರ್ಥಿಗಳು ಹಾಜರಿರುವಂತೆ ನಕಲಿ ದಾಖಲೆ ಸೃಷ್ಟಿ ಮಾಡಿದ್ದಾರೆ. ಅಲ್ಲದೇ ಈ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಪ್ರತೀ ತಿಂಗಳು ಬಿಡುಗಡೆಯಾಗುತ್ತಿದ್ದ ತಲಾ 1750 ರೂ.ಗಳಂತೆ 4 ವರ್ಷದಲ್ಲಿ ಒಟ್ಟು 84 ಲಕ್ಷ ರೂ.ಗಳನ್ನು ಗುಳುಂ ಮಾಡಿದ್ದಾರೆ ಎಂದು ಹೇಳಲಾಗಿದೆ.

ಈ ಸಂಬಂಧ ಮರಾಠ ಗೊಂಡುಳಿ ಸಮಾಜದ ರಾಜ್ಯ ನಿರ್ದೇಶಕ ಆರ್.ರಾಕೇಶ್ ರಾವ್ ಅವರು ತಾಲೂಕು ಹಿಂದುಳಿದ ವರ್ಗಗಳ ಇಲಾಖೆಯ ಅಧಿಕಾರಿ ಎಸ್.ಎಸ್.ಸುಜೇಂದ್ರ ಕುಮಾರ್, ವಾರ್ಡನ್ ಎಸ್.ಎಸ್.ಮಂಜುನಾಥ್ ಮತ್ತು ಅಡುಗೆ ಸಿಬ್ಬಂದಿ ಎನ್.ರವಿಚಂದ್ರ ವಿರುದ್ಧ ನೀಡಿದ ದೂರಿನನ್ವಯ ಶುಕ್ರವಾರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಡಾ. ಸಿ.ಕೆ.ಜಗದೀಶ್ ಅವರು ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಅವರೊಡಗೂಡಿ ಹಾಸ್ಟೆಲ್‌ಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಲ್ಲದೇ, ವಿದ್ಯಾರ್ಥಿಗಳ ಹೆಬ್ಬೆಟ್ಟು ಗುರುತುಗಳ ನಕಲುಗಳನ್ನು ವಶಪಡಿಸಿಕೊಂಡಿದ್ದಾರೆ.

> ಸಾರ್ವಜನಿಕರಿಂದ ಬಂದ ದೂರಿನ ಮೇರೆಗೆ ಹಾಸ್ಟೆಲ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ವಿದ್ಯಾರ್ಥಿಗಳ ನಕಲಿ ಹೆಬ್ಬೆಟ್ಟು ಗುರುತುಗಳನ್ನು ವಶಪಡಿಸಿಕೊಂಡಿದ್ದೇವೆ. ಮೇಲ್ನೋಟಕ್ಕೆ ಈ ಹಾಸ್ಟೆಲ್‌ನಲ್ಲಿ ಅವ್ಯವಹಾರ ನಡೆಸಿರುವುದು ಕಂಡು ಬರುತ್ತಿದೆ. ಈ ಪ್ರಕರಣದ ಬಗ್ಗೆ ಕೂಲಂಕುಶವಾದ ವರದಿಯನ್ನು ಇಲಾಖಾ ಆಯುಕ್ತರಿಗೆ ರವಾನಿಸಲಾಗಿದೆ. ಅವರು ಮುಂದಿನ ಕ್ರಮ ಕೈಗೊಳ್ಳುತ್ತಾರೆ.
> –ಡಾ.ಸಿ.ಕೆ.ಜಗದೀಶ್, ಜಂಟಿ ನಿರ್ದೇಶಕ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಲಕ್ಷ್ಮಣನ ಹರಕೆ ಕುರಿ ಮಾಡಿದ್ದಾರೆ...!

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ರಾಜ್ಯದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರ ಪುತ್ರ, ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆ ರೈತರು ಹಾಗೂ ಜನರ ಪರ ಆಡಳಿತ ನೀಡಿದ್ದಾರೆ. ಮೈಸೂರು ಒಡೆಯರು ಸರ್ವ ಜನರ ಹಿತ ಕಾಯುವ ಆಡಳಿತ ನಡೆಸುವ ಜೊತೆಗೆ ಜನಸೇವೆಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದರು. ಹೀಗಾಗಿ ಕುಮಾರಸ್ವಾಮಿ ಮತ್ತು ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಆಯ್ಕೆ ಮಾಡುವಂತೆ ಮನವಿ ಮಾಡಿದರು. ದೇಶದ ಒಳಿತಿಗಾಗಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ರಾಜ್ಯದಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ನಾವೆಲ್ಲರೂ ಶ್ರಮಿಸಬೇಕಿದೆ. ಹೀಗಾಗಿ ತಮ್ಮೆಲ್ಲಾ ವೈಮನಸ್ಸನ್ನು ಬದಿಗೊತ್ತಿ ಮೈತ್ರಿ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದರು.

ನಮ್ಮಿಬ್ಬರದು ಸೈದ್ಧಾಂತಿಕ ಹೋರಾಟ: ನನ್ನ ಹಾಗೂ ಕುಮಾರಸ್ವಾಮಿ ಅವರ ನಡುವೆ ಯಾವುದೇ ವೈಮನಸ್ಸಿಲ್ಲ. ಆದರೆ ಅದು ಸೈದ್ಧಾಂತಿಕ ಮತ್ತು ಜನಪರ ಆಡಳಿತಕ್ಕೋಸ್ಕರ ಜನರ ಧ್ವನಿಯಾಗಿ ನಾನು ಕೆಲವೊಮ್ಮೆ ಮಾತನಾಡಿದ್ದೇನೆಯೇ ಹೊರತು ವೈಯಕ್ತಿಕ ಕಾರಣಗಳಿಂದಲ್ಲ. ಕುಮಾರಸ್ವಾಮಿ ರೈತರ ಸಾಲ ಮನ್ನಾ ಸೇರಿದಂತೆ ಹಲವಾರು ಜನಪರ ಯೋಜನೆಗಳನ್ನು ಜಾರಿಗೊಳಿಸಿದಾಗ ನಾನು ಅವರಿಗೆ ಸಂಪೂರ್ಣ ಬೆಂಬಲ ನೀಡಿದ್ದೇನೆ. ಕುಮಾರಸ್ವಾಮಿ ನಿಲುವನ್ನು ಬೆಂಬಲಿಸಿ, ಅವರ ಪರವಾಗಿ ವ್ಯಾಪಕ ಪ್ರಚಾರ ಮಾಡುವುದಾಗಿ ವಿಶ್ವನಾಥ್ ತಿಳಿಸಿದರು.

ಟೀಕಿಸುವುದನ್ನು ನಿಲ್ಲಿಸಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಮುಖಂಡರಿಗೆ ಮಾಜಿ ಪ್ರಧಾನಿ ದೇವೇಗೌಡರ ಕುಟುಂಬವನ್ನು ಟೀಕಿಸುವ ನೈತಿಕತೆ ಇಲ್ಲ. ದೇವೇಗೌಡರ ಋಣ ತೀರಿಸದ ಮುಖ್ಯಮಂತ್ರಿ ಸಿದ್ದರಾಮಯ್ಯ ಏಕವಚನದಲ್ಲಿ ಮಾತನಾಡುವುದನ್ನು ನಿಲ್ಲಿಸಬೇಕು ಎಂದರು. ತಮ್ಮ ಮಾತಿನುದ್ದಕ್ಕೂ ಜೆಡಿಎಸ್ ಮತ್ತು ಬಿಜೆಪಿ ನಾಯಕರ ಹೊಗಳಿಕೆಯ ಮಾತುಗಳನ್ನಾಡುತ್ತಾ, ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಮುಖಂಡರ ವಿರುದ್ಧ ತಮ್ಮ ಹರಿತವಾದ ಮಾತುಗಳಿಂದ ಚುಚ್ಚುತ್ತಾ, ಈ ಚುನಾವಣೆಯಲ್ಲಿ ಎಲ್ಲಾ 28 ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಎನ್‌ಡಿಎ ಮೈತ್ರಿ ಪಕ್ಷಗಳನ್ನು ಆಡಳಿತಕ್ಕೆ ತನ್ನಿ ಎಂದು ಮನವಿ ಮಾಡಿದರು.

ಈ ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ ದೇವೇಗೌಡ, ಮಾಜಿ ಶಾಸಕರಾದ ಸಾ.ರಾ. ಮಹೇಶ್, ಬಂಡೆಪ್ಪ ಕಾಶಂಪೂರ್, ಸಿ.ಎಸ್.ಪುಟ್ಟರಾಜು, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಎಸ್.ಚನ್ನಬಸಪ್ಪ, ಮಾಜಿ ಸದಸ್ಯ ಅಮಿತ್ ವಿ ದೇವರಟ್ಟಿ, ಮೂಳೆ ತಜ್ಞ ಡಾ. ಮೆಹಬೂಬ್ ಖಾನ್, ಕರ್ನಾಟಕ ವಸ್ತು ಪ್ರದರ್ಶನದ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ ಗೌಡ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಹೊಸಳ್ಳಿ ವೆಂಕಟೇಶ್, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ಇನ್ನಿತರರಿದ್ದರು.

ವಿಶ್ವನಾಥರು ನೇರ ನುಡಿ ರಾಜಕಾರಣಿ

ಕೆ.ಆರ್.ನಗರ: ವಿಶ್ವನಾಥ್ ಅವರು ಮನಸ್ಸಿನಲ್ಲಿ ಏನೂ ಇಟ್ಟುಕೊಳ್ಳದೆ ನೇರವಾಗಿ ಮಾತನಾಡುವ ರಾಜಕಾರಣಿ. ಒಂದು ವೇಳೆ ಅವರು ಮನಸ್ಸಿನಲ್ಲಿ ಒಂದು ಹೊರಗೊಂದು ಇಟ್ಟುಕೊಂಡು ಮಾತನಾಡಿದ್ದರೆ ಒಂದು ಉನ್ನತ ಹುದ್ದೆಯಲ್ಲಿರುತ್ತಿದ್ದರು. ನನಗೆ ದೂರವಾಣಿ ಕರೆ ಮಾಡಿ, ನೀವೇ ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಬೇಕು. ನಮ್ಮ ಸಂಪೂರ್ಣ ಬೆಂಬಲ ನಿಮಗಿದೆ. ಈ ಭ್ರಷ್ಟ ಕಾಂಗ್ರೆಸ್ ಪಕ್ಷಕ್ಕೆ ಪಾಠ ಕಲಿಸಲು ಈ ಭಾಗದ ರೈತರ ಮತ್ತು ಜನಸಾಮಾನ್ಯರ ಅಭಿವೃದ್ಧಿಗೆ ಶ್ರಮಿಸುವ ನಿಮ್ಮಂತಹವರು ಲೋಕಸಭೆ ಪ್ರವೇಶ ಮಾಡಬೇಕೆಂದು ಒತ್ತಾಯಿಸಿದರು ಎಂದು ಕುಮಾರಸ್ವಾಮಿ ತಿಳಿಸಿದರು.

ಅವರ ಪ್ರೀತಿ ಮತ್ತು ವಿಶ್ವಾಸಕ್ಕೆ ನಾನು ಋಣಿಯಾಗಿದ್ದು, ಅವರನ್ನು ಅಭಿನಂದಿಸುವ ಜೊತೆಗೆ ಅವರನ್ನು ಮತ್ತು ಅವರ ಪುತ್ರರನ್ನು ರಾಜಕೀಯವಾಗಿ ಜೊತೆಯಲ್ಲಿ ಕರೆದುಕೊಂಡು ಹೋಗುವ ಜವಾಬ್ದಾರಿ ನನ್ನ ಮೇಲಿದೆ. ಅದನ್ನು ನಾನು ಮಾಡುತ್ತೇನೆ. ಈ ಭಾಗದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಜನಸೇವೆ ಮಾಡಿದ ಮಾಜಿ ಶಾಸಕ ಸಾರಾ ಮಹೇಶ್ ಮತ್ತು ವಿಶ್ವನಾಥ್, ಯಾವುದೇ ವಿರಸವಿಲ್ಲದೆ ಒಮ್ಮತದಿಂದ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರನ್ನು ಒಗ್ಗೂಡಿಸಿಕೊಂಡು ಸಮರ್ಥವಾಗಿ ಚುನಾವಣೆ ಎದುರಿಸಬೇಕು ಎಂದರು.

ಗ್ಯಾರಂಟಿ 5 ವರ್ಷ ವಾರಂಟಿ

ಮೊದಲ ಹಂತದಲ್ಲಿ ನಡೆಯುತ್ತಿರುವ ಚುನಾವಣೆಗೆ ಇಂದಿನಿಂದಲೇ ಪ್ರಚಾರ ಆರಂಭಿಸಿದ್ದಾರೆ. ಉಭಯ ನಾಯಕರು ಕೆಲ ವೆಡೆ ಜಂಟಿ ಪ್ರಚಾರ ಕೈಗೊಂಡರೆ, ಉಳಿದಂತೆ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಪ್ರತ್ಯೇಕವಾಗಿ ಸಭೆ ಮತ್ತು ರ್‍ಯಾಲಿಗಳಲ್ಲಿ ಪ್ರಚಾರ ಕೈಗೊಳ್ಳಲಿದ್ದಾರೆ. ಈಗಾಗಲೇ ಕಾರ್ಯಕರ್ತರು ಮತ್ತು ಮುಖಂಡರ ಜೊತೆ ಒಂದು ಸುತ್ತಿನ ಸಭೆ ಮುಗಿಸಿದ್ದು, ಈಗ ರೋಡ್ ಶೋ ಮತ್ತು ಸಮಾವೇಶಗಳ ಮೂಲಕ ಮತದಾರರ ಓಲೈಕೆಗೆ ಮುಂದಾಗಿದ್ದಾರೆ. ಪ್ರಚಾರ ಭಾಷಣಕ್ಕೆ ಚಾಲನೆ ನೀಡಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾವು ಕೊಟ್ಟ ಮಾತಿನಂತೆ ನಡೆದುಕೊಂಡು, ನಿಮ್ಮ ಮತಕ್ಕೆ ಘನತೆ ತಂದಿದ್ದೇವೆ, ನಮ್ಮ ಐದು ಗ್ಯಾರಂಟಿಗಳಿಗೂ ಐದು ವರ್ಷ ವಾರಂಟಿ ಇದೆ ಎಂದು ಸಮರ್ಥಿಸಿಕೊಂಡರು.

ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸಿಲಿಂಡರ್, ರಸಗೊಬ್ಬರ, ಅಡುಗೆ ಎಣ್ಣೆ, ಬೇಳೆ–ಕಾಳು, ತರಕಾರಿ ಸೇರಿದಂತೆ ಎಲ್ಲ ಅಗತ್ಯ ವಸ್ತುಗಳ ಬೆಲೆಯಲ್ಲಿ ಭಾರೀ ಏರಿಕೆ ಮಾಡಿದ್ದರಿಂದ ನಾಡಿನ ಅಪಾರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿದ್ದವು ಎಂದರು. ಕೇಂದ್ರ ಸರ್ಕಾರದ ಇಂಧನ ದರ ಏರಿಕೆಯಿಂದಾಗಿ ಅಗತ್ಯ ವಸ್ತುಗಳ ಧಾರಣೆ ಹೆಚ್ಚಳದಿಂದ ಸಂಕಷ್ಟಕ್ಕೆ ಸಿಲುಕಿದ ಕುಟುಂಬಗಳಿಗೆ ಸ್ಪಂದಿಸಲು ಐದು ಗ್ಯಾರಂಟಿಗಳನ್ನು ಘೋಷಿಸಿ, ಜಾರಿ ಮಾಡಿದೆವು. ಗ್ಯಾರಂಟಿಗಳ ಜಾರಿ ಸಾಧ್ಯವೇ ಇಲ್ಲ ಎನ್ನುವ ಸುಳ್ಳನ್ನು ಬಿಜೆಪಿ ಮೊದಲು ಹುಟ್ಟಿಸಿತು, ಗ್ಯಾರಂಟಿಗಳು ಜಾರಿಯಾದ ನಂತರ ಗ್ಯಾರಂಟಿಗಳು ನಿಂತು ಹೋಗುತ್ತವೆ ಎನ್ನುತ್ತಿದೆ. ಸೋಲುವ ಭೀತಿಯಿಂದ ಬಿಜೆಪಿ ಸೃಷ್ಟಿಸುವ ಸುಳ್ಳುಗಳನ್ನು ನಂಬಬೇಡಿ, ಬಿಜೆಪಿ ಸುಳ್ಳಿನ ಕಾರ್ಖಾನೆ, ಲೋಕಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಗೆಲ್ಲಿಸಿ ನಿಮ್ಮ ಮತಕ್ಕೆ ಮೌಲ್ಯ ತಂದು ಕೊಡುವ ರೀತಿಯಲ್ಲಿ ಸರ್ಕಾರ ಕೆಲಸ ಮಾಡುತ್ತದೆ ಎಂದರು.

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಬಂಪರ್ ಗ್ಯಾರಂಟಿ: ಇದೇ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್, ಈಗ ನಡೆಯುತ್ತಿರುವುದು ಲೋಕಸಭೆ ಚುನಾವಣೆ, ನಿನ್ನೆ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರು ಸಹಾ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 5 ನ್ಯಾಯ ಯೋಜನೆಗಳ ಮೂಲಕ 25 ಗ್ಯಾರಂಟಿ ಯೋಜನೆಗಳನ್ನು ಪ್ರಕಟಿಸಿ, ಗ್ಯಾರಂಟಿ ಚೆಕ್‌ಗೆ ಸಹಿ ಹಾಕಿದ್ದಾರೆ ಎಂದರು. ಗೃಹಲಕ್ಷ್ಮಿ ಮಾದರಿಯಲ್ಲಿ ಮಹಾಲಕ್ಷ್ಮಿ ಯೋಜನೆ ಮೂಲಕ ವರ್ಷಕ್ಕೆ ಒಂದು ಲಕ್ಷ ಹಣವನ್ನು ಬಡ ಕುಟುಂಬದ ಮಹಿಳೆಯೊಬ್ಬರಿಗೆ ನೀಡಲಾಗುವುದು, ಯುವಜನರಿಗೆ ವಾರ್ಷಿಕ ಒಂದು ಲಕ್ಷ ರೂ. ಶಿಷ್ಯ ವೇತನ ನೀಡಲಾಗುವುದು, ರೈತರ ಸಾಲ ಮನ್ನಾ, ರೈತರ ಬೆಳೆಗೆ ಬೆಂಬಲ ಬೆಲೆ ನಿಗದಿ, ನರೇಗಾ ಕೂಲಿ 400 ರೂ.ಗೆ ಹೆಚ್ಚಳ, 25 ಲಕ್ಷ ರೂ.ವರೆಗೆ ಆರೋಗ್ಯ ವಿಮೆ ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳಾಗಿವೆ. ಹುಟ್ಟಿದ ಸೂರ್ಯ ಮುಳುಗುವಂತೆ, ಅರಳಿದ ಕಮಲ ಬಾಡುತ್ತಿದೆ, ಕಮಲ ಕೆರೆಯಲ್ಲಿದ್ದರೆ ಚೆಂದ, ತೆನೆ ಹೊಲದಲ್ಲಿದ್ದರೆ ಚೆಂದ, ದಾನ–ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಚೆಂದ, ಕೈ ಅಧಿಕಾರಕ್ಕೆ ಬಂದಿದ್ದರಿಂದ ಗ್ಯಾರಂಟಿ ಯೋಜನೆಗಳು ಜಾರಿಯಾಗಿವೆ. ಐದು ಬೆರಳು ಸೇರಿ ಕೈ ಮುಷ್ಟಿಯಾಯಿತು, ಐದು ಗ್ಯಾರಂಟಿ ಸೇರಿ ಕೈ ಗಟ್ಟಿಯಾಯಿತು, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಸಾಮಾಜಿಕ ನ್ಯಾಯ ನೀಡಲಿದೆ ಎಂದರು.



ಮುಂದುವರೆದ ರಾಜಸ್ಥಾನ್ ಗೆಲುವಿನ ನಾಗಾಲೋಟ

● ಆರ್‌ಸಿಬಿಗೆ ಹ್ಯಾಟ್ರಿಕ್ ಸೋಲು ● ಕಿಂಗ್ ಕೊಹ್ಲಿ ಶತಕ ವ್ಯರ್ಥ



ಜೈಪುರ, ಏ.6– ಜೋಸ್ ಬಟ್ಲರ್ ಅವರ ಭರ್ಜರಿ ಶತಕ ಹಾಗೂ ನಾಯಕ ಸಂಜು ಸ್ಯಾಮ್ಸನ್ ಅವರ ಅರ್ಧ ಶತಕದ ನೆರವಿನಿಂದ ರಾಜಸ್ಥಾನ್ ರಾಯಲ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ 6 ವಿಕೆಟ್‌ಗಳ ಅಮೋಘ ಜಯ ಸಾಧಿಸಿದೆ. ಆ ಮೂಲಕ ಸತತ ಗೆಲುವಿನ ನಾಗಾಲೋಟ ಮುಂದುವರೆಸಿರುವ ರಾಜಸ್ಥಾನ ರಾಯಲ್ಸ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರೇ, ಟೂರ್ನಿಯಲ್ಲಿ ಆರ್‌ಸಿಬಿ ಹ್ಯಾಟ್ರಿಕ್ ಸೋಲು ಅನುಭವಿಸಿದೆ.

ಇಲ್ಲಿನ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 183 ರನ್ ಗಳಿಸಿತ್ತು. 184 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ 19.1 ಓವರ್‌ಗಳಲ್ಲೇ 4 ವಿಕೆಟ್ ನಷ್ಟಕ್ಕೆ 189 ರನ್ ಗಳಿಸಿ ಗೆಲುವು ಸಾಧಿಸಿತು.

ತಂಡದ ಪರ ಚೇಸಿಂಗ್ ಆರಂಭಿಸಿದ ರಾಜಸ್ಥಾನ್ ರಾಯಲ್ಸ್ ಮೊದಲ ಓವರ್‌ನ 2ನೇ ಎಸೆತದಲ್ಲೇ ಯಶಸ್ವಿ ಜೈಸ್ವಾಲ್ ವಿಕೆಟ್ ಕಳೆದುಕೊಂಡಿತು. ಈ ವೇಳೆ ಕ್ರೀಸ್‌ನಲ್ಲಿ ಭದ್ರವಾಗಿ ನೆಲೆಯೂರಿದ ಜೋಸ್ ಬಟ್ಲರ್ ಹಾಗೂ ನಾಯಕ ಸಂಜು ಸ್ಯಾಮ್ಸನ್ ಆರ್‌ಸಿಬಿ ಬೌಲರ್‌ಗಳನ್ನು ಹಿಗ್ಗಾಮುಗ್ಗಾ ದಂಡಿಸಿದರು. ಈ ಜೋಡಿ 2ನೇ ವಿಕೆಟ್‌ಗೆ 86 ಎಸೆತಗಳಲ್ಲಿ 148 ರನ್‌ಗಳ ಜೊತೆಯಾಟವಾಡಿತು. ಈ ವೇಳೆ 42 ಎಸೆತಗಳಲ್ಲಿ 8 ಬೌಂಡರಿ, 2 ಸಿಕ್ಸ್ ಒಳಗೊಂಡ 69 ರನ್ ಗಳಿಸಿ ಸಂಜು ಸ್ಯಾಮ್ಸನ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅಬ್ಬರಿಸಿದ ಬಟ್ಲರ್ 58 ಎಸೆತಗಳಲ್ಲಿ 9 ಬೌಂಡರಿ, 4 ಸಿಕ್ಸ್ ಒಳಗೊಂಡ ಅಜೇಯ 100 ರನ್ ಗಳಿಸಿ ತಂಡಕ್ಕೆ ಜಯ ತಂದು ಕೊಟ್ಟರು. ಉಳಿದಂತೆ ರಿಯಾನ್ ಪರಾಗ್ 4, ಧ್ರುವ್ ಜುರೆಲ್ 2, ಶಿಮ್ರಾನ್ ಹೆಟ್ಮೆಯರ್ 11 ರನ್ ಬಾರಿಸಿದರು. ಆರ್‌ಸಿಬಿ ಪರ ರೀಸಿ ಟಾಪ್ಲಿ 2, ಯಶ್ ದಯಾಳ್, ಮೊಹಮ್ಮದ್ ಸಿರಾಜ್ ತಲಾ ಒಂದೊಂದು ವಿಕೆಟ್ ಕಿತ್ತರು.

ಇದಕ್ಕೂ ಮುನ್ನಾ ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಇನ್ನಿಂಗ್ಸ್ ಆರಂಭಿಸಿದ ವಿರಾಟ್ ಕೊಹ್ಲಿ, ಫಾಫ್ ಡುಪ್ಲೆಸಿಸ್ ಮೊದಲ ವಿಕೆಟ್‌ಗೆ 125 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 44 ರನ್ ಗಳಿಸಿದ್ದ ಫಾಫ್ ಡುಪ್ಲೆಸಿಸ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಇನ್ನಿಂಗ್ಸ್ ಆರಂಭದಿಂದಲೂ ಅಬ್ಬರಿಸಿದ ವಿರಾಟ್ ಕೊಹ್ಲಿ 72 ಎಸೆತಗಳಲ್ಲಿ 4 ಸಿಕ್ಸ್, 12 ಬೌಂಡರಿ ಒಳಗೊಂಡ 113 ರನ್ ಗಳಿಸಿ ಅಜೇಯರಾಗಿ ಉಳಿದರು. ನಂತರ ಬಂದ ಗ್ಲೆನ್ ಮ್ಯಾಕ್ಸ್‌ವೆಲ್ 1, ಸೌರವ್ ಚೌಹಾಣ್ 9, ಕ್ಯಾಮರೂನ್ ಗ್ರೀನ್ 5 ರನ್ ಗಳಿಸಿದರು. ರಾಯಸ್ಥಾನ್ ರಾಯಲ್ಸ್ ಪರ ಯಜುವೇಂದ್ರ ಚಾಹಲ್ 2, ನಾಂದ್ರೆ ಬರ್ಗರ್ ಒಂದು ವಿಕೆಟ್ ಪಡೆದರು. ಜೋಸ್ ಬಟ್ಲರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	4	4	0	0	8
ಕೊಲ್ಕತ್ತಾ	3	3	0	0	6
ಚೆನ್ನೈ	4	2	2	0	4
ಲಕ್ನೋ	3	2	1	0	4
ಹೈದರಾಬಾದ್	4	2	2	0	4
ಪಂಜಾಬ್	4	2	2	0	4
ಗುಜರಾತ್	4	2	2	0	4
ಬೆಂಗಳೂರು	4	1	3	0	2
ಡೆಲ್ಲಿ	4	1	3	0	2
ಮುಂಬೈ	3	0	3	0	0

ಮೈಸೂರು ಅರಮನೆ ಮುಂದೆ ಏ.9ರಿಂದ 11ರವರೆಗೆ 'ಯುಗಾದಿ ಸಂಗೀತೋತ್ಸವ'

ಪ್ರಸಿದ್ಧ ಸಂಗೀತಗಾರರು, ಗಾಯಕರಿಂದ ಸಂಗೀತಧಾರೆ

ಮೈಸೂರು, ಏ.6(ಎಸ್‌ಬಿಡಿ)– ಯುಗಾದಿ ಹಬ್ಬದ ಪ್ರಯುಕ್ತ ಮೈಸೂರು ಅರಮನೆ ಮಂಡಳಿ ವತಿಯಿಂದ ಏ.9ರಿಂದ 11ರವರೆಗೆ 'ಯುಗಾದಿ ಸಂಗೀತೋತ್ಸವ' ಆಯೋಜಿಸಲಾಗಿದೆ.

ದಸರಾ ನಂತರ ಅಂಬಾವಿಲಾಸ ಅರಮನೆ ಮುಂಭಾಗ ವಿದ್ಯುತ್ ದೀಪಾಲಂಕಾರದ ಹೊಂಬೆಳಕಲ್ಲಿ ಮೂರು ದಿನಗಳ ಕಾಲ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಸ್ವಾದಿಸುವ ಸದವಕಾಶ ಕಲ್ಪಿತವಾಗಿದೆ.



ಮೊದಲ ದಿನ: ಏ.9ರಂದು ಸಂಜೆ 5ರಿಂದ ಗುರುರಾಜ್ ಮತ್ತು ತಂಡದಿಂದ 'ಸ್ಯಾಕ್ಸೋಫೋನ್ ವಾದನ', ಸಂಜೆ 6ಕ್ಕೆ ಶ್ರೀಧರ ಮೂರ್ತಿ ಅವರಿಂದ 'ಪಂಚಾಂಗ ಶ್ರವಣ', ಸಂಜೆ 6.30ಕ್ಕೆ ಹೆಚ್.ರಾಜೇಶ್ ಮತ್ತು ತಂಡದಿಂದ 'ನಾಡಗೀತೆ' ಹಾಗೂ ಮೈಸೂರು ಸಂಸ್ಥಾನದ ನಾಡಗೀತೆ 'ಕಾಯೌಶ್ರೀಗೌರಿ ಕರುಣಾಲಹರಿ' ಪ್ರಸ್ತುತಿ, ಸಂಜೆ.6.45ಕ್ಕೆ ಬದರಿ ದಿವ್ಯ ಭೂಷಣ್ ತಂಡದಿಂದ 'ನೃತ್ಯ ವೈಭವ' ಹಾಗೂ ಸಂಜೆ 7.45ಕ್ಕೆ ಅನನ್ಯ ಭಟ್ ತಂಡದಿಂದ 'ಯುಗಾದಿ ಉತ್ಸವ' ಗಾಯನ ಕಾರ್ಯಕ್ರಮ ನಡೆಯಲಿದೆ.

ಎರಡನೇ ದಿನ: ಏ.10ರಂದು ಸಂಜೆ 5.30ರಿಂದ ನಾಗೇಶ್ ಕಂದೇಗಾಲ ಮತ್ತು ತಂಡದಿಂದ 'ಭಾವ ಗೀತೋತ್ಸವ', ಸಂಜೆ 6.45ಕ್ಕೆ ಸುಮುಖ್ ಸೂರ್ಯ ತಂಡದಿಂದ 'ಕರ್ನಾಟಕ ಶಾಸ್ತ್ರೀಯ ಸಂಗೀತ' ಹಾಗೂ ಸಂಜೆ 7.45ರಿಂದ ಅಮೀತ್ ರಾಜ್ ತಂಡದಿಂದ 'ಲಯ ಅನುಭವ' ಕಾರ್ಯಕ್ರಮ ಪ್ರಸ್ತುತಿ ಏರ್ಪಡಿಸಲಾಗಿದೆ.

ಮೂರನೇ ದಿನ: ಏ.11ರಂದು ಸಂಜೆ 5.30ಕ್ಕೆ ಚಲನಚಿತ್ರ ಸಂಗೀತ ನಿರ್ದೇಶಕ ಡಿ.ರಾಮಕೃಷ್ಣ ತಂಡದಿಂದ 'ಭಕ್ತಿಭಾವ ಗೀತೆಗಳ ಗಾನ ಲಹರಿ', ಸಂಜೆ 6.30ಕ್ಕೆ ಸಂಗೀತ ವಿದ್ವಾನ್‌ಗಳಾದ ಪ್ರೊ.ಸಿ.ಎ.ಶ್ರೀಧರ್ ಹಾಗೂ ಸಿ.ಎಸ್.ಕೇಶವಚಂದ್ರ ತಂಡದವರಿಂದ 'ಕರ್ನಾಟಕ ಶಾಸ್ತ್ರೀಯ ದ್ವಂದ್ವ ವೇಣುವಾದನ' ಹಾಗೂ ಸಂಜೆ 7.45ರಿಂದ ಸಾಯಿ ವಿಗ್ನೇಶ್, ಲಕ್ಷ್ಮಿ ನಾಗರಾಜ್ ಹಾಗೂ ಎಂ.ಎಲ್.ಆನಂದ್ ತಂಡದಿಂದ 'ಸ್ವರ ವೈಭವ' ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕರು ಕಾರ್ಯಕ್ರಮವನ್ನು ವೀಕ್ಷಿಸಿ, ಯುಗಾದಿ ಹಬ್ಬವನ್ನು ಸಂಭ್ರಮಿಸುವಂತೆ ಅರಮನೆ ಮಂಡಳಿ ಕಾರ್ಯನಿರ್ವಾಹಕ ಅಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.



ಮೈಸೂರಿನ ದೊಡ್ಡ ಗಡಿಯಾರದ ಸಮೀಪ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಕಾವೇರಿ ನದಿ ನೀರಿನ ವಿಚಾರದಲ್ಲಿ ರಾಜ್ಯಕ್ಕೆ ನ್ಯಾಯ ಕಲ್ಪಿಸುವಂತೆ ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿಗಳಿಗೆ ಮನವಿ ಸಲ್ಲಿಸುವ ಸಲುವಾಗಿ ಸಾರ್ವಜನಿಕರಿಂದ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು. ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ (ಜೆಪಿ), ಸಮಿತಿ ಮುಖಂಡರಾದ ಮೂಗೂರು ನಂಜುಂಡಸ್ವಾಮಿ, ಸುರೇಶ್‌ಗೌಡ, ಶಿವಲಿಂಗೇಗೌಡ, ಪುಷ್ಪವತಿ, ಭಾಗ್ಯಮ್ಮ, ಹನುಮಂತೇಗೌಡ, ವಿನುತಾ, ಶ್ರೀನಿವಾಸಗೌಡ, ಮಂಜುಳಾ, ಭಾಗ್ಯ, ಬನ್ನೂರು ನಾಗರಾಜ್, ವರಕೋಡು ಕೃಷ್ಣೇಗೌಡ, ಕೃಷ್ಣಪ್ಪ, ತೇಜಸ್ ಲೋಕೇಶ್‌ಗೌಡ, ಹನುಮಂತಯ್ಯ, ಸಿಂಧುವಳ್ಳಿ ಶಿವಕುಮಾರ್, ಹೊನ್ನೇಗೌಡ, ಸೋಮೇಗೌಡ, ವಿಷ್ಣು, ಸಂಜಯ್, ವಿದ್ಯಾರ್ಥಿ ಕ್ರಿಯಾ ಸಮಿತಿಯ ಗಗನ್, ಸೂರ್ಯಪ್ರಕಾಶ್, ವೇದಾವತಿ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಬಸವಮಾರ್ಗ ಫೌಂಡೇಷನ್‌ಗೆ ಮಾಜಿ ಸಿಎಂ ಕುಮಾರಸ್ವಾಮಿ ಭೇಟಿ

ವ್ಯಸನಮುಕ್ತ ಸಮಾಜಕ್ಕಾಗಿ ಸಂಸ್ಥೆ ಸೇವೆಗೆ ಪ್ರಶಂಸೆ



ಮೈಸೂರಿನ ಬಸವಮಾರ್ಗ ಸಂಸ್ಥೆಗೆ ಭೇಟಿ ನೀಡಿದ್ದ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಏ.6(ಎಸ್‌ಬಿಡಿ)– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಮೈಸೂರಿನ ಬಸವಮಾರ್ಗ ಫೌಂಡೇಷನ್ ಸಂಸ್ಥೆಗೆ ಶನಿವಾರ ಭೇಟಿ ನೀಡಿ, ವ್ಯಸನಮುಕ್ತ ಸಮಾಜಕ್ಕಾಗಿ ಸಂಸ್ಥೆಯ ಸೇವೆಯನ್ನು ಪ್ರಶಂಸಿಸಿದರು.

ಒಬ್ಬ ವ್ಯಕ್ತಿ ವ್ಯಸನಿಯಾದರೆ ಅವನ ಇಡೀ ಕುಟುಂಬ ಸಂಕಷ್ಟಕ್ಕೆ ಸಿಲುಕುತ್ತದೆ. ವ್ಯಸನಮುಕ್ತ ಸಮಾಜ ನಿರ್ಮಾಣ ಆಗಬೇಕಿದೆ. ಈ ನಿಟ್ಟಿನಲ್ಲಿ ಬಸವರಾಜು ನೇತೃತ್ವದಲ್ಲಿ ಬಸವಮಾರ್ಗ ಸಂಸ್ಥೆ ಅತ್ಯುತ್ತಮವಾದ ಕಾರ್ಯ ನಿರ್ವಹಿಸುತ್ತಿದೆ ಕ್ರಾಂತಿಕಾರಿ ಬಸವಣ್ಣನವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುವ ಮೂಲಕ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಸಂಕಲ್ಪ ಮಾಡಿರುವುದು ಶ್ಲಾಘನೀಯ ಎಂದರು.

ಯುವ ಸಮೂಹವನ್ನು ತಪ್ಪು ದಾರಿ ಹಿಡಿಯದಂತೆ ಎಚ್ಚರಿಸುವ ನಿಟ್ಟಿನಲ್ಲಿ ಬಸವಮಾರ್ಗ ಸಂಸ್ಥೆ 38ಕ್ಕೂ ಹೆಚ್ಚು ಉಚಿತ ಶಿಬಿರ ನಡೆಸಿದೆ. ಎಲ್ಲರೂ ನಮ್ಮವರೇ ಎಂಬ ಆಶಯದೊಂದಿಗೆ ಸೇವೆ ಸಲ್ಲಿಸುತ್ತಿದೆ. ರಾಜ್ಯದ ಎಲ್ಲ ಕುಟುಂಬಗಳೂ ಸುಖ, ಶಾಂತಿಯಿಂದ ಜೀವನ ನಡೆಸುವಂತಹ ವಾತಾವರಣ ಸೃಷ್ಟಿಯಾಗುವಲ್ಲಿ ಬಸವಮಾರ್ಗ ಸಂಸ್ಥೆ ಮತ್ತಷ್ಟು ಸೇವೆ ವಿಸ್ತರಿಸಲಿ ಎಂದು ಆಶಿಸಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು, ಬಂಡೆಪ್ಪ ಕಾಶೆಂಪೂರ್, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜೆಡಿಎಸ್ ಮುಖಂಡರಾದ ರವಿ ಕುಮಾರ್, ಪ್ರೇಮ ಶಂಕರೇಗೌಡ, ಬಸವಮಾರ್ಗ ಸಂಸ್ಥಾಪಕರಾದ ಎಸ್.ಬಸವರಾಜು, ಇಂಡಿಯನ್ ಟಿವಿ ವ್ಯವಸ್ಥಾಪಕ ನಿರ್ದೇಶಕ ಎಸ್.ವೆಂಕಟೇಶ್ ಕುಮಾರ್, ಸಿಇಓ ಎಸ್.ರಾಜು ಮತ್ತಿತರರು ಉಪಸ್ಥಿತರಿದ್ದರು.

ಮೋದಿ ಮತ್ತೆ ಪ್ರಧಾನಿಯಾಗಬೇಕೆಂದು ಕಾಳಿ ಮಾತೆಗೆ ಬೆರಳನ್ನು ಅರ್ಪಿಸಿದ ಅಭಿಮಾನಿ

ಕಾರವಾರ: ನರೇಂದ್ರ ಮೋದಿ ಮತ್ತೆ ಪ್ರಧಾನಿಯಾಗಬೇಕು ಎಂದು ಅಭಿಮಾನಿಯೊಬ್ಬ ಕಾಳಿ ಮಾತೆಗೆ ತನ್ನ ಬೆರಳನ್ನೇ ತುಂಡು ಮಾಡಿ ನೀಡಿದ ಘಟನೆ ಉತ್ತರ ಕನ್ನಡ ಜಿಲ್ಲೆಯ ಕಾರವಾರ'ದ ಸೋನಾರವಾಡದಲ್ಲಿ ನಡೆದಿದೆ.



ಸೋನಾರವಾಡದ ಅರುಣ್ ವರ್ಣೇಕರ್ ಅವರು ಈಗಾಗಲೇ ಮೋದಿಗಾಗಿ ಗುಡಿಯನ್ನು ನಿರ್ಮಿಸಿ ಪೂಜೆ ಮಾಡುತ್ತಿದ್ದಾರೆ.

ಈತ ಬೆರಳು ತುಂಡು ಮಾಡಿಕೊಂಡು ರಕ್ತದಲ್ಲಿ "ಮಾ ಕಾಳಿಮಾತಾ ಮೋದಿ ಬಾಬಾಕೋ ರಕ್ಷಾ ಕರೋ". "ಮೋದಿ ಬಾಬಾ ಪಿ.ಎಂ, 3 ಬಾರ್ 78ತಕ್ 378, 378+ ಮೇರಾ ಮೋದಿ ಬಾಬಾ ಸಬ್ಸೆ ಮಹಾನ್" ಎಂದು ಗೋಡೆ ಹಾಗೂ ಪೋಸ್ಟರ್ ನಲ್ಲಿ ಬರೆದುಕೊಂಡಿದ್ದಾನೆ.

ಈ ಹಿಂದೆಯೂ ಬೆರಳು ಕೊಯ್ದುಕೊಂಡು ಮೋದಿ ಗೆಲುವಿಗಾಗಿ ಕಾಳಿ ಮಾತೆಗೆ ಹರಕೆ ನೀಡಿದ್ದರು. ಇದು ಕೊನೆಯ ಬಾರಿ ಆದ್ದರಿಂದ ಮೋದಿ ಪ್ರಧಾನಿಯಾಗಬೇಕು ಎಂದು ಬೆರಳನ್ನೇ ತುಂಡರಿಸಿ ಅರುಣ್ ಕಾಳಿಗೆ ನೀಡಿದ್ದಾರೆ.

ಕಾಳಿಸಿದ್ದನಹುಂಡಿ ಗ್ರಾಮದ ಬಳಿ ತೀವ್ರ ಅಸ್ವಸ್ಥತೆಯಿಂದ ವ್ಯಕ್ತಿ ಸಾವು

ಮೈಸೂರು,ಏ.6(ಆರ್‌ಕೆ)– ತೀವ್ರವಾಗಿ ಅಸ್ವಸ್ಥಗೊಂಡಿದ್ದ ವ್ಯಕ್ತಿ ಸಾವನ್ನಪ್ಪಿರುವ ಘಟನೆ ಮಹದೇವಪುರ ರಸ್ತೆಯ ಕಾಳಿ ಸಿದ್ದನಹುಂಡಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದೆ.

ಗ್ರಾಮದ ಬಸವರಾಜು ಸಾವನ್ನಪ್ಪಿದವರು. ತಡರಾತ್ರಿ ಗ್ರಾಮದ ಬಾರ್‌ವೊಂದರ ಎದುರು ನಿತ್ರಾಣಗೊಂಡು ಮಲಗಿದ್ದ ಅವರನ್ನು ಕಂಡ ಸಾರ್ವಜನಿಕರು ಸಮೀಪದ ಚೆಕ್‌ಪೋಸ್ಟ್ ಪೊಲೀಸರಿಗೆ ಮಾಹಿತಿ ನೀಡಿದರು. ವಿಷಯ ತಿಳಿಯುತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಪೊಲೀಸರು, ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಬಸವರಾಜುರವರನ್ನು, ಈ ಸ್ಥಳ ಅರೆಕೆರೆ ಠಾಣೆಗೆ ಸೇರಿದ್ದರಿಂದ ರಸ್ತೆ ಬದಿಯಿಂದ ಸುರಕ್ಷಿತ ಸ್ಥಳಕ್ಕೆ ತೆಗೆದುಕೊಂಡು ಹೋಗಿ ಮಲಗಿಸಿ 112ಗೆ ಕರೆ ಮಾಡಿ ಮಾಹಿತಿ ನೀಡಿ ಹಿಂತಿರುಗಿದ್ದರು.

ಆದರೆ ಶ್ರೀರಂಗಪಟ್ಟಣ ತಾಲೂಕು ಅರೆಕೆರ ಠಾಣೆ ಪೊಲೀಸರು ಮಧ್ಯ ರಾತ್ರಿವರೆಗೂ ಸ್ಥಳಕ್ಕೆ ಬಾರದ ಕಾರಣ ಬಸವರಾಜು ನರಳಿ ಕೊನೆಯುಸಿರೆಳೆದಿದ್ದಾರೆ. ಆತನನ್ನು ಬೇರೆಡೆಗೆ ಸ್ಥಳಾಂತರಿಸಿದ ದೃಶ್ಯ ಬಾರ್ ಬಳಿಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿರುವುದನ್ನು ಗಮನಿಸಿದ ಗ್ರಾಮಸ್ಥರು ನೇರವಾಗಿ ಆಸ್ಪತ್ರೆಗೆ ದಾಖಲಿಸಿದ್ದರೆ ಪ್ರಾಣ ಉಳಿಸಬಹುದಿತ್ತು ಎಂದು ಆರೋಪಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ದಾವಿಸಿದ ಮೈಸೂರು ಡಿವೈಎಸ್ಪಿ, ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ, ಮಹಜರು ನಡೆಸಿ ಪ್ರಕರಣವನ್ನು ಅರೆಕೆರೆ ಠಾಣೆಗೆ ವರ್ಗಾಯಿಸಿದ್ದಾರೆ.

ವೃದ್ಧಾಶ್ರಮ ಪರಿಕಲ್ಪನೆಗೆ ಜೋತು ಬೀಳುವವರಿಗೆ 'ಅಣ್ಣನ ನೆನಪು' ತಕ್ಕಪಾಠ

ಮೈಸೂರು, ಏ.6(ಎಸ್‌ಪಿಎನ್)– ಪ್ರಸ್ತುತ ನಗರ ಪ್ರದೇಶದಲ್ಲಿ ವೃದ್ಧಾಶ್ರಮ ಪರಿಕಲ್ಪನೆ ಹೆಚ್ಚಾಗುತ್ತಿರುವುದನ್ನು ಗಮನಿಸಿದರೆ ಕುವೆಂಪು ಜೀವನಾಧರಿತ 'ಅಣ್ಣನ ನೆನಪು' ನಾಟಕ ಇದಕ್ಕೆ ತಕ್ಕ ಉತ್ತರವಾಗಬಹುದು ಎಂದು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ ಪ್ರೊ.ಎನ್.ಕೆ.ಲೋಲಾಕ್ಷಿ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ದಂಡಿನ ರಾಜಪ್ಪ ಪರಿಹಾರ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ 'ಹಿರಿಯ ಲೇಖಕ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಅಣ್ಣನ ನೆನಪು' ನಾಟಕ ಪ್ರದರ್ಶನದಲ್ಲಿ ಅವರು ಮಾತನಾಡಿದರು.

ಹಿರಿಯ ಲೇಖಕ ಕೆ.ಪಿ.ಪೂರ್ಣ ಚಂದ್ರ ತೇಜಸ್ವಿ ರಚಿತ 'ಅಣ್ಣನ ನೆನಪು' ಬಯೋಗ್ರಫಿ ಉತ್ತರವಾಗ ಬಲ್ಲದು. ಏಕೆಂದರೆ, ತೇಜಸ್ವಿ, ಅಪ್ಪನನ್ನು ಎಷ್ಟು ಪ್ರೀತಿಸುತ್ತಿದ್ದರು. ಅವರ ಬಾಲ್ಯ, ಕುಟುಂಬದ ಒಡನಾಟ ಎಲ್ಲವೂ ಈ ಬಯೋಗ್ರಫಿಯಲ್ಲಿ ಅಡಕವಾಗಿದೆ. ಇದನ್ನು ದಂಡಿನ ರಾಜಪ್ಪ ಪರಿಹಾರ ಪ್ರತಿಷ್ಠಾನ ಟ್ರಸ್ಟ್‌ನ ಕಲಾವಿದರು, ರಂಗಭೂಮಿಗೆ ಅಳವಡಿಸುತ್ತಿರುವುದು ಸಂತೋಷದ ಸಂಗತಿ ಎಂದರು.



ಹಿರಿಯ ಸಾಹಿತಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಅಣ್ಣನ ನೆನಪು' ಬಯೋಗ್ರಫಿ ನಾಟಕ ಪ್ರದರ್ಶನವನ್ನು ಉದ್ಘಾಟಿಸಲಾಯಿತು.

ಇದಕ್ಕೂ ಮುನ್ನ ಮಾತನಾಡಿದ ವಿಶ್ರಾಂತ ಕುಲಪತಿ ಪ್ರೊ. ಕೆ.ಚಿಂದಾನಂದಗೌಡರು, 'ಅಣ್ಣ ನೆನಪು' ನಾಟಕಕ್ಕೆ ಈ ಪ್ರತಿಷ್ಠಾನದ ಕಲಾವಿದರು ಜೀವ ತುಂಬಿದ್ದಾರೆ.

> ತೇಜಸ್ವಿ ಮತ್ತು ನನ್ನ ನಡುವಿನ ಬಾಲ್ಯದ ನೆನಪುಗಳನ್ನು ಮತ್ತೊಮ್ಮೆ ಕಣ್ತುಂಬಿಕೊಳ್ಳಲು 'ಅಣ್ಣನ ನೆನಪು' ನಾಟಕವನ್ನು ಮತ್ತೊಮ್ಮೆ ನೋಡಿ ಕಣ್ತುಂಬಿಕೊಂಡಿದ್ದೇನೆ.
> - ತಾರಿಣಿ ಚಿದಾನಂದ ಗೌಡ, ಕುವೆಂಪು ಅವರ ಪುತ್ರಿ

ಇದನ್ನು ನಾನು ಎರಡನೇ ಬಾರಿ ವೀಕ್ಷಣೆ ಮಾಡುತ್ತಿದ್ದೇನೆ. ಮೊದಲ ಬಾರಿ ಅಭಿನಯಕ್ಕೂ ಈ ಬಾರಿ ಅಭಿನಯಕ್ಕೂ ಕೆಲವು ವ್ಯತ್ಯಾಸಗಳಾಗಿವೆ ಎಂಬುದು ನಾಟಕದ ನಿರ್ದೇಶಕರು ತಿಳಿಸಿದ್ದರಿಂದ ಹಾಗಾಗಿ ಮತ್ತೊಮ್ಮೆ ಈ ನಾಟಕ ವೀಕ್ಷಣೆಗೆ ಬಂದಿದ್ದೇನೆ ಎಂದರು.


ಗ್ರೀನ್ ಆಸ್ಕರ್ ಪ್ರಶಸ್ತಿ ಪುರಸ್ಕೃತ ಕೃಪಾಕರ್ ಮಾತನಾಡಿ, ಕೆ.ಪಿ.ಪೂರ್ಣ ಚಂದ್ರ ತೇಜಸ್ವಿ ಜೀವಿತಾವಧಿಯಲ್ಲಿ ವಿಜ್ಞಾನಿಗಳೇ ಪಾಲ್ಗೊಂಡಿದ್ದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಾನು ಮತ್ತು ಪೂರ್ಣ ಚಂದ್ರ ತೇಜಸ್ವಿ ಭಾಗವಹಿಸಿದ್ದೆವು. ಆ ಕಾರ್ಯಕ್ರಮದ ವೇದಿಕೆಯಲ್ಲಿ ಆಸೀನರಾಗಿದ್ದಾಗ, ಸಭಿಕರ ಗ್ಯಾಲರಿ ಕಡೆ ಒಮ್ಮೆ ವೀಕ್ಷಿಸಿದಾಗ ಸಭಿಕರೆಲ್ಲರೂ ವಿವಿಧ ವಿಷಯಗಳಲ್ಲಿ ಸಂಶೋಧನೆ ಮಾಡುತ್ತಿರುವ ವಿಜ್ಞಾನಿಗಳೇ ಆಗಿದ್ದರು.


ಇವರಿಗೆ ನಾವು ಏನೆಂದು ಸಲಹೆ ನೀಡುವುದು ಎಂದು ತೇಜಸ್ವಿ ಅವರನ್ನು ಕೇಳಿದೆ. ಅದಕ್ಕೆ ನನ್ನ ಮಾತು ಸರಿ ಅನಿಸಿ, ಕೂಡಲೇ ಆಯೋಜಕರನ್ನು ಕರೆದು ಈ ಕಾರ್ಯಕ್ರಮವನ್ನು ನಾವು ಉದ್ಘಾಟನೆ ಮಾಡುತ್ತೇವೆ ಅಷ್ಟೇ. ಆದರೆ, ಭಾಷಣ ಮಾಡುವುದಿಲ್ಲ ಎಂದು ಹೇಳಿದ ಪ್ರಸಂಗವನ್ನು ಪ್ರಸ್ತಾಪಿಸಿದರು. ಈ ವೇದಿಕೆಯಲ್ಲಿ ಕುವೆಂಪು ಅವರ ಪುತ್ರಿ ತಾರಿಣಿ ಚಿದಾನಂದ ಸೇರಿದಂತೆ ಇತರರು ಉಪಸ್ಥಿತರಿದ್ದರು. ನಂತರ 'ಅಣ್ಣನ ನೆನಪು' ನಾಟಕ ಪ್ರದರ್ಶನಗೊಂಡು, ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.



ಇಂದು ವಿಶ್ವ ಆರೋಗ್ಯ ದಿನಾಚರಣೆ

ಆರೋಗ್ಯವೇ ಭಾಗ್ಯ...!





"ರೋಗಗಳು ಶರೀರದಲ್ಲಿ ಕಂಡು ಬಂದ ಮೇಲೆ ಅವುಗಳ ನಿವಾರಣೆ ಅಥವಾ ಶಮನ ಅತಿಕಷ್ಟ. ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯದ ಕಾಯಿಲೆಗಳು ಒಂದನ್ನೊಂದು ಅನುಸರಿಸಿಕೊಂಡು ಪ್ರಾಣಕ್ಕೇ ಕುತ್ತು ತರುತ್ತವೆ. ವ್ಯಕ್ತಿಗಳು ಶರೀರದ, ಇಂದ್ರಿಯಗಳ ಮತ್ತು ಬುದ್ಧಿಯ ದೌರ್ಬಲ್ಯಗಳಿಗೀಡಾಗಿ ಅನುತ್ಪಾದಕರೂ ಆಗಿಬಿಡಬಹುದು. ರೋಗಿಯ ನೋವನ್ನು ತಗ್ಗಿಸುವುದಕ್ಕೆ ಮತ್ತು ಚಿಕಿತ್ಸೆಗೆ ಹಲವರ ನೆರವು ಬೇಕಾಗಬಹುದು. ಇಂತಹ ರೋಗಗಳ ಸಂಖ್ಯೆ ಹೆಚ್ಚಾದಾಗ ಇಡೀ ರಾಷ್ಟ್ರಕ್ಕೆ ಆರ್ಥಿಕ ಹಾನಿ ಜೊತೆಗೆ ಮಾನವ ಸಂಪನ್ಮೂಲ ಹಾನಿಯೂ ಕೆಲವೊಮ್ಮೆ ಅತ್ಯಧಿಕವಾಗಿರುತ್ತದೆ.

ಡಾ.ವಿ.ಲಕ್ಷ್ಮೀನಾರಾಯಣ್
ಮೊ.9449824994



ಅಂದು 1948, ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಯಾಯಿತು. ಅದರ ನೆನಪಿನಾರ್ಥ ಪ್ರತಿ ವರ್ಷ ಏಪ್ರಿಲ್ 7ರಂದು 'ವಿಶ್ವ ಆರೋಗ್ಯ ದಿನ' ಆಚರಿಸುತ್ತೇವೆ.

ವಿಶ್ವ ಆರೋಗ್ಯ ಸಂಸ್ಥೆ, ವಿಶ್ವ ಸಂಸ್ಥೆಯ ಒಂದು ಅಂಗ ಸಂಸ್ಥೆ (United Nations Agency). ಈ ಸಂಸ್ಥೆಯ ಧ್ಯೇಯ; ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನರ ಆರೋಗ್ಯ ರಕ್ಷಣೆ ಉತ್ತೇಜಿಸುವುದು. ಹಾಗೂ ಅವರ ಆರೋಗ್ಯ ಮಟ್ಟವನ್ನು ಸುಧಾರಿಸುವುದು. ಆಧುನಿಕ ಜಗತ್ತಿನಲ್ಲಿ ವ್ಯಾಪಕಗೊಳ್ಳುತ್ತಿರುವ ಆರೋಗ್ಯ ಸಮಸ್ಯೆ ಎಂದರೆ 'ಯುವ ಜನಾಂಗದಲ್ಲಿನ ಸಾಂಕ್ರಾಮಿಕವಲ್ಲದ ರೋಗಗಳು' (NON-COMMUNICABLE DISEASES IN THE YOUTH). ಜೊತೆಗೆ ತಾರುಣ್ಯದಲ್ಲಿ ಹೆಚ್ಚಾಗಿ ಕಂಡುಬರುತ್ತಿರುವ ನಾನಾ ಸಮಸ್ಯೆಯ ಜೊತೆಗೆ ವಿಶ್ವ ಆರೋಗ್ಯ ಸಂಸ್ಥೆಯ ಮಟ್ಟದಲ್ಲಿ ಬಾಲ್ಯದಿಂದಲೇ ಯುವಜನಾಂಗಕ್ಕೆ ಮಧುಮೇಹದ ಬಗ್ಗೆ ತಿಳುವಳಿಕೆ ಕೊಡುವ ಕುರಿತ ಪಾಠಗಳನ್ನು ಶಾಲಾ ಕಾಲೇಜುಗಳ ಪಠ್ಯಕ್ರಮದಲ್ಲಿ ಕಡ್ಡಾಯವಾಗಿ ಸೇರ್ಪಡೆಯಾಗುವಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸ್ತಾಪಿಸಿ, ಚರ್ಚಿಸಿದರೆ ಒಳ್ಳೆಯದಾದೀತು. ಪ್ರಸಕ್ತ, 2024ನೇ ಸಾಲಿನ ವಿಶ್ವ ಆರೋಗ್ಯ ದಿನದ ಧ್ಯೇಯ ವಾಕ್ಯ 'ನನ್ನ ಆರೋಗ್ಯ ನನ್ನ ಹಕ್ಕು' (My health, My right) ಎಂಬುದಾಗಿದೆ. ಆರೋಗ್ಯ ಹೊಂದುವ ಹಕ್ಕು ಎಲ್ಲರಿಗೂ ಇದೆ. ಈ ಆರೋಗ್ಯದ ಹಕ್ಕನ್ನು ಪಡೆಯಲು 'ಪರಿಹಾರಕ್ಕಿಂತ ಮುನ್ನೆಚ್ಚರಿಕೆ ಒಳಿತು' (Prevention is better than cure) ಎಂಬ ಗಾದೆ ಸತ್ಯಸ್ಯ ಸತ್ಯ. ಚಿಕಿತ್ಸೆಗಿಂತ ರೋಗ ಬಾರದಂತೆ ಎಚ್ಚರಿಕೆ ವಹಿಸುವುದು ಉತ್ತಮ. ಎಲ್ಲದಕ್ಕಿಂತಲೂ ವಿಶೇಷವಾಗಿ ವಿದ್ಯಾರ್ಥಿಗಳು ಮತ್ತು ತರುಣರು ಈ ಬಗ್ಗೆ ಗಮನ ಹರಿಸಬೇಕೆಂಬ ದೃಷ್ಟಿಯಿಂದ 'ಯುವಕರಲ್ಲಿನ ಸಾಂಕ್ರಾಮಿಕವಲ್ಲದ ರೋಗಗಳು' ವಿಷಯ ವಸ್ತು ಅತ್ಯಂತ ಪ್ರಸ್ತುತವಾಗಿದೆ.

ಪ್ರಸ್ತಾವನೆ: ವಿಶ್ವಾದ್ಯಂತ ನವೀನ ವೈದ್ಯಕೀಯ ಪದ್ಧತಿಗಳಿಂದ ಬಹುತೇಕ ಸಾಂಕ್ರಾಮಿಕ ವ್ಯಾಧಿಗಳನ್ನು ಹತೋಟಿಗೆ ತಂದಿದ್ದೇವೆ. ಆದರೆ ಇಂದು ಭಾರತ ದೇಶವನ್ನೊಳಗೊಂಡು ಜಗತ್ತಿನಾದ್ಯಂತ ಸಂಭವಿಸುತ್ತಿರುವ ಸಾವುಗಳಿಗೆ ಪ್ರಮುಖವಾದ ಕಾರಣವೆಂದರೆ ಸಾಂಕ್ರಾಮಿಕವಲ್ಲದ ರೋಗಗಳು. ಜಾಗತಿಕವಾಗಿ ಪ್ರತಿಶತ 74 ಮಿಲಿಯನ್ ಸಾವುಗಳು ಸಾಂಕ್ರಾಮಿಕವಲ್ಲದ ವ್ಯಾಧಿಗಳಿಂದ ಸಂಭವಿಸುತ್ತಿವೆ ಸುಮಾರು 140 ಕೋಟಿ ಜನಸಂಖ್ಯೆಯ ನಮ್ಮ ದೇಶದಲ್ಲಿ ಪ್ರತಿಶತ ಸುಮಾರು 60 ಸಾವುಗಳಿಗೆ ಸಾಂಕ್ರಾಮಿಕ ವಲ್ಲದ ರೋಗಗಳು ಕಾರಣ. 1990ರಲ್ಲಿದ್ದ ಶೇಕಡವಾರು 37.9% ಸಾವಿನ ಸಂಖ್ಯೆ 2016ರ ಅಂಕಿ–ಅಂಶಗಳ ಪ್ರಕಾರ 61.8%ಕ್ಕೆ ಏರಿಕೆಯಾಗಿದೆ. ಹಾಗಿದ್ದರೆ ಇಂಥ ಸಾವು–ನೋವುಗಳಿಗೆ ಏನು ಕಾರಣ ಮತ್ತು ಹೇಗೆ ತಡೆಗಟ್ಟಬಹುದು ಎಂಬುದನ್ನು ತಿಳಿದುಕೊಳ್ಳಬೇಕಾದ್ದು ಅತ್ಯಂತ ಅವಶ್ಯ ಮಾತ್ರವಲ್ಲ ಅನಿವಾರ್ಯ ಸಂಗತಿಯಾಗಿದೆ.

ಅಸಾಂಕ್ರಾಮಿಕ ರೋಗಗಳು: ಇಂದು ಮಾನವಕುಲವನ್ನು ಹೆಚ್ಚಾಗಿ ಬಾಧಿಸುತ್ತಿರುವವು, ಅಧಿಕ ಸಾವು–ನೋವುಗಳಿಗೆ ಕಾರಣವಾಗಿರುವವು ಈ ಅಸಾಂಕ್ರಾಮಿಕ ಅಥವಾ ಸಾಂಕ್ರಾಮಿಕೇತರ ರೋಗಗಳೇ ಆಗಿವೆ. ಮಧುಮೇಹ (Diabetes), ಅಧಿಕ ರಕ್ತದೊತ್ತಡ (Hypertension), ಹೃದ್ರೋಗಗಳು (Heart diseases), ಅರ್ಬುದವ್ಯಾಧಿಗಳು (Cancers), ದೀರ್ಘಕಾಲಿಕ ಶ್ವಾಸಕೋಶ ವ್ಯಾಧಿಗಳು ಈ ನಾಲ್ಕು ಪ್ರಮುಖ ಅಸಾಂಕ್ರಾಮಿಕ ರೋಗಗಳು ಹಿಂದೆ ಹೆಚ್ಚು ವಯಸ್ಸಾದವರಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದುವು. ಆದರೆ ಈಗ ಆಧುನಿಕ, ಅಸಹಜ ಜೀವನ ಶೈಲಿಯಿಂದ ವಯೋಭೇದ, ಲಿಂಗಭೇದ, ಸಾಮಾಜಿಕ ಅಂತಸ್ತಿನ ಭೇದ ಇಲ್ಲದೆ ಎಲ್ಲರಲ್ಲೂ ಕಂಡುಬರುತ್ತಿವೆ. ಈ ಮಾರಕವಾದಂತಹ ರೋಗಗಳಿಗೆ ಹಲವು ಕಾರಣಗಳಿವೆ.

●ಆಹಾರ ಪದ್ಧತಿಗಳು ●ಶ್ರಮರಹಿತ ಜೀವನಶೈಲಿ ●ತಂಬಾಕು ಸೇವನೆ ●ಜೊತೆಗೆ ಅತೀ ರಕ್ತದೊತ್ತಡ ●ಅತೀ ಕೊಲೆಸ್ಟೆರಾಲ್ ●ಅತೀವ ಸಕ್ಕರೆ ಅಂಶ ●ಜೊತೆಗೆ ಆನುವಂಶಿಕತೆ .

ಅಸಾಂಕ್ರಾಮಿಕ (ಸಾಂಕ್ರಾಮಿಕವಲ್ಲದ) ರೋಗಗಳ ವ್ಯಾಪ್ತಿ: ಇಂತಹ ಅಸಾಂಕ್ರಾಮಿಕ ರೋಗಗಳು ಯಾವುದೇ ದೇಶಕ್ಕೆ ಅಥವಾ ಖಂಡಕ್ಕೆ ಸೀಮಿತವಲ್ಲ. ಮಧುಮೇಹ, ಅಧಿಕ ರಕ್ತದೊತ್ತಡ, ಹೃದ್ರೋಗ, ಕ್ಯಾನ್ಸರ್ ಇವು ಎಲ್ಲ ದೇಶದ ಜನರನ್ನೂ ಬಾಧಿಸುತ್ತಿವೆ. ಆದರೂ ಏಷಿಯಾದ ಜನರನ್ನು ಇವು ಹೆಚ್ಚಾಗಿ ಕಾಡುತ್ತಿವೆ. ಅದರಲ್ಲೂ ಮಕ್ಕಳು, ಯುವಕರಲ್ಲಿ ಇವು ಹೆಚ್ಚಾಗಿ ಕಂಡುಬರುತ್ತಿರುವುದರಿಂದ ಕೆಲವೇ ವರ್ಷಗಳಲ್ಲಿ ಭಾರತದೇಶ ಅಸಾಂಕ್ರಾಮಿಕ ರೋಗಗಳ ರಾಜಧಾನಿಯಾಗಬಹುದು. ಎಷ್ಟು ಜನರು ಈ ರೋಗಗಳಿಗೆ ಚಿಕಿತ್ಸೆ ಪಡೆಯುತ್ತಿರುವರೋ ಅದರ ಎರಡು ಪಟ್ಟು ಜನರು ಅದರ ಬಗೆಗೆ ಅರಿವಿಲ್ಲದೆ ಇದ್ದು, ರೋಗ ಉಲ್ಬಣಿಸಿದ ಮೇಲೆ ಚಿಕಿತ್ಸೆಗೆ ಮುಂದಾಗುತ್ತಾರೆ. ಆಗ ಕಾಲ ಮೀರಿರುವುದರಿಂದ ಅಸಹನೀಯವಾದ ಪರಿಣಾಮಗಳನ್ನು ಎದುರಿಸುವ ದಯನೀಯ ಪರಿಸ್ಥಿತಿಗೆ ಗುರಿಯಾಗುತ್ತಿದ್ದಾರೆ. ನಿಯಂತ್ರಣವಿಲ್ಲದ ಮಧುಮೇಹದಿಂದ ಸೋಂಕುಗಳು ವಿಪರೀತವಾಗಿದ್ದಾಗ ಶಸ್ತ್ರ ಚಿಕಿತ್ಸೆ ಮೂಲಕ ಪಾದಗಳನ್ನು ಕತ್ತರಿಸುವುದು, ಮೂತ್ರಪಿಂಡಗಳ ವೈಫಲ್ಯದಿಂದ ಡಯಾಲಿಸಿಸ್, ಕಣ್ಣಿನ ಶಕ್ತಿ ಕುಂದುವುದರಿಂದ ಕುರುಡುತನ ಮುಂತಾದ ಗಂಡಾಂತರ ಪರಿಸ್ಥಿತಿ ಎದುರಾಗಬಹುದು. ಇಂತಹ ಸ್ಥಿತಿಯಲ್ಲಿ ಆರ್ಥಿಕ ಹೊರೆಯೂ ಹೆಚ್ಚಾಗಿ ಬದುಕು ದುರ್ಬರವಾಗುತ್ತದೆ. ಅಮೆರಿಕ ಮುಂತಾದ ದೇಶಗಳಲ್ಲಿ ವೈದ್ಯಕೀಯ ಸೇವೆಗಳ ವೆಚ್ಚ ಅತೀ ಹೆಚ್ಚಾಗಿರುವುದರಿಂದ ಅನೇಕ ರೋಗಿಗಳ ಕುಟುಂಬಗಳು ದಿವಾಳಿ ಆಗಿವೆ ಮುಂದೆಯೂ ಆಗುವ ಸಂಭವವಿದೆ. ಹೀಗೆ ಅಸಾಂಕ್ರಾಮಿಕ ರೋಗಗಳು ವಿಶ್ವ ವ್ಯಾಪಿಯಾಗಿವೆ. ಇದು ನನ್ನ 55 ವರ್ಷಗಳ ವೈದ್ಯಕೀಯ ಸೇವಾ ಅನುಭವದ ಮಾತು.


ಅಸಾಂಕ್ರಾಮಿಕ ರೋಗಗಳಿಂದಾಗುವ ಹಾನಿ: ಅಸಾಂಕ್ರಾಮಿಕ ರೋಗಗಳು ಶರೀರದಲ್ಲಿ ಕಂಡು ಬಂದ ಮೇಲೆ ಅವುಗಳ ನಿವಾರಣೆ ಅಥವಾ ಶಮನ ಅತಿಕಷ್ಟ. ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯದ ಕಾಯಿಲೆಗಳು ಒಂದನ್ನೊಂದು ಅನುಸರಿಸಿಕೊಂಡು ಪ್ರಾಣಕ್ಕೇ ಕುತ್ತು ತರುತ್ತವೆ. ವ್ಯಕ್ತಿಗಳು ಶರೀರದ, ಇಂದ್ರಿಯಗಳ ಮತ್ತು ಬುದ್ಧಿಯ ದೌರ್ಬಲ್ಯಗಳಿಗೀಡಾಗಿ ಅನುತ್ಪಾದಕರೂ ಆಗಿಬಿಡಬಹುದು. ರೋಗಿಯ ನೋವನ್ನು ತಗ್ಗಿಸುವುದಕ್ಕೆ ಮತ್ತು ಚಿಕಿತ್ಸೆಗೆ ಹಲವರ ನೆರವು ಬೇಕಾಗಬಹುದು. ಇಂತಹ ರೋಗಗಳ ಸಂಖ್ಯೆ ಹೆಚ್ಚಾದಾಗ ಇಡೀ ರಾಷ್ಟ್ರಕ್ಕೆ ಆರ್ಥಿಕ ಹಾನಿ ಜೊತೆಗೆ ಮಾನವ ಸಂಪನ್ಮೂಲ ಹಾನಿಯೂ ಕೆಲವೊಮ್ಮೆ ಅತ್ಯಧಿಕವಾಗಿರುತ್ತದೆ.

ಅಸಾಂಕ್ರಾಮಿಕ ರೋಗಗಳ ಕಾರಣಗಳು: ಅಸಾಂಕ್ರಾಮಿಕ ರೋಗಗಳು ಇಪ್ಪತ್ತನೆಯ ಶತಮಾನದಲ್ಲಿ ಹೆಚ್ಚಾಗಿ ಕಂಡು ಬಂದವು. ಇಪ್ಪತ್ತೊಂದನೆಯ ಶತಮಾನದಲ್ಲಿ ಮಿತಿಮೀರಿವೆ. ಇದಕ್ಕೆ ಒಂದು ದೃಷ್ಟಿಯಿಂದ ಮಾನವನ ಸ್ವಯಂಕೃತಾಪರಾಧ. ಸುಖಸಾಧನಗಳನ್ನೂ, ವಾಹನಗಳನ್ನೂ ಬಳಸಿ, ಬೆವರು ಸುರಿಸಿ, ದೈಹಿಕ ಶ್ರಮವನ್ನು ಮಾಡುವುದನ್ನು ಮನುಷ್ಯ ಇಂದು ಮರೆತಿದ್ದಾನೆ. ರುಚಿಯಾದ ಆಹಾರಕ್ಕೆ ಮಾರುಹೋಗಿ ಸಕ್ಕರೆ, ಉಪ್ಪು, ಕೊಬ್ಬಿನಾಂಶ ಇರುವ ಆಹಾರ ಪದಾರ್ಥಗಳನ್ನು ಅತಿಯಾಗಿ ಸೇವಿಸುತ್ತಾನೆ. ಮೇಲಾಗಿ ಮಹಾಸೋಮಾರಿಯಾಗಿದ್ದಾನೆ. ಇದು ಅಸಾಂಕ್ರಾಮಿಕ ರೋಗಕ್ಕೆ ಆಹ್ವಾನ ನೀಡಿದಂತಾಗಿದೆ. ಮನುಷ್ಯನು ರೂಢಿಸಿಕೊಂಡಿರುವ ದೊಡ್ಡ ಶತ್ರು ಎಂದರೆ ತಂಬಾಕು ಅಥವಾ ಹೊಗೆಸೊಪ್ಪು. ಇದು ಹಲವು ವಿಧದ ಕ್ಯಾನ್ಸರುಗಳಿಗೆ ಮೂಲಕಾರಣ. ಪ್ರಪಂಚದಲ್ಲೆಲ್ಲಾ ತಂಬಾಕು ಬೆಳೆಯನ್ನು ಪೂರ್ಣವಾಗಿ ನಿಷೇಧಿಸಿದರೆ, ಔಷಧಗಳಿಗೆ ಮತ್ತು ಆಸ್ಪತ್ರೆಗಳಿಗೆ ಮಾಡುತ್ತಿರುವ ವೆಚ್ಚವನ್ನು ತಗ್ಗಿಸಬಹುದು. ಜನರು ತಿಳಿದಿರಲಿ; ಬೀದಿಗಳಲ್ಲಿ ಮಾರುವ ದಿಢೀರ್ ಆಹಾರಗಳು(Fast food) ಅನೇಕ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳ ಮೂಲವಾಗಿವೆ. ರೈತರು ಹೊಲಗದ್ದೆಗಳಲ್ಲಿ ಅತಿಯಾಗಿ ಬಳಸುವ ಕೀಟನಾಶಕಗಳ ವಿಷವು ಆಹಾರ ಧಾನ್ಯಗಳಲ್ಲಿ ಮತ್ತು ಹಣ್ಣು–ತರಕಾರಿಗಳಲ್ಲಿ ಸೇರುವುದೂ ಈ ರೋಗಗಳ ಹಾವಳಿಗೆ ಒಂದು ಕಾರಣವಾಗಿದೆ. ಆಧುನಿಕ ವೈಜ್ಞಾನಿಕ ಸಾಧನಗಳಾದ ಟಿವಿ, ಮೊಬೈಲ್, ಕಂಪ್ಯೂಟರ್‌ಗಳೂ ಕೂತು ಕಾಲ ಕಳೆಯಲು ಪ್ರೇರೇಪಿಸುವುದರಿಂದ ಅಸಾಂಕ್ರಾಮಿಕ ರೋಗಗಳ ಹೆಚ್ಚಳಕ್ಕೆ ಕಾರಣವಾಗಿವೆ. ಒಂದು ವೈಜ್ಞಾನಿಕ ಸಮೀಕ್ಷೆಯ ಪ್ರಕಾರ, ವಾರಕ್ಕೆ ಒಂದೇ ಸಲ 1 ಗಂಟೆ ಟಿವಿ ನೋಡುವುದರಿಂದ, ಎರಡರಿಂದ ಹತ್ತು ಗಂಟೆ ಟಿ.ವಿ. ನೋಡುವವರಿಗೆ ಹೋಲಿಕೆ ಮಾಡಿದರೆ, ಮಧುಮೇಹ ಸಂಭವಿಸುವುದು 1.66ರಷ್ಟು ಕಡಿಮೆ. (ಆಧಾರ: Hu et al: Arch inter Med 2001 : 161 : 1542-1548 - ಮನುಕುಲದ ಅಗೋಚರ ಶತ್ರು ಮಧುಮೇಹ).

ಯುವ ಜನಾಂಗ, ಸಾಂಕ್ರಾಮಿಕವಲ್ಲದ ರೋಗಗಳನ್ನು ನಿಯಂತ್ರಿಸುವ ಪ್ರಯತ್ನದಲ್ಲಿ ಪ್ರಮುಖ ಸಾಧನವಾಗುವುದರಲ್ಲಿ ಎರಡು ಮಾತಿಲ್ಲ. ಏಕೆಂದರೆ, ತಾರುಣ್ಯವೆಂಬುದು ಮಿದುಳು ಬೆಳೆಯುತ್ತಿರುವ ಮತ್ತು ಅಭ್ಯಾಸಗಳು ಪ್ರಾರಂಭವಾಗುವ ವಯಸ್ಸು. ಈ ವಯಸ್ಸಿನಲ್ಲಿ ಅಳವಡಿಸಿಕೊಳ್ಳುವ ಉತ್ತಮ, ಅಹಿತಕರ ಅಭ್ಯಾಸಗಳು ಮುಂದೆ ವಯಸ್ಕರಲ್ಲಿ ನಿರಂತರವಾಗುವುದು ಸಂಭವನೀಯ. ಹದಿಹರೆಯದಲ್ಲೇ ಕೆಟ್ಟದ್ದನ್ನು ತಡೆಗಟ್ಟದಿದ್ದರೆ ಬೇರುಬಿಟ್ಟ ದುರಭ್ಯಾಸಗಳನ್ನು ಆಮೇಲೆ ಬದಲಾಯಿಸುವುದು ತುಂಬ ಕಷ್ಟ ಏಕೆಂದರೆ ಅವು ಅವಿಭಾಜ್ಯ ಜೀವನ ಶೈಲಿಯೇ ಆಗಿಬಿಡುತ್ತವೆ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ 2022ರ ಅಂಕಿ–ಅಂಶಗಳ ಪ್ರಕಾರ ನಮ್ಮ ಜನಸಂಖ್ಯೆಯಲ್ಲಿ ಸುಮಾರು ಅರ್ಧಭಾಗ ಯುವ ಜನಾಂಗವಿದೆ. ಇದು ಸಂತೋಷದ ಸಂಗತಿಯಾದರೂ ಅದು ಸದ್ವಿನಿಯೋಗವಾಗುತ್ತಿಲ್ಲವಲ್ಲ ಎಂಬುದು ಅತ್ಯಂತ ಖೇದಕರ ಸಂಗತಿ.

ದೇಶದ ಸಿರಿವಂತ ಉದ್ಯಮಿ ಗೌತಮ್ ಅದಾನಿ ಮೊಮ್ಮಗಳು 'ಕಾವೇರಿ'

ಕಂದನ ಕಂಗಳಿಗೆ ಹೋಲಿಸಿದರೆ ವಿಶ್ವದ ಸಂಪತ್ತೆಲ್ಲಾ ಶೂನ್ಯವಂತೆ



ಭಾರತದಲ್ಲಿ ಸಾವಿರಾರು ಜೀವನದಿಗಳಿವೆ. ಆದರೆ, ಉತ್ತರಕ್ಕೆ ಗಂಗಾ, ದಕ್ಷಿಣಕ್ಕೆ ಕಾವೇರಿ ಶ್ರೇಷ್ಠ ಹಾಗೂ ಜೀವನದಿಯೆಂದೇ ಜನಜನಿತ. ಅವುಗಳ ಪೂರ್ವೇತಿಹಾಸ ಅವಲೋಕಿಸಿದರೆ ಮನದಟ್ಟಾಗುತ್ತದೆ. ಉತ್ತರ ಭಾರತದ ಬಹಳಷ್ಟು ಜನರು ತಮ್ಮ ಮಕ್ಕಳಿಗೆ 'ಗಂಗಾ' ಎಂದು ಹೆಸರಿಡುವುದು ಸರ್ವೇಸಾಮಾನ್ಯ. ಹಾಗೆಯೇ ದಕ್ಷಿಣ ಭಾರತದಲ್ಲಿ ಪವಿತ್ರ ನದಿ 'ಕಾವೇರಿ' ಕೋಟ್ಯಾಂತರ ಜನರ ಆರಾಧ್ಯಳು. ಹಾಗಾಗಿ ಬಹಳ ಮಂದಿ ತಮ್ಮ ಮಕ್ಕಳಿಗೆ ಈ ಪವಿತ್ರ ನದಿಯ ಹೆಸರು ನಾಮಕರಣ ಮಾಡುವುದುಂಟು. ಅಚ್ಚರಿ ಸಂಗತಿ ಎಂದರೆ; ವಿಶ್ವದ ಅಗ್ರಮಾನ್ಯ ಶ್ರೀಮಂತರಲ್ಲಿ ಒಬ್ಬರಾದ ಗುಜರಾತ್ ಮೂಲದ ಹೆಸರಾಂತ ಉದ್ಯಮಿ ಗೌತಮ್ ಅದಾನಿ ತಮ್ಮ ಮೊಮ್ಮಗಳಿಗೆ 'ಕಾವೇರಿ' ಎಂದು ಹೆಸರಿಟ್ಟಿದ್ದಾರೆ. ತಮ್ಮ ಮುದ್ದಿನ ಮೊಮ್ಮಗಳು ಕಾವೇರಿ ಉಲ್ಲೇಖಿಸಿ ಗೌತಮ್ ಅದಾನಿ ಆಡಿರುವ ಮನದಾಳದ ಮಾತೊಂದು ತೀವ್ರ ಕುತೂಹಲ ಮೂಡಿಸಿದೆ. ಪವಿತ್ರ ಕಾವೇರಿ ನದಿ ಕೋಟ್ಯಾಂತರ ಜನರಿಗೆ ಜೀವಸೆಲೆಯಾಗಿದೆ. ಕಾವೇರಿ ನದಿ ಪಾವಿತ್ರ್ಯತೆ ಸಾರುವ ಅದೆಷ್ಟೋ ಪೌರಾಣಿಕ ಹಿನ್ನೆಲೆ ಇದೆ. ಪ್ರಾಯಶಃ ಇದರ ಮಹತ್ವ ಅರಿತೆ ಗೌತಮ್ ಅದಾನಿ ತಮ್ಮ ಮೊಮ್ಮಗಳಿಗೆ 'ಕಾವೇರಿ' ಹೆಸರು ನಾಮಕರಣ ಮಾಡಿರಬಹುದು.

ಸಿರಿವಂತ ಗೌತಮ್ ಅದಾನಿ ಕಿರಿಯ ಪುತ್ರ ಕರಣ್ ಅದಾನಿ ಹಾಗೂ ಪರಧಿ ದಂಪತಿ ಪುತ್ರಿ ಹೆಸರು ಕಾವೇರಿ. ಈಕೆಗೆ ಈಗ 14 ತಿಂಗಳು. ಕಾವೇರಿ ಕಂಡರೆ ಗೌತಮ್ ಅದಾನಿಗೆ ಅದೇನೋ ವಿಶೇಷ ಪ್ರೀತಿ. ವ್ಯವಹಾರದ ಬಹಳಷ್ಟು ಒತ್ತಡದ ನಡುವೆ ಮೊಮ್ಮಗಳು ಕಾವೇರಿ ಜೊತೆ ಕೆಲ ಸಮಯ ಕಳೆದರೆ ಮಾನಸಿಕವಾಗಿ ನಿರಾಳರಾಗುತ್ತಾರೆ. ಈ ಅನುಭವವನ್ನು ಗೌತಮ್ ಅದಾನಿ ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

"ಇನ್ ಆಂಖೋಂ ಕಿ ಚಮಕ್ ಕೆ ಆಗೇ ದುನಿಯಾ ಕಿ ಸಾರಿ ದೌಲತ್ ಫೀಕಿ ಹೈ" (ಈ ಕಣ್ಣುಗಳ ಹೊಳಪಿಗೆ ಹೋಲಿಸಿದರೆ ಪ್ರಪಂಚದ ಎಲ್ಲಾ ಸಂಪತ್ತು ಮಸುಕಾಗುತ್ತದೆ) ಎಂದು ಹಿಂದಿಯಲ್ಲಿ ತಮ್ಮ ಮನದಾಳದ ಮಾತು ಹೇಳಿದ್ದಾರೆ.

ಸೋಲಾರ್ ಎನರ್ಜಿ, ಪೆಟ್ರೋಲಿಯಂ, ಬಂದರು, ಮಾಧ್ಯಮ ಸೇರಿದಂತೆ ಲಕ್ಷಾಂತರ ಕೋಟಿ ವ್ಯವಹಾರ ನಡೆಸುವ ಗೌತಮ್ ಅದಾನಿಗೆ ಸಹಜವಾಗಿಯೇ ಒತ್ತಡ ಇರುತ್ತದೆ. ಇಂತಹ ಸಮಯದಲ್ಲಿ ನನ್ನ ಮೊಮ್ಮಗಳು ಕಾವೇರಿ ಕಣ್ಣು ನೋಡಿದರೆ ಎಲ್ಲಾ ಸಂಪತ್ತು ಮಸುಕಾಗುತ್ತದೆ. ಈ ಮೂಲಕ ನನ್ನ ಜೀವನದಲ್ಲಿ ನನ್ನ ಮೊಮ್ಮಗಳು ಕಾವೇರಿ ಅತೀ ದೊಡ್ಡ ಒತ್ತಡ ನಿವಾರಕಳು ಎಂದು ಹೇಳಿದ್ದಾರೆ.

ಲಂಡನ್‌ನ ಸೈನ್ಸ್ ಮ್ಯೂಸಿಯಂನಲ್ಲಿರುವ ಹೊಸ ಅದಾನಿ ಗ್ರೀನ್ ಎನರ್ಜಿ ಗ್ಯಾಲರಿಯಲ್ಲಿ ತಮ್ಮ ಮೊಮ್ಮಗಳೊಂದಿಗಿರುವ ಫೋಟೋವನ್ನು ಗೌತಮ್ ಅದಾನಿ ಹಂಚಿಕೊಂಡಿದ್ದಾರೆ. ನನಗೆ ಎರಡು ಪ್ರಪಂಚಗಳಿವೆ. ಒಂದು ಕೆಲಸ, ಮತ್ತೊಂದು ಕುಟುಂಬ. ನನಗೆ ಕುಟುಂಬವು ಶಕ್ತಿಯ ದೊಡ್ಡ ಮೂಲವಾಗಿದೆ ಎಂದು ಗೌತಮ್ ಅದಾನಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

–ಬಾಪುಲಿಂಗರಾಜೇ ಅರಸ್


ಮಕ್ಕಳ ಚಿತ್ರಕಥೆ

ನೀನೇಕೆ ನನ್ನ ಅಪ್ಪನಾದೆ...?

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಶಾಲೆಯೊಂದರ ಕಾವಲುಗಾರನಾದ ಆ ತಂದೆಗೆ ಒಂದೇ ಕಣ್ಣು. ಉಚಿತ ವಿದ್ಯಾರ್ಥಿ ವೇತನದಿಂದ ಆತನ ಮಗ ಅದೇ ಶಾಲೆಯಲ್ಲಿ ಓದುತ್ತಿದ್ದ. ಶಾಲೆಯಲ್ಲಿ ಬೇರೆ ವಿದ್ಯಾರ್ಥಿಗಳು ಆತನ ಮಗನನ್ನು "ಒಕ್ಕಣ್ಣನ ಮಗ ಮುಕ್ಕಣ್ಣ" ಎಂದೆಲ್ಲಾ ರೇಗಿಸುತ್ತಿದ್ದರು.




ಹುಡುಗ ಚಿಕ್ಕವನಿದ್ದಾಗ ಅತ್ತು ಸುಮ್ಮನಾಗುತ್ತಿದ್ದ. ಪ್ರೌಢಶಾಲೆಗೆ ಬಂದ ಮೇಲೆ, "ನಿನ್ನಿಂದಾಗಿ ಎಲ್ಲರೂ ನನ್ನನ್ನು ರೇಗಿಸುತ್ತಾರೆ..!" ಎಂದು ಅಪ್ಪನನ್ನು ದೂಷಿಸುತಿದ್ದ. ಪದವಿ ತರಗತಿಗೆ ಬಂದ ಮೇಲೆ "ನೀನೇಕೆ ನನ್ನ ಅಪ್ಪನಾದೆ...? ಒಕ್ಕಣ್ಣನ ಮಗನಾದದ್ದು ನನ್ನ ಗ್ರಹಚಾರ..!" ಎಂದು ಹೀಯಾಳಿಸುತ್ತಿದ್ದ.



ಒಮ್ಮೆ ಗೆಳೆಯರು ಅವನನ್ನು ತುಂಬಾ ಪೀಡಿಸಿದರು. ರಾತ್ರಿ ಮನೆಗೆ ಹೋಗಿ "ನಿನ್ನಿಂದಾಗಿ, ನಿನ್ನ ಒಕ್ಕಣ್ಣಿನಿಂದಾಗಿ, ನನ್ನ ಇಡೀ ಬಾಲ್ಯ ಹಾಳಾಯಿತು....ಈಗಲೂ ಅದೇ ಗೋಳು....ಅದಕ್ಕೆ ಕೊನೆ ಇಲ್ಲವೇ...?" ಎಂದೆಲ್ಲಾ ರೇಗಾಡಿದ.



ಬೆಳಿಗ್ಗೆ ಎದ್ದು ನೋಡಿದ, ಅಪ್ಪ ಮನೆಯಲ್ಲಿ ಇರಲಿಲ್ಲ. ಅವನು ಬರೆದಿಟ್ಟುಹೋಗಿದ್ದ ಕಾಗದವನ್ನು ತೆಗೆದುನೋಡಿದಾಗ ಹೀಗೆ ಬರೆದಿತ್ತು, "ಮಗ, ನನ್ನ ಒಕ್ಕಣ್ಣಿನಿಂದಾಗಿ ನೀನು ತುಂಬಾ ಅವಹೇಳನಕ್ಕೆ ಈಡಾಗಬೇಕಾಯಿತು. ನಿನಗೆ ಯಾರೂ ಹೀಗಳೆಯಬಾರದೆಂದು ನಾನು ಬಹು ದೂರ ಹೊರಟು ಹೋಗುತ್ತಿದ್ದೇನೆ.....ಇನ್ನೆಂದೂ ನಿನಗೆ ಕಾಣಿಸಿಕೊಳ್ಳುವುದಿಲ್ಲ... ಹೋಗುವ ಮುನ್ನ ಒಂದು ಮಾತು..!"



"ನಾನು ಒಕ್ಕಣ್ಣ ಹೇಗಾದೆ...? ಎಂದು ನೀನು ಎಂದೂ ಕೇಳಲಿಲ್ಲ. ನೀನು ಎರಡು ವರ್ಷ ಚಿಕ್ಕವನಿದ್ದಾಗ ಕೈಗೆ ಸಿಕ್ಕ ಪೆನ್ಸಿಲ್‌ನೊಂದಿಗೆ ಆಟವಾಡುತ್ತಾ... ನಿನ್ನ ಕಣ್ಣನ್ನು ನೀನೆ ಚುಚ್ಚಿಕೊಂಡೆ...ರಕ್ತ ಸುರಿಯಿತು. ವೈದ್ಯರ ಬಳಿ ಕರೆದುಕೊಂಡು ಹೋದೆವು...ವೈದ್ಯರು ಆ ಕಣ್ಣು ಸಂಪೂರ್ಣ ಹಾಳಾಗಿದೆ ಎಂದರು...ನೀನು ಒಕ್ಕಣ್ಣನಾಗಿಯೇ ಬದುಕ ಬೇಕಾಗಬಹುದೆಂದು ಹೇಳಿದರು."



ನಮಗೆಲ್ಲಾ ತುಂಬಾ ದುಃಖವಾಯಿತು. ಇದಕ್ಕೆ ಪರಿಹಾರವಿಲ್ಲವೇ...? ಎಂದು ವೈದ್ಯರನ್ನು ಕೇಳಿದಾಗ..ಯಾರಾದರೂ ಕಣ್ಣು ದಾನ ಮಾಡಿದರೆ ಆಗಬಹುದೆಂದು ಹೇಳಿದರು. ಆಗ ನನ್ನ ಒಂದು ಕಣ್ಣನ್ನು ತೆಗೆದು ನಿನಗೆ ಜೋಡಿಸಲಾಯಿತು. ಇಂತಿ, ನಿನ್ನ ಅಪ್ಪ..!". ಈ ಪತ್ರವನ್ನು ಓದಿದ ಯುವಕನಿಗೆ ಕಣ್ಣೀರು ಬಂತು. ಆದರೆ ಅಪ್ಪ ದೂರ ಹೋಗಿಬಿಟ್ಟಿದ್ದ.

ಚುನಾವಣೆಯಲ್ಲಿ ಬಿಜೆಪಿ ಸೋಲಿಸಿ, ಪ್ರಜಾಪ್ರಭುತ್ವ ಗೆಲ್ಲಿಸಿ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮನವಿ



ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ಸುನೀಲ್ ಬೋಸ್ ಗೆಲ್ಲಿಸಿಕೊಡಿ: ಹೆಚ್‌ಸಿಎಂ

2008 ರಿಂದಲೂ ಸುನೀಲ್ ಬೋಸ್ ನಮ್ಮೊಂದಿಗೆ ಕೆಲಸ ಮಾಡುತ್ತಾ ನಿಮ್ಮ ಪ್ರೀತಿ ವಿಶ್ವಾಸ ಗಳಿಸಿದ್ದಾನೆ. ಆತ ಎಂಎಲ್‌ಸಿ, ಎಂಪಿ ಆಗಬೇಕೆಂಬ ಹೋರಾಟ ಕ್ಷೇತ್ರದ ಜನತೆಯದ್ದಾಗಿತ್ತು. ಈ ಹಿಂದೆ ಆತನಿಗೆ ಪಕ್ಷದ ಟಿಕೆಟ್ ಸಿಗದೇ ಹೋದರೂ ಪ್ರಾಮಾಣಿಕವಾಗಿ ಪಕ್ಷದ ಕೆಲಸ ಮಾಡಿದ್ದಾನೆ. ಕ್ಷೇತ್ರದ ಜನತೆಯ ಕಷ್ಟ ಸುಖದಲ್ಲಿ ಭಾಗಿಯಾಗಿದ್ದಾನೆ. ಇದೀಗ ಪಕ್ಷದ ಹೈಕಮಾಂಡ್ ಟಿಕೆಟ್ ನೀಡಿದೆ. ಈ ಚುನಾವಣೆಯಲ್ಲಿ ನೀವೆಲ್ಲಾ ಎಚ್ಚರಿಕೆಯಿಂದ ಮತ ಮಾಡಬೇಕಿದೆ. ಬೇರೆ ಕಾರಣಕ್ಕೆ ದೂರಾಗಿದ್ದವರು ಮತ್ತೆ ಪಕ್ಷ ಸೇರ್ಪಡೆಯಾಗಿದ್ದಾರೆ. ಈಗ ನಮ್ಮ ಶಕ್ತಿ ಹೆಚ್ಚಾಗಬೇಕು. ನಮ್ಮ ನಮ್ಮಲ್ಲಿರುವ ಅನುಮಾನ ಬಿಟ್ಟು ನಾವೆಲ್ಲಾ ಮನೆಯ ಸದಸ್ಯರಂತೆ ಕೆಲಸ ಮಾಡಬೇಕು. ನನಗೆ ಕಳೆದ ಚುನಾವಣೆಯಲ್ಲಿ 18 ಸಾವಿರ ಮತಗಳ ಲೀಡ್ ಕೊಟ್ಟಿದ್ದೀರಾ. ಈ ಬಾರಿ ಬೋಸ್ ಗೆಲ್ಲಿಸುವ ಜವಾಬ್ದಾರಿ ನಿಮ್ಮ ಮೇಲಿದೆ. ನನಗಿಂತ ಹೆಚ್ಚಿನ ಮತಗಳನ್ನು ಕೊಟ್ಟು ಗೆಲ್ಲಿಸಿ ಕೊಡಬೇಕು ಎಂದ ಮಹದೇವಪ್ಪ ಬಿಜೆಪಿ ಸೋಲಬೇಕು, ಸಂವಿಧಾನ ಪ್ರಜಾಪ್ರಭುತ್ವ ಗೆಲ್ಲಬೇಕು, ಇವೆರಡೂ ಗೆಲ್ಲಬೇಕಾದರೆ ಕಾಂಗ್ರೆಸ್ ಪಕ್ಷ ಗೆಲ್ಲಲೇಬೇಕು, ಗೆಲ್ಲಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರ ಶ್ರಮ ಬಹು ಮುಖ್ಯ ಎಂದರು.

ತಿ.ನರಸೀಪುರ, ಏ.6– ಬಿಜೆಪಿ ಸರ್ಕಾರ ಯಾವುದೇ ಜನಪರ ಅಭಿವೃದ್ಧಿ ಕೆಲಸ ಮಾಡದೇ ಸುಳ್ಳು, ಮೋಸ, ವಂಚನೆಯಲ್ಲಿ ತೊಡಗಿದ್ದು, ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಸೋಲಿಸಿ, ಪ್ರಜಾಪ್ರಭುತ್ವ ಗೆಲ್ಲಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮನವಿ ಮಾಡಿದರು.

ತಾಲೂಕಿನ ಸೋಸಲೆ ಗ್ರಾಮದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ತಮ್ಮ ಪುತ್ರ, ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತಯಾಚಿಸಿ ಅವರು ಮಾತನಾಡಿದರು.

ಬಿಜೆಪಿಯವರಿಗೆ ಅಭಿವೃದ್ಧಿ ಬೇಕಿಲ್ಲ. ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಪ್ರಚಾರ ಮಾಡುವುದು, ಮನಸ್ಸುಗಳನ್ನು ಕೆಡಿಸುವುದು, ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡಿ ಅಧಿಕಾರ ಹಿಡಿಯಲು ಪ್ರಯತ್ನಿಸುತ್ತಿದ್ದಾರೆ. ಆದರೆ ನಮಗೆ ಜನರ ಭಾವನೆ ಮುಖ್ಯವಲ್ಲ. ಬದುಕು ಮುಖ್ಯ. ನಮ್ಮದು ಅಭಿವೃದ್ಧಿ ಪರವಾದ ಸರ್ಕಾರ. ಜನಗಳ ಶ್ರೇಯೋಭಿವೃದ್ಧಿಗೆ ಬೇಕಾದ ಜನೋಪಯೋಗಿ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಬಡವರ ಏಳಿಗೆಗೆ ಕೆಲಸ ಮಾಡುತ್ತಿದೆ ಎಂದರು.

ಬಿಜೆಪಿಯವರು ಕೆಲಸ ಮಾಡದೇ ಬರೀ ಮಾತನಾಡುತ್ತಿದ್ದಾರೆ. ಅಡುಗೆ ಅನಿಲ ಬೆಲೆ ಏರಿಕೆಯಾದಾಗ ರಾಜ್ಯದ ಸಂಸದರು ಮಾತನಾಡಲಿಲ್ಲ. 400 ರೂ. ಇದ್ದ ಗ್ಯಾಸ್ ಬೆಲೆಯನ್ನು 1 ಸಾವಿರ ರೂ.ಗಳಿಗೆ ಏರಿಕೆ ಮಾಡಿದರು. ಡಿಸೇಲ್ ಬೆಲೆ 100 ರೂ.ಗಳಾದ ಉದಾಹರಣೆ ಇಲ್ಲ. ಪೆಟ್ರೋಲ್ ಬೆಲೆ 108 ರೂ.ಗಳಾಗಿದೆ. ಕೋವಿಡ್ ಬಂದಾಗ ಜನರಿಗೆ ಔಷಧ ಇಲ್ಲ, ರಕ್ಷಣೆ ಇಲ್ಲ, ಅನ್ನ ಇಲ್ಲ, ಕೂಲಿ ಸಿಗಲಿಲ್ಲ, ಜನರಿಗೆ ನರಕಯಾತನೆ ಕೊಟ್ಟರು. ಈಗ ಲೋಕಸಭೆ ಚುನಾವಣೆಯಲ್ಲಿ ಗೆದ್ದರೆ ಜನರ ಅಭಿವೃದ್ಧಿ ಮಾಡುತ್ತೇವೆ ಎನ್ನುತ್ತಿಲ್ಲ. ಜನರ ಕಷ್ಟ ಪರಿಹಾರ ಮಾಡುತ್ತೇವೆ. ರೈತರಿಗೆ ಅನುಕೂಲ ಕಲ್ಪಿಸುತ್ತೇವೆ. ಮಹಿಳಾ ಸಬಲೀಕರಣ ಮಾಡುತ್ತೇವೆ ಎನ್ನುತ್ತಿಲ್ಲ ಬದಲಿಗೆ ಸಂವಿಧಾನ ಬದಲಾವಣೆ ಮಾಡುತ್ತೇವೆ ಎನ್ನುತ್ತಿದ್ದಾರೆ. ಸಂವಿಧಾನ ಬದಲಾದರೆ ನಾವೆಲ್ಲ ಮುಳುಗಿ ಹೋಗುತ್ತೇವೆ. ನಮ್ಮನ್ನ ಹೇಳೋರು ಕೇಳೋರು ಯಾರೂ ಇಲ್ಲದಂತಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

10 ತಿಂಗಳಿಗೆ 400 ಕೋಟಿ ಅನುದಾನ: ನನಗೆ ಅಧಿಕಾರ ದೊರೆತು 10 ತಿಂಗಳಷ್ಟೇ ಆಗಿದೆ. ಈಗಾಗಲೇ ಕ್ಷೇತ್ರದ ಅಭಿವೃದ್ಧಿಗೆ 400 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿದ್ದೇನೆ. ಪಿಡಬ್ಲ್ಯೂಡಿ ಹಾಗೂ ನೀರಾವರಿ ಇಲಾಖೆಯಿಂದ ತಲಾ 100 ಕೋಟಿ, ಸಮಾಜ ಕಲ್ಯಾಣ ಇಲಾಖೆಯಿಂದ 100 ಕೋಟಿ ಸೇರಿದಂತೆ ಇನ್ನಿತರೆ ಯೋಜನೆಗಳಿಗೆ ಹಣ ಬಿಡುಗಡೆ ಮಾಡಿಸುವ ಜೊತೆಗೆ 1 ಸಾವಿರ ಮನೆಗಳನ್ನು ಮಂಜೂರು ಮಾಡಿಸಿದ್ದೇನೆ ಎಂದರು.

ಸಭೆಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಮೈಮುಲ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಓಂಪ್ರಕಾಶ್, ಪಿಕಾರ್ಡ್ ಬ್ಯಾಂಕ್ ಸದಸ್ಯ ಮಹದೇವಸ್ವಾಮಿ, ಸದಸ್ಯ ಹೊನ್ನನಾಯಕ, ವಕೀಲರ ಸಂಘದ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಉಕ್ಕಲಗೆರೆ ಬಸವಣ್ಣ, ದೊಡ್ಡೇಬಾಗಿಲು ಮಲ್ಲಿಕಾರ್ಜುನಸ್ವಾಮಿ, ಸೋಸಲೆ ಪಿಎಸಿಎಸ್ ಅಧ್ಯಕ್ಷ ಪರಶಿವಮೂರ್ತಿ, ಡೈರಿ ಕಾರ್ಯದರ್ಶಿ ನಿಂಗಯ್ಯ, ಮಹದೇವಸ್ವಾಮಿ, ಪಪಂ ಮಾಜಿ ಅಧ್ಯಕ್ಷ ಬಸವಣ್ಣ, ಮಹದೇವಸ್ವಾಮಿ, ವಾಟಾಳು ನಾಗೇಶ್, ಗದ್ದೇವೊಳೆ ಸಿದ್ದರಾಜು, ಚಿನ್ನಸ್ವಾಮಿ, ಶಿವರಾಮು, ಗ್ರಾಪಂ ಅಧ್ಯಕ್ಷೆ ಚಾಂದಿನಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಜಿಪಂ ಮಾಜಿ ಸದಸ್ಯೆ ಸುಧಾ ಮಹದೇವಯ್ಯ, ತಲಕಾಡು ಮಂಜುನಾಥ್, ಗ್ರಾಪಂ ಮಾಜಿ ಅಧ್ಯಕ್ಷರಾದ ರಾಜೇಶ್, ವಾಟಾಳ್ ನಾಗೇಶ್, ತಾಪಂ ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ತಾಪಂ ಮಾಜಿ ಸದಸ್ಯ ಗಣೇಶ್, ರಂಗಸ್ವಾಮಿ, ಕೆಬ್ಬೇ ಶಿವಸ್ವಾಮಿ, ಕೊಳತ್ತೂರು ಕುಮಾರ್, ಕೆಪಿಸಿಸಿ ಸದಸ್ಯ ಸುಂದರ ನಾಯಕ, ಮೂಗೂರು ಸಾಗರ್ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
---	---
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಯುವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು
ಪ್ರಭಾ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಬೆ.8ಕ್ಕೆ, ಮ.3.50ಕ್ಕೆ, ಕುಂಗ್ ಫು ಪಾಂಡ 4 (3ಡಿ) (ಇಂ): ಬೆ.11.20ಕ್ಕೆ, ಕ್ರೂವ್ (ಹಿಂ): ಮ.1.20ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ದಿ ಫಸ್ಟ್ ಓಮನ್ (ಇಂ): ಬೆ.10.50ಕ್ಕೆ, ರಾ.10.05ಕ್ಕೆ, ಅವತಾರ ಪುರುಷ 2 (ಕ): ಮ.1.35ಕ್ಕೆ, ಸಂ.4.15ಕ್ಕೆ, ಆಡುಜೀವಿತಂ (ಮ): ಸಂ.6.50ಕ್ಕೆ.
ಸ್ಕ್ರೀನ್ 3	ಮ್ಯಾಟ್ನಿ (ಕ): ಬೆ.10.35ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.15ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಸಂ.4ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ರಾ.9.55ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಮ.1.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಅವತಾರ ಪುರುಷ 2 (ಕ): ಬೆ.9.35ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9.30ಕ್ಕೆ, ಮ.12.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಕ್ರೂವ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.55ಕ್ಕೆ, ಮಾರಿಗೋಲ್ಡ್ (ಕ): ಮ.1.20ಕ್ಕೆ, ಆಡುಜೀವಿತಂ (ಮ): ಸಂ.4.05ಕ್ಕೆ, ಅವತಾರ ಪುರುಷ 2 (ಕ): ರಾ.7.40ಕ್ಕೆ, ಮ್ಯಾಟ್ನಿ (ಕ): ರಾ.10.20ಕ್ಕೆ.
ಸ್ಕ್ರೀನ್ 4	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಬೆ.10.40ಕ್ಕೆ, ಸಂ.4.40ಕ್ಕೆ, ದಿ ಫಸ್ಟ್ ಓಮನ್ (ಇಂ): ಮ.1.15ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಹಿಂ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಏ.9ರಿಂದ ಶ್ರೀರಾಮನವಮಿ ಸಂಗೀತೋತ್ಸವ

ಹುಣಸೂರು, ಏ.6– ಹುಣಸೂರಿನ ಸಾಂಸ್ಕೃತಿಕ ಕೇಂದ್ರ ಟ್ರಸ್ಟ್ ಮತ್ತು ಶ್ರೀರಾಮನವಮಿ ಸಂಗೀತೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ನಗರದ ಎಸ್.ಜೆ.ರಸ್ತೆಯಲ್ಲಿರುವ ವಿಕ್ರಂ ವೇದಿಕೆಯಲ್ಲಿ ಏ.9ರಿಂದ 17ರವರೆಗೆ ಶ್ರೀರಾಮನವಮಿ ಸಂಗೀತೋತ್ಸವ ನಡೆಯಲಿದೆ.

ತಾಲೂಕಿನ ಮಾದಹಳ್ಳಿ ಉಕ್ಕಿನಕಂತೆ ಮಠದ ಶ್ರೀಸಾಂಬಸದಾಶಿವ ಸ್ವಾಮೀಜಿ, ಗಾವಡಗೆರೆಯ ಗುರುಜಂಗಮ ದೇವರ ಮಠದ ಶ್ರೀನಟರಾಜ ಸ್ವಾಮೀಜಿ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ರಾಜಯೋಗಿಣಿ ನಾಗಶ್ರೀಬೆಹೆನ್ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದ್ದು, ನಿತ್ಯ ಸಂಜೆ 6.30ರಿಂದ 10 ಗಂಟೆವರೆಗೆ ಸ್ಥಳೀಯ ಭಜನಾ ಮಂಡಳಿಗಳಿಂದ ಭಜನೆ, ನಂತರ ರಾಜ್ಯದ ವಿವಿಧೆಡೆಗಳಿಂದ ಆಗಮಿಸುವ ಪ್ರಸಿದ್ಧ ಗಾಯಕ, ಗಾಯಕಿಯರಿಂದ ಸುಗಮ ಸಂಗೀತ, ಭಕ್ತಿಗೀತೆಗಳು, ದಾಸರಪದಗಳು, ಶಿಶುನಾಳ ಷರೀಫರ ಗೀತೆಗಳು, ಭಾವಗೀತೆ, ಜಾಗಪದ ಗೀತೆಗಳು, ತಾಳ ವಾದ್ಯ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಏ.9 ರಂದು ಪ್ರಭುಸೋನು ಅವರ ನಿರ್ದೇಶನದಲ್ಲಿ ಸಾಂಸ್ಕೃತಿಕ ಕೇಂದ್ರದ ವಿದ್ಯಾರ್ಥಿಗಳಿಂದ ಭಕ್ತಿಗೀತೆಗಳು, ಏ.10 ರಂದು ಮೈಸೂರಿನ ವಿದ್ವಾನ್ ಶಿವಶಂಕರಸ್ವಾಮಿ ವೃಂದದಿಂದ ಲಯಲಹರಿ ತಾಳ ವಾದ್ಯ, ಏ.11ರಂದು ಸರಿಗಮಪ ಖ್ಯಾತಿಯ ಅಮೂಲ್ಯ ಮತ್ತು ಪುರುಷೋತ್ತಮ್, ಏ.12ರಂದು ಅಜಯ್ ವಾರಿಯರ್ ಮತ್ತು ವಿಂದ್ಯಾ ಸುರೇಶ್, ಏ.13ರಂದು ಸವಿತಾ ಗಣೇಶ್ ಪ್ರಸಾದ್ ಮತ್ತು ರಾಜೀವ್ ಅಗಳಿ, ಏ.14ರಂದು ಶಂಕರ್ ಶ್ಯಾನುಬೋಗ್ ಮತ್ತು ಕೆ.ಪಿ. ರೇವತಿ, ಏ.15ರಂದು ಶ್ರೀನಿವಾಸ್, ಶಶಿಧರ್, ಪ್ರಶಾಂತ್, ಭವ್ಯ, ದಿವಾಕರ್, ಏ.16ರಂದು ಸರಿಗಮಪ ವಿಜೇತ ಕೀರ್ತನ್ ಹೊಳ್ಳ ಮತ್ತು ಟಿ.ಸಿ ಸಿಂಚನ, ಏ.17ರಂದು ರವಿಶಂಕರ್, ಮಹೇಂದ್ರ, ಸೋಮು, ಶೃತಿ ಅವರಿಂದ ಗಾಯನ ಕಾರ್ಯಕ್ರಮ ನಡೆಯಲಿದೆ. ಅಲ್ಲದೇ ಏ.17ರಂದು ಶ್ರೀರಾಮನವಮಿ ಪ್ರಯುಕ್ತ ಬೆಳಗ್ಗೆ ಶ್ರೀಹರಿರಾವ್ ಅವರಿಂದ ರಾಮತಾರಕ ಹೋಮ ಮತ್ತು ರಾತ್ರಿ 8 ಗಂಟೆಗೆ ರಾವಣ ದಹನ ನಡೆಯಲಿದೆ. ಹೀಗಾಗಿ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ವಿ.ಎನ್.ದಾಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷೇತ್ರದ ಅಭಿವೃದ್ಧಿಗೆ ಕಾಂಗ್ರೆಸ್ ಬೆಂಬಲಿಸಿ: ಸುನೀಲ್ ಬೋಸ್

ಮಲ್ಕುಂಡಿ, ಏ.6– ಚಾಮರಾಜನಗರ ಲೋಕಸಭಾ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಕಾಂಗ್ರೆಸ್ ಬೆಂಬಲಿಸಿ ಎಂದು ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮನವಿ ಮಾಡಿದರು.



ಇಲ್ಲಿಗೆ ಸಮೀಪದ ಹುರ ಜಿಪಂ ವ್ಯಾಪ್ತಿಯ ಕಾಂಗ್ರೆಸ್ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ 10 ವರ್ಷಗಳಿಂದ ಕೇಂದ್ರದಲ್ಲಿ ಆಡಳಿತ ನಡೆಸಿದ ಮೋದಿ ನೇತೃತ್ವದ ಸರ್ಕಾರ ರಾಜ್ಯದ ಅಭಿವೃದ್ಧಿಗೆ ಯಾವುದೇ ಅನುದಾನ ನೀಡಿಲ್ಲ. ಕ್ಷೇತ್ರದ ಅಭಿವೃದ್ಧಿಗಾಗಿ ನಾನು ಕಾತುರದಿಂದ ಕಾಯುತ್ತಿದ್ದು, ಈ ಹಿಂದೆ 2 ಬಾರಿ ಸಂಸದರಾಗಿದ್ದ ದಿ.ಆರ್. ಧ್ರುವನಾರಾಯಣ್ ಅವರಿಗೆ ನೀಡಿದಂತೆ ನನಗೂ ಒಂದು ಅವಕಾಶ ಮಾಡಿಕೊಡಿ. ನಾನು ನಿಮ್ಮ ಮಗನಂತೆ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದ ಅವರು, ದೇಶದಲ್ಲಿ 75 ವರ್ಷಗಳ ಕಾಲ ಉತ್ತಮ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರ ದೇಶದ ಜನರ ಪರ ಕೆಲಸ ಮಾಡಿದೆ. ಆದರೆ ಬಿಜೆಪಿ ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದು ದೇಶವನ್ನು ಲೂಟಿ ಮಾಡಿ ಜನತೆಯನ್ನು ಸಾಲಗಾರರನ್ನಾಗಿ ಮಾಡಿ ಹೋಗಿದೆ ಎಂದು ಆರೋಪಿಸಿದ ಬೋಸ್, ಬಿಜೆಪಿಯ ಕೆಲ ಮುಖಂಡರು 400 ಸ್ಥಾನ ಗೆದ್ದರೇ ಸಂವಿಧಾನ ಬದಲಾವಣೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ಅವರಿಗೆ ಸಂವಿಧಾನದ ಬಗ್ಗೆ ಅರಿವಿಲ್ಲ. ಮೊದಲು ಸಂವಿಧಾನದ ಬಗ್ಗೆ ಅರಿವು ಪಡೆದು ಆ ನಂತರ ಸಂವಿಧಾನದ ಬಗ್ಗೆ ಮಾತನಾಡಲಿ. ಸಂವಿಧಾನ ಉಳಿಯಬೇಕಾದರೆ ಕಾಂಗ್ರೆಸ್ ಪಕ್ಷ ಬೆಂಬಲಿಸಿ ಎಂದು ಮನವಿ ಮಾಡಿದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಕಾಂಗ್ರೆಸ್ ಪಕ್ಷ ಬಡವರ, ದೀನ ದಲಿತರ ಉದ್ಧಾರಕ್ಕಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಹೀಗಾಗಿ ಅವರ ಕೈ ಬಲಪಡಿಸಲು ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸಿ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್, ಬ್ಲಾಕ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಶ್ರೀಕಂಠನಾಯಕ, ಸಿ.ಎಂ.ಶಂಕರ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ, ಜಿಪಂ ಮಾಜಿ ಅಧ್ಯಕ್ಷೆ ಲತಾ, ಗ್ರಾಪಂ ಅಧ್ಯಕ್ಷರಾದ ತಾಯಮ್ಮ, ದೇವಮ್ಮ, ಮುಖಂಡರಾದ ಶಂಕರಪ್ಪ, ದುಗ್ಗಹಳ್ಳಿ ಗ್ರಾಪಂ ಸದಸ್ಯ ಶಂಕರ್, ಶಿವಣ್ಣ, ಕೆಂಡಗಣ್ಣಪ್ಪ, ಜಯರಾಂ, ಶಿವಪ್ಪದೇವರು, ಗೋವಿಂದರಾಜು, ಇಂಧನಬಾಬು, ಶ್ರೀನಿವಾಸಮೂರ್ತಿ, ಮೂಗಶೆಟ್ಟಿ ಗ್ರಾಪಂ ಮಾಜಿ ಅಧ್ಯಕ್ಷ ಎಂ.ಶಿವಣ್ಣ ದೇವಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಜ್ಞಾನಧಾರ ಕಾಲೇಜಲ್ಲಿ ಮತದಾನ ಜಾಗೃತಿ ಕಾರ್ಯಕ್ರಮ

ಹುಣಸೂರು, ಏ.6– ವಿದ್ಯಾರ್ಥಿಗಳೇ ದೇಶದ ಭವಿಷ್ಯ. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ಮತ ಚಲಾಯಿಸುವ ಮೂಲಕ ದೇಶದ ಭವಿಷ್ಯ ಸುಭದ್ರಗೊಳಿಸಬೇಕಿದೆ ಎಂದು ಉಪವಿಭಾಗಾಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೇರ್ ಅಭಿಪ್ರಾಯಪಟ್ಟರು.



ತಾಲೂಕು ಸ್ವೀಪ್ ಸಮಿತಿ ಮತ್ತು ನಗರಸಭೆ ಸಂಯುಕ್ತಾಶ್ರಯದಲ್ಲಿ ನಗರದ ಜ್ಞಾನಧಾರ ಕಾಲೇಜಿನ ಸಭಾಂಗಣದಲ್ಲಿ ನಡೆದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯಕ್ಕಾಗಿ ಪ್ರತಿನಿತ್ಯ ಓದುವುದು ಎಷ್ಟು ಮುಖ್ಯವೋ, ಹಾಗೆಯೇ ಮುಂದಿನ 5 ವರ್ಷ ದೇಶದ ಭದ್ರತೆ ಅಷ್ಟೇ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಏ.26 ರಂದು ಕಡ್ಡಾಯವಾಗಿ ತಮ್ಮ ಹಕ್ಕನ್ನು ಚಲಾಯಿಸಿ ಎಂದು ತಿಳಿಸಿದರು.

ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಮತದಾರರಲ್ಲಿ ಜಾಗೃತಿ ಮೂಡಿಸಲು ಜಿಲ್ಲಾ ಸ್ವೀಪ್ ಸಮಿತಿಯಿಂದ ರೀಲ್ಸ್ ಮಾಡುವ ಅವಕಾಶ ಒದಗಿಸಲಾಗಿದ್ದು, ಸಾರ್ವಜನಿಕರು, ಮತದಾನದ ಮಹತ್ವ, ಪ್ರತಿ ವೋಟಿನ ಮೌಲ್ಯ, ನೈತಿಕ ಮತದಾನ ಮತ್ತು ಎಲ್ಲಾ ವರ್ಗಗಳನ್ನು ಪ್ರತಿಬಿಂಬಿಸುವಂತಹ ವೀಡಿಯೋಗಳನ್ನು, ಗರಿಷ್ಠ 40 ರಿಂದ 60 ಸೆಕೆಂಡ್ ಅವಧಿ ಒಳಗೆ ರೀಲ್ಸ್‌ಗಳನ್ನು ಮಾಡಿ sveepmysuru2018@gmail.com ಗೆ ಕಳುಹಿಸಲು ಏ.10ಕೊನೆ ದಿನ. ಉತ್ತಮ ಸಂದೇಶವುಳ್ಳ ಆಯ್ದ 3 ರೀಲ್ಸ್ ಮತ್ತು ವೀಡಿಯೋಗಳನ್ನು ರಚಿಸಿದವರಿಗೆ ಸೂಕ್ತ ಬಹುಮಾನ ವಿತರಿಸಲಾಗುವುದು ಎಂದರು.

ತಾಪಂ ಇಓ ಶಿವಕುಮಾರ್ ಮಾತನಾಡಿ, ಪ್ರಜಾಪ್ರಭುತ್ವದ ಮೌಲ್ಯ ಎತ್ತಿ ಹಿಡಿಯಬೇಕಾದರೆ ವಿದ್ಯಾರ್ಥಿಗಳು ವೋಟ್ ಹಾಕುವ ಮೂಲಕ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಅತ್ಯವಶ್ಯಕ ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಎಂ.ನಯನ, ತಾಪಂ ಮ್ಯಾನೇಜರ್ ಮಹೇಶ್ ನಾಯಕ್, ಪ್ರಭಾರ ಪ್ರಾಂಶುಪಾಲ ನೀತು ಸಂತೋಷ್, ನಗರ ಸಭೆ ನೋಡಲ್ ಇಂಜಿನಿಯರ್ ಸೋಮಸುಂದರಂ, ಸಂತೋಷ್ ಕುಮಾರ್ ಸೇರಿದಂತೆ ತಾಪಂ ಮತ್ತು ನಗರಸಭೆ ಸಿಬ್ಬಂದಿ, ಕಾಲೇಜು ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಇನ್ನಿತರರು ಪಾಲ್ಗೊಂಡಿದ್ದರು.

ನೀರಿನಲ್ಲಿ ಮುಳುಗಿ ಯುವಕ ಸಾವು

ಗ್ರಾಮದ ಯುವಕರಿಂದಲೇ ಕೊಲೆ: ಆರೋಪ

ಮಲ್ಕುಂಡಿ, ಏ.6– ಯುವಕನೊಬ್ಬ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಸಮೀಪದ ಹತ್ವಾಳ್‌ಕಟ್ಟೆಯಲ್ಲಿ ಸಂಭವಿಸಿದ್ದು, ಈತನನ್ನು ಅದೇ ಗ್ರಾಮದ ನಾಲ್ವರು ನೀರಿಗೆ ತಳ್ಳಿ ಹತ್ಯೆ ಮಾಡಿದ್ದಾರೆ ಎಂದು ಆತನ ತಂದೆ ದೂರಿದ್ದಾರೆ.



ಮಲ್ಕುಂಡಿ ಗ್ರಾಮದ ನಂದೀಶ್ ಎಂಬುವವರ ಪುತ್ರ ವಿನಯ್(19) ಸಾವಿಗೀಡಾದವರಾಗಿದ್ದು, ಈತನನ್ನು ಸೋಮಶೇಖರ್, ಮನು, ವಿಜಯ್ ಮತ್ತು ದಿನೇಶ್ ಎಂಬುವವರು ಹತ್ಯೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. 2 ದಿನದ ಹಿಂದೆ ಗ್ರಾಮದಲ್ಲಿ ಗ್ರಾಮದೇವತೆ ಹಬ್ಬ ನಡೆದ ವೇಳೆ ಸೋಮಶೇಖರ್ ಮತ್ತು ಮನು ಎಂಬುವರು ತಮ್ಮ ಕುಟುಂಬದವರೊಂದಿಗೆ ಗಲಾಟೆ ಮಾಡಿದ್ದರು. ಈ ಸಂಬಂಧ ಇಂದು (ಏ.6) ಬೆಳಗ್ಗೆ ಗ್ರಾಮದಲ್ಲಿ ಪಂಚಾಯಿತಿ ನಡೆದು ಮುಖಂಡರು ಎಲ್ಲರೂ ಅನ್ಯೋನ್ಯವಾಗಿರಬೇಕು ಎಂದು ಬುದ್ಧಿವಾದ ಹೇಳಿ ಕಳುಹಿಸಿದ್ದರು. ಆದರೆ ಇಂದು ಮಧ್ಯಾಹ್ನ ದಿನೇಶ್ ಎಂಬಾತ ನನ್ನ ಮಗ ವಿನಯ್‌ನನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಹತ್ವಾಳ್‌ಕಟ್ಟೆ ಕಡೆ ಹೋಗಿದ್ದಾನೆ. ಮಧ್ಯಾಹ್ನದ ವೇಳೆಗೆ ನೀರಿನಲ್ಲಿ ಮುಳುಗಿ ಸತ್ತಿದ್ದಾನೆ ಎಂಬ ವಿಚಾರ ತಿಳಿದಿದ್ದು, ಮಗನನ್ನು ಸೋಮಶೇಖರ್, ದಿನೇಶ್, ಮನು ಮತ್ತು ವಿಜಯ್ ಅವರುಗಳು ನೀರಿಗೆ ತಳ್ಳಿ ಹತ್ಯೆ ಮಾಡಿರಬಹುದು ಎಂದು ವಿನಯ್ ತಂದೆ ನಂದೀಶ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಡುಹಂದಿ ದಾಳಿ: ವ್ಯಕ್ತಿಗೆ ತೀವ್ರ ಗಾಯ




ಹೆಚ್.ಡಿ.ಕೋಟೆ, ಏ.6– ವಾಯು ವಿಹಾರಕ್ಕೆ ತೆರಳಿದ್ದ ವ್ಯಕ್ತಿ ಮೇಲೆ ಕಾಡುಹಂದಿ ದಾಳಿ ನಡೆಸಿ ತೀವ್ರ ಗಾಯಗೊಳಿಸಿರುವ ಘಟನೆ ಶನಿವಾರ ಬೆಳಗ್ಗೆ ನಡೆದಿದೆ.

ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಶಿವಮಲ್ಲು ಗಾಯಗೊಂಡವರು. ಈತ ಕಬಿನಿ ಎಡದಂಡೆ ನಾಲೆ ಮುಖ್ಯ ರಸ್ತೆಯ ಬಳಿ ವಾಯುವಿಹಾರ ಮಾಡುತ್ತಿದ್ದ ವೇಳೆ ಏಕಾಏಕಿ ದಾಳಿ ನಡೆಸಿದ ಕಾಡುಹಂದಿ ತೀವ್ರ ಗಾಯಗೊಳಿಸಿ ಅಲ್ಲಿಂದ ಪರಾರಿಯಾಗಿದೆ. ಈ ವೇಳೆ ಗಾಯಗೊಂಡು ಒದ್ದಾಡುತ್ತಿದ್ದ ಶಿವಮಲ್ಲುನನ್ನು ಕಂಡ ಗ್ರಾಮಸ್ಥರು ಆತನನ್ನು ಚಿಕಿತ್ಸೆಗಾಗಿ ಸರಗೂರಿನ ವಿವೇಕಾನಂದ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಬೀಚನಹಳ್ಳಿ ಗ್ರಾಮದ ನಿವಾಸಿ ಬಸವಣ್ಣ ಮಾತನಾಡಿ, ಈ ಘಟನೆಗೆ ನೀರಾವರಿ ಅಧಿಕಾರಿಗಳ ಬೇಜವಾಬ್ದಾರಿತನವೇ ಕಾರಣ. ಗ್ರಾಮದ ಸುತ್ತಮುತ್ತ ಗಿಡಗಂಟಿಗಳು ಬೆಳೆದಿರುವ ಹಿನ್ನೆಲೆಯಲ್ಲಿ ಕಾಡುಹಂದಿಗಳು, ಚಿರತೆಗಳ ಹಾವಳಿ ಹೆಚ್ಚಾಗಿದೆ. ಬೆಳೆದಿರುವ ಗಿಡಗಂಟಿ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಈಗಾಗಲೇ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಈಗಲಾದರೂ ನೀರಾವರಿ ಇಲಾಖೆ ಅಧಿಕಾರಿಗಳು ಗಿಡಗಂಟಿಗಳನ್ನು ತೆರವು ಮಾಡಬೇಕು. ಹಂದಿದಾಳಿಗೆ ಒಳಗಾಗಿರುವ ಶಿವಮಲ್ಲುವಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ನೀರಾವರಿ, ಅರಣ್ಯಾಧಿಕಾರಿಗಳನ್ನು ಒತ್ತಾಯಿಸಿದರು.

ಬಾಬೂಜಿ, ಅಂಬೇಡ್ಕರ್ ದಲಿತ ಸಮುದಾಯದ ಕಣ್ಣುಗಳು

ಪುರಸಭಾ ಸದಸ್ಯ, ನಟ ಅರ್ಜುನ್ ರಮೇಶ್ ಬಣ್ಣನೆ



ಗೋಪಾಲಪುರದಲ್ಲಿ ಡಾ.ಬಾಬು ಜಗಜೀವನರಾಂ ಜಯಂತಿ ನಡೆಯಿತು.

ತಿ.ನರಸೀಪುರ, ಏ.6– ಪಟ್ಟಣದ ಬಾಬು ಜಗಜೀವನರಾಂ ಭವನದಲ್ಲಿ ಬಾಬೂಜಿ ಅವರ ಪುತ್ಥಳಿ ನಿರ್ಮಿಸಿ ಅದ್ಧೂರಿಯಾಗಿ ಬಾಬೂಜಿ ಜಯಂತಿ ಆಚರಿಸಲಾಗುವುದು ಎಂದು ಪುರಸಭಾ ಸದಸ್ಯ ಹಾಗೂ ನಟ ಅರ್ಜುನ್ ರಮೇಶ್ ತಿಳಿಸಿದರು.

ತಾಲೂಕು ಬಾಬು ಜಗಜೀವನರಾಂ ಸಂಘದಿಂದ ಪಟ್ಟಣದ ಪುರಸಭೆ ವ್ಯಾಪ್ತಿಯ ಗೋಪಾಲಪುರದ ಜನಸಂಪರ್ಕ ಕೇಂದ್ರದಲ್ಲಿ ಆಯೋಜಿಸಿದ್ದ ಡಾ.ಬಾಬು ಜಗಜೀವನರಾಂ ಜಯಂತಿಯಲ್ಲಿ ಬಾಬೂಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಹಸಿರು ಕ್ರಾಂತಿ ಎಂದರೆ ಬಾಬೂಜಿಯವರು. ಬಾಬೂಜಿ ಹಾಗೂ ಡಾ.ಅಂಬೇಡ್ಕರ್ ದಲಿತ ಸಮುದಾಯದ 2 ಕಣ್ಣುಗಳಿದ್ದಂತೆ. ಆದರೆ ಕೆಲವರು ಕೇವಲ ಭಾಷಣ, ಕಾರ್ಯಕ್ರಮದಲ್ಲಿ ಮಾತ್ರ ಅವರ ಹೆಸರು ಬಳಸಿಕೊಳ್ಳುತ್ತಿರುವುದು ವಿಷಾದನೀಯ. ಅವರ ಆದರ್ಶ ಮತ್ತು ಅವರು ಹಾಕಿಕೊಟ್ಟ ಬುನಾದಿಯಲ್ಲಿ ನಾವು ನಡೆಯುತ್ತಿದ್ದೇವೆಯೇ ಎಂಬುದನ್ನು ಅವಲೋಕನ ಮಾಡಿಕೊಳ್ಳಬೇಕಿದೆ ಎಂದರು.


ಜಗಜೀವನರಾಂ ಪುತ್ರಿ ಮೂಲೆಗುಂಪು: ಪ್ರಸಕ್ತ ರಾಜಕೀಯ ಸನ್ನಿವೇಶದಲ್ಲಿ ಜಗಜೀವನರಾಂ ಪುತ್ರಿ ಮೀರಾ ಕುಮಾರ್ ಅವರೇ ಮೂಲೆಗುಂಪಾಗಿದ್ದಾರೆ. ಜನಾಂಗದಲ್ಲಿ ಒಗ್ಗಟ್ಟಿಲ್ಲದಿರುವುದೇ ಇದಕ್ಕೆ ಕಾರಣ. ಜನಾಂಗದ ಪರವಾಗಿರುವ ಯಾರಾದರೂ ಮೀರಾಕುಮಾರ್ ಎಲ್ಲಿದ್ದಾರೆ ಎಂದು ಕೇಳಿದ್ದಾರಾ. ಇದೇ ಪರಿಸ್ಥಿತಿ ಮುಂದುವರೆದರೆ ಮುಂದೊಂದು ದಿನ ಎಡಗೈ ಜನಾಂಗ ಇದೆಯೇ ಎಂದು ಹುಡುಕುವ ಪರಿಸ್ಥಿತಿ ನಿರ್ಮಾಣವಾಗುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ ಎಂದು ಆತಂಕ ವ್ಯಕ್ತಪಡಿಸಿದ ಅವರು, ರಾಜಕೀಯ ಮುಖಂಡರು, ಜನಾಂಗದ ನಾಯಕರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಇಡೀ ಸಮಾಜದ ದಾರಿ ತಪ್ಪಿಸುತ್ತಿದ್ದಾರೆ. ಸಮಾಜದ ಬಾಂಧವರು ಜಾಗೃತರಾಗಿ, ಸಂಘಟಿತರಾಗುವ ಮೂಲಕ ಶಿಕ್ಷಣ ಪಡೆಯಬೇಕೆಂದು ಮನವಿ ಮಾಡಿದರು.

ಎಡಗೈ ಸಮುದಾಯಕ್ಕೆ ಅನ್ಯಾಯ: ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ದಲಿತ ಸಮುದಾಯಕ್ಕೆ ಅದರಲ್ಲೂ ವಿಶೇಷವಾಗಿ ಎಡಗೈ ಜನಾಂಗಕ್ಕೆ ಅನ್ಯಾಯವಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ಅರ್ಜುನ್, ಯಾವುದೇ ಪಕ್ಷದಿಂದಲೂ ಸಮುದಾಯದವರಿಗೆ ಟಿಕೆಟ್ ನೀಡಲಾಗಿಲ್ಲ. ಯಾವುದೇ ರಾಜಕೀಯ ಪಕ್ಷಗಳು 1.75 ಲಕ್ಷ ಮತದಾರರಿರುವ ನಮ್ಮ ಸಮುದಾಯವನ್ನು ಗುರುತಿಸಿ ರಾಜಕೀಯ ಸ್ಥಾನಮಾನ ನೀಡಿಲ್ಲ. ಮುಂಬರುವ ಜಿಪಂ ಹಾಗೂ ತಾಪಂ ಚುನಾವಣೆಯಲ್ಲಿ ಸಮಾಜವನ್ನು ಕಡೆಗಣಿಸದೇ ಜೊತೆಯಲ್ಲಿ ಕೊಂಡೊಯ್ಯುವ ಮೂಲಕ ರಾಜಕೀಯವಾಗಿ ಬೆಳೆಯಲು ಅವಕಾಶ ಮಾಡಿಕೊಡುವಂತೆ ಅವರು ಮನವಿ ಮಾಡಿದರು.

ಮುಂದಿನ ಪೀಳಿಗೆಗೆ ಅರಿವು ಮೂಡಿಸಿ: ಡಾ.ಬಾಬೂಜಿ ಅವರ ಬಗ್ಗೆ ಮುಂದಿನ ಪೀಳಿಗೆಗೆ ತಿಳಿಕೊಡುವ ಅವಶ್ಯಕತೆ ಇದೆ ಕೇವಲ ಫೋಟೋಗೆ ಹಾರ ಹಾಕಿ ಪೂಜೆ ಸಲ್ಲಿಸುವ ಸಂದೇಶವನ್ನು ಯುವ ಪೀಳಿಗೆಗೆ ನೀಡದೇ ಜಗಜೀವನರಾಂ ಕೊಡುಗೆ ಏನು ಮತ್ತು ಆದರ್ಶಗಳನ್ನು ತಿಳಿಸಿಕೊಡುವ ಕೆಲಸ ಮಾಡಬೇಕಿದೆ. ಇಲ್ಲದಿದ್ದರೆ ಮುಂದಿನ ಪೀಳಿಗೆ ಮಹನೀಯರನ್ನು ಮರೆಯುವಂತಹ ಪರಿಸ್ಥಿತಿ ಬರಲಿದೆ ಎಂದರು.

ಕಾರ್ಯಕ್ರಮದಲ್ಲಿ ಬಾಬು ಜಗಜೀವನ್‌ರಾಂ ಸಂಘದ ತಾಲೂಕು ಅಧ್ಯಕ್ಷ ಪುಟ್ಟಯ್ಯ, ತಾಪಂ ಮಾಜಿ ಸದಸ್ಯ ಬಿ.ಎಲ್.ಮಹದೇವು, ಸಿ.ಡಿ.ವೆಂಕಟೇಶ್, ರಾಜೂಗೌಡ, ರಾಜಪ್ಪ, ಹೊಸಹಳ್ಳಿ ಚಿನ್ನಸ್ವಾಮಿ, ಶಂಭಯ್ಯ, ಕುಪ್ಯಾ ರಾಜೇಶ್, ಕಳ್ಳೀಪುರ ನಾರಾಯಣ ಮತ್ತಿತರರಿದ್ದರು.

ಗೋಪಾಲ್ ನಿಧನ



ಹುಣಸೂರು, ಏ.6– ನಗರದ ನಡುಬೀದಿ ನಿವಾಸಿ, ಶ್ರೀಕೊಲನೂರು ಮಾರಮ್ಮ ಸೇವಾ ಟ್ರಸ್ಟ್ ಗೌರವಾಧ್ಯಕ್ಷ ಗೋಪಾಲ್(62) ಶುಕ್ರವಾರ ರಾತ್ರಿ ನಿಧನರಾದರು. ಮೃತರು ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಂಗಳೂರಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

2ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷಗಳು ಕಳೆದರೂ ಸದಾ ನಿಮ್ಮ ನೆನಪಿನಲ್ಲೇ ಇರುವ
ಸುಶೀಲಾ ಮತ್ತು ಕುಟುಂಬವರ್ಗದವರು, ಗಿರಿದರ್ಶಿನಿ ಬಡಾವಣೆ, ಮೈಸೂರು
ನಾಗೇಂದ್ರ ಎಸ್.

ವಿದ್ಯಾ ಪ್ರಚಾರ ಸಂಘ (ರಿ)

ಪಾಂಡವಪುರ ಟೌನ್, ಮಂಡ್ಯ ಜಿಲ್ಲೆ-571434

ವಿಜಯ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ 2024-25ನೇ ಸಾಲಿನಲ್ಲಿ ಈ ಕೆಳಕಂಡ ಖಾಲಿ ಇರುವ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಂಸ್ಥೆಯ ಹೆಸರು	ಖಾಲಿ ಹುದ್ದೆಗಳು ವಿಷಯ	ಹುದ್ದೆಸಂಖ್ಯೆ	ವಿದ್ಯಾರ್ಹತೆ
ವಿಜಯ ಪೂರ್ವ ಪ್ರಾಥಮಿಕ ಶಾಲೆ	ಶಿಕ್ಷಕರು	05	ಪಿಯುಸಿ ಅಥವಾ ಪದವಿ ಜೊತೆಗೆ ಎನ್‌ಟಿಟಿ/ಎನ್‌ಎಸ್‌ಟಿ
ವಿಜಯ ಪಬ್ಲಿಕ್ ಶಾಲೆ (CBSE 1 ರಿಂದ 10 ನೇ ತರಗತಿ)	ಕನ್ನಡ	01	ಬಿ.ಎ., ಬಿ.ಇಡಿ., (ಪದವಿಯಲ್ಲಿ ಐಚ್ಛಿಕ ಕನ್ನಡ ವ್ಯಾಸಂಗ ಮಾಡಿರಬೇಕು)
		01	ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಜೊತೆಗೆ ಬಿ.ಇಡಿ ಮಾಡಿರಬೇಕು
	ಇಂಗ್ಲೀಷ್	01	ಬಿ.ಎ., ಬಿ.ಇಡಿ., (ಪದವಿಯಲ್ಲಿ ಐಚ್ಛಿಕ ಇಂಗ್ಲಿಷ್ ವ್ಯಾಸಂಗ ಮಾಡಿರಬೇಕು)
		01	ಇಂಗ್ಲೀಷ್‌ನಲ್ಲಿ ಸ್ನಾತಕೋತ್ತರ ಪದವಿ ಜೊತೆಗೆ ಬಿ.ಇಡಿ ಮಾಡಿರಬೇಕು
	ಹಿಂದಿ	02	ಪದವಿ ಜೊತೆಗೆ ಹಿಂದಿಯಲ್ಲಿ ಸ್ಪೇಷಲ್ ಬಿ.ಇಡಿ. ಮಾಡಿರಬೇಕು.
	ಸಮಾಜ ವಿಜ್ಞಾನ	01	ಬಿ.ಎ., ಬಿ.ಇಡಿ. (ಪದವಿಯಲ್ಲಿ ಐಚ್ಛಿಕ ಇತಿಹಾಸ ವ್ಯಾಸಂಗ ಮಾಡಿರಬೇಕು)
		01	ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಜೊತೆಗೆ ಬಿ.ಇಡಿ ಮಾಡಿರಬೇಕು
	ವಿಜ್ಞಾನ	01	ಬಿ.ಎಸ್ಸಿ(CBZ)., ಬಿ.ಇಡಿ.
		01	ಪ್ರಾಣಿಶಾಸ್ತ್ರ ಅಥವಾ ಸಸ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಜೊತೆಗೆ ಬಿ.ಇಡಿ.
		01	ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಜೊತೆಗೆ ಬಿ.ಇಡಿ.
		01	ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಜೊತೆಗೆ ಬಿ.ಇಡಿ.
	ಗಣಿತ	01	ಬಿ.ಎಸ್ಸಿ(PCM)., ಬಿ.ಇಡಿ.
		01	ಗಣಿತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಜೊತೆಗೆ ಬಿ.ಇಡಿ.
	ದೈಹಿಕ ಶಿಕ್ಷಣ ಶಿಕ್ಷಕರು	01	ಬಿ.ಪಿ.ಇಡಿ., ಅಥವಾ ಎಂ.ಪಿ.ಇಡಿ.
	ಯೋಗ	01	ಡಿಪ್ಲೋಮಾ ಇನ್ ಯೋಗ
	ನೃತ್ಯ	01	ಡಿಪ್ಲೋಮಾ ಇನ್ ನೃತ್ಯ
	ಚಿತ್ರಕಲೆ	01	ಡಿಪ್ಲೋಮಾ ಇನ್ ಪೈನ್ ಆರ್ಟ್ಸ್
ವಿಜಯ ಪ್ರೌಢಶಾಲೆ	ಸಮಾಜ ವಿಜ್ಞಾನ	01	ಬಿ.ಎ., ಪದವಿ ಜೊತೆಗೆ ಬಿ.ಇಡಿ., (ಪದವಿ0ಯಲ್ಲಿ ಐಚ್ಛಿಕ ಇತಿಹಾಸ ವ್ಯಾಸಂಗ ಮಾಡಿರಬೇಕು ಅರೆಕಾಲಿಕ)
ವಿಜಯ ಪಿ.ಯು ಕಾಲೇಜು	Computer Science	01	B.E (CS) ಅಥವಾ MCA. ಅಥವಾ M.Sc in CS (ಅರೆಕಾಲಿಕ-14 ಗಂಟೆ)
ವಿಜಯ ಪ್ರ.ದ.ಕಾಲೇಜು	Computer Science	01	B.E (CS) ಅಥವಾ MCA., ಅಥವಾ M.Sc in CS (ಅರೆಕಾಲಿಕ-12 ಗಂಟೆ)
	ಗ್ರಂಥಪಾಲಕರು	01	M.Lib. Scie.,

- ಅಭ್ಯರ್ಥಿಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆ ಜೊತೆಗೆ ಸೇವಾ ಅನುಭವವಿದ್ದಲ್ಲಿ ಆದ್ಯತೆ ನೀಡಲಾಗುವುದು.
- ಅರ್ಜಿ ಸಲ್ಲಿಸಲು ಆಸಕ್ತಿಯಿರುವ ಅಭ್ಯರ್ಥಿಗಳು ಪ್ರಕಟವಾದ ದಿನದಿಂದ 10 ದಿನಗಳೊಳಗೆ ಸ್ವವಿವರಗಳು ಮತ್ತು ದೃಢೀಕರಿಸಿದ ದಾಖಲಾತಿಗಳೊಂದಿಗೆ ಅರ್ಜಿಯನ್ನು ಗೌರವ ಕಾರ್ಯದರ್ಶಿರವರು, ವಿದ್ಯಾ ಪ್ರಚಾರ ಸಂಘ (ರಿ.), ಪಾಂಡವಪುರ ಟೌನ್, ಮಂಡ್ಯ ಜಿಲ್ಲೆ-571434 ಈ ವಿಳಾಸಕ್ಕೆ ಕಳುಹಿಸಿಕೊಡಲು ತಿಳಿಸಿದೆ. (G-Mail- vpssecretary@gmail.com) ಮೊ.7406922692, 8861351258, 9164891811
- ವಿಜಯ ಪಬ್ಲಿಕ್ ಶಾಲೆ (CBSE 1 ರಿಂದ 10ನೇ ತರಗತಿವರೆಗೆ) ಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ದಿನಾಂಕ:19-04-2024 ರ ಶುಕ್ರವಾರ ಬೆಳಗ್ಗೆ 10.30 ಗಂಟೆಗೆ ಹಾಗೂ ವಿಜಯ ಪೂರ್ವ ಪ್ರಾಥಮಿಕ ಶಾಲೆ, ವಿಜಯ ಪ್ರೌಢಶಾಲೆ, ವಿಜಯ ಪದವಿ ಪೂರ್ವ ಕಾಲೇಜು ಮತ್ತು ವಿಜಯ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ದಿನಾಂಕ:20-04-2024 ಶನಿವಾರದಂದು ಬೆಳಗ್ಗೆ 10.30 ಗಂಟೆಗೆ ಸಂದರ್ಶನ ನಡೆಸಲಾಗುವುದು.

ಸಹಿ/- ಅಧ್ಯಕ್ಷರು ಸಹಿ/- ಗೌರವ ಕಾರ್ಯದರ್ಶಿ

